# ಹೊಸ ಮನುಷ್ಯ

ಸಮಾಜವಾದಿ ಮಾಸಿಕ

ಅಕ್ಟೋಬರ್, ೨೦೧೩ | ಸಂಪುಟ: ೩ ಸಂಚಿಕೆ ೩

ಸಂಪಾದಕ : ಡಿ.ಎಸ್.ನಾಗಭೂಷಣ

**ಚಂದಾ :** ವಾರ್ಷಿಕ: ರೂ. ೧೫೦/–(ವ್ಯಕ್ತಿಗಳಿಗೆ) ರೂ.೨೫೦/–(ಸಂಸ್ಥೆ/ಗ್ರಂಥಾಲಯಗಳಿಗೆ) ಬಿಡಿ ಪ್ರತಿ: ರೂ.೧೫/–


**ವಿಳಾಸ:** ಎಚ್.ಐ.ಜಿ.–೫, 'ನುಡಿ', ಕಲ್ಲಳ್ಳಿ ಬಡಾವಣೆ, ವಿನೋಬ ನಗರ, ಶಿವಮೊಗ್ಗ–೫೭೭ ೨೦೪

**ದೂ:** ೦೮೧೮೨–೨೪೮೫೭೪ **ಸಂಚಾರಿ:** ೯೪೪೯೨ ೪೨೨೮೪ ***ಈ ಮೇಲ್:*** dsnagabhushana@gmail.com


## ಸಂಪಾದಕರ ಟಿಪ್ಪಣಿಗಳು

ಪ್ರಿಯ ಓದುಗರೇ,

ಕೊನೆಗೂ ಬಿಜೆಪಿ ನರೇಂದ್ರ ಮೋದಿಯವರನ್ನು ಮುಂದಿನ ಚುನಾವಣೆಗಳಲ್ಲಿ ತನ್ನ ಪ್ರಧಾನ ಮಂತ್ರಿ ಅಭ್ಯರ್ಥಿಯೆಂದು ಘೋಷಿಸಿದೆ. ಅಡ್ವಾಣಿ, ಮುರಳಿ ಮನೋಹರ ಜೋಷಿ, ಜಸ್ವಂತ್ ಸಿಂಗ್, ಯಶವಂತ್ ಸಿನ್ಹಾ ಮುಂತಾದ ಹಿರಿಯ ನಾಯಕರ ಅಭಿಪ್ರಾಯಗಳನ್ನು ಲೆಕ್ಕಿಸದೆ ಈ ಚುನಾವಣಾ ಜೂಜಿಗೆ ಮುಂದಾಗಿದೆ. ಇದರ ಹಿಂದೆ, ಪಕ್ಷದ ಕೆಳ ಹಂತದ ಕಾರ್ಯಕರ್ತರ ಒತ್ತಡವಿರುವುದು ನಿಜ. ಆದರೆ ಅದಕ್ಕಿಂತ ಮುಖ್ಯವಾಗಿ ಎದ್ದು ಕಂಡದ್ದು ಆರ್.ಎಸ್.ಎಸ್., ವಿ.ಹೆಚ್.ಪಿ. ಮುಂತಾದ ರಾಜಕೀಯೇತರವೆಂದು ಹೇಳಲಾಗುವ ಶಕ್ತಿಗಳ ಒತ್ತಡ. ಹಿಂದೆ ವಾಜಪೇಯಿಯವರನ್ನು ನಮ್ಮವರೆಂದು ನಂಬಿ ಮೋಸ ಹೋದೆವೆಂದು ಭಾವಿಸಿರುವ ಈ ಹಿಂದುತ್ವ ಶಕ್ತಿಗಳು ತಮ್ಮ ಸಿದ್ಧಾಂತಗಳ ನಿಜವಾದ ವಕ್ತಾರನು ಮೋದಿ ರೂಪದಲ್ಲಿ ಮೂಡಿ ನಿಂತಿದ್ದು; ಇದೇ ಭಾರತದಾದ್ಯಂತ ತಮ್ಮ ಕಾರ್ಯಕ್ರಮಗಳನ್ನು ಜಾರಿಗೊಳಿಸಲು ಅತ್ಯುತ್ತಮ ಅವಕಾಶ ಎಂದು ಭಾವಿಸಿ ಈ ಅಭ್ಯರ್ಥಿತನವನ್ನು ಆಗ್ರಹಿಸಿ ಪಡೆದಿವೆ. ಈ ದೃಷ್ಟಿಯಿಂದ ಬ್ರಹ್ಮಾಂಡ ಭ್ರಷ್ಟಾಚಾರ ಮತ್ತು ಕೆಟ್ಟ ಆಡಳಿತದ ಭಾರಗಳಿಂದ ಕುಸಿಯುತ್ತಿರುವ ಕಾಂಗ್ರೆಸ್ಸಿಗೆ ಮುಂದಿನ ಚುನಾವಣೆಗಳ ಹೊತ್ತಿಗೆ ಉಸಿರಾಡಲು ಒಂದು ಅವಕಾಶ ದೊರೆತಂತಾಗಿದೆ. ಅದೆಂದರೆ, ಮುಂದಿನ ಚುನಾವಣೆಗಳು ನಡೆಯುವುದು ಸ್ಪಷ್ಟವಾಗಿ ಫ್ಯಾಸಿಸ್ಟ್ ಮತ್ತು ಪ್ರಜಾಸತ್ತಾತ್ಮಕ ಶಕ್ತಿಗಳ ನಡುವೆ ಎಂದು ಬಿಂಬಿಸುವ ಅವಕಾಶ. ತನ್ನ ದುರಾಡಳಿತದಿಂದ ಬೇಸತ್ತಿರುವ ಕಾರಣದಿಂದಾಗಿಯಷ್ಟೇ ಬಿಜೆಪಿಯತ್ತ ನೋಡುತ್ತಿರುವವರನ್ನು ಅಲ್ಲಿಂದ ಸೆಳೆಯಲು ಅದು ಇದನ್ನೊಂದು ಆಧಾರ ಮಾಡಿಕೊಳ್ಳಬಹುದು. ಸದ್ಯಕ್ಕೆ ಅದು ಅತ್ತ ಇರಲಿ.

ಮೋದಿಯವರ 'ಶೋಭಾ ಯಾತ್ರೆ' ಊರಿಗೆ ಮುನ್ನವೇ ಅಬ್ಬರದಿಂದ ದಾಂಗುಡಿಯಿಟ್ಟು ಮುಂದೆ ಸಾಗುತ್ತಿದೆ; ಅದು ತುದಿ ಮುಟ್ಟುವ ಮುನ್ನವೇ ತನ್ನೆಲ್ಲ ರಭಸ ಕಳೆದುಕೊಂಡು ಮುಗ್ಗರಿಸಿ ಬೀಳುವ ಎಲ್ಲ ಸಾಧ್ಯತೆಗಳೊಂದಿಗೆ. ಮೋದಿ ಪ್ರತಿನಿಧಿಸುತ್ತಿರುವ ರಾಜಕಾರಣವೇ ಅಂತಹದ್ದು. ಅದು ಮಾರಿ ಹಬ್ಬದ ಆವೇಶವನ್ನೇ ನಂಬಿರುವಂತಹದ್ದು. ಮೋದಿ ವಿರೋಧಿ ವೇದಿಕೆಯಲ್ಲಿರುವ ಶಕ್ತಿಗಳು ಇಂದು ರಾಷ್ಟ್ರವನ್ನುದ್ದೇಶಿಸಿ ಮುಖ್ಯವಾಗಿ ಮಾತಾಡಬೇಕಾದದ್ದು ಈ ಬಗ್ಗೆ; ೨೦೦೨ರ ಕೋಮು ಹಿಂಸೆಯ ಬಗ್ಗೆಯಲ್ಲ. ಅದನ್ನು ಮತ್ತು ಇದರಲ್ಲಿ ಮೋದಿಯ ಪಾತ್ರವಿಲ್ಲ ಎಂಬುದು ಈಗಾಗಲೇ ಹಲವು ವಿಚಾರಣೆಗಳಿಂದ ಸ್ಪಷ್ಟವಾಗಿದೆ ಎಂಬ ಬಿಜೆಪಿಯವರ ಪ್ರತಿವಾದವನ್ನು ಕೇಳಿ ಕೇಳಿ ಜನ ರೋಸಿ ಹೋಗಿದ್ದಾರೆ. ಮೋದಿ ಗುಜರಾತ್ ನರಹತ್ಯೆಗೆ ನೇರವಾಗಿ ಕಾರಣರಾಗಿದ್ದರೆ, ಈಗಲೂ ನ್ಯಾಯಾಲಯಗಳ ಮುಂದಿರುವ ಪ್ರಕರಣಗಳಿಂದ ಅದು ಸಾಬೀತಾದಲ್ಲಿ ಆತ ತನ್ನ ಇತರ ಸಹೋದ್ಯೋಗಿಗಳಂತೆ ಸೆರೆಮನೆ ಸೇರುವುದು ನಿಶ್ಚಿತ. ಹಾಗಾಗಿ ಆ ವಿಷಯವನ್ನು ಸದ್ಯಕ್ಕೆ ನ್ಯಾಯಾಂಗದ ಇತ್ಯರ್ಥಕ್ಕೆ ಬಿಟ್ಟು ಮೋದಿಯ ರಾಜಕೀಯ ನಾಯಕತ್ವದ ಹೆಗ್ಗುರುತುಗಳೆಂದು ಹೊಗಳಲಾಗುತ್ತಿರುವ ದೃಢ ಆಡಳಿತ ಶೈಲಿ ಮತ್ತು ಅಭೂತಪೂರ್ವ 'ಅಭಿವೃದ್ಧಿ' ಸ್ವರೂಪಗಳತ್ತ ಗಮನ ಹರಿಸುವುದು ಒಳ್ಳೆಯದು.

ಗುಜರಾತ್ ರಾಜಕಾರಣವನ್ನೇ ನೋಡಿ. ಅಲ್ಲಿ ಮೋದಿಯ ಪಕ್ಷದಲ್ಲಿ ಅವರ ಹೊರತಾಗಿ ಇನ್ನಾವ ನಾಯಕನೂ ಇಲ್ಲದಂತೆ ಅಲ್ಲಿ ಅವರು ನಾಯಕತ್ವವನ್ನು ನಿರ್ನಾಮ ಮಾಡಿದ್ದಾರೆ. ಇದಕ್ಕೆ ಬಳಸಿದ ಮಾರ್ಗಗಳಲ್ಲಿ ಕೆಲವು ಭಯಾನಕವಾಗಿವೆ. ಉದಾಹರಣೆಗೆ ಮೋದಿ ವಿರುದ್ಧ ತಿರುಗಿ ಬಿದ್ದರೆಂಬ ಶಂಕೆಗಷ್ಟೇ ಒಳಗಾದ ರಾಜ್ಯದ ಆಗಿನ ಗೃಹ ಮಂತ್ರಿ ಮೆಹ್ತಾ ಕೊಲೆಯನ್ನು ೧೦ ವರ್ಷಗಳ ನಂತರವೂ ಇನ್ನೂ ಭೇದಿಸಲಾಗಿಲ್ಲ. ೨೦೦೨ರ ಹತ್ಯಾಕಾಂಡದಲ್ಲಿ ಭಾಗಿಯಾದವರೆಂದು ಈಗಾಗಲೇ ಸಾಬೀತಾಗಿರುವ ಮೋದಿಯವರ ಮಂತ್ರಿಮಂಡಳದ ಸಹೋದ್ಯೋಗಿಗಳು ಸೇರಿದಂತೆ ಅವರ ಅನೇಕ ಸಹಚರರು ಹಾಗೂ ಯಾವ ರಾಜ್ಯದಲ್ಲೂ ಇಲ್ಲದಷ್ಟು ಸಂಖ್ಯೆಯಲ್ಲಿ(ನಲವತ್ತಕ್ಕೂ ಹೆಚ್ಚು?) ಈ ರಾಜ್ಯದ ಉನ್ನತ ಪೋಲೀಸ್ ಅಧಿಕಾರಿಗಳು ವಿವಿಧ ಕ್ರಿಮಿನಲ್ ಅಪರಾಧಗಳ ಮೇಲೆ ಜೈಲಿನಲ್ಲಿದ್ದಾರೆ. ಇವರಲ್ಲಿ ಒಬ್ಬರು ಈಗಾಗಲೇ ತಮ್ಮ ಮೇಲಿನ ಅಪರಾಧಗಳೆಲ್ಲವೂ ಮೋದಿ ಆಡಳಿತದ ಆದೇಶದಂತೆ ನಡೆದುದವು ಎಂದು ಹೇಳಿ ಸೇವೆಗೆ ರಾಜೀನಾಮೆಯನ್ನು ನೀಡಿದ್ದಾರೆ.

ಮೋದಿ ಪಕ್ಷದ ಚುನಾವಣಾ ಪ್ರಚಾರ ಸಮಿತಿ ಅಧ್ಯಕ್ಷರಾಗುತ್ತಿದ್ದಂತೆ ಮುಸ್ಲಿಮರನ್ನು ಗುರಿಯಾಗಿಟ್ಟುಕೊಂಡ ಹುಸಿ ಗುಂಡಿನ ಕಾಳಗಗಳ ರಾಜಕೀಯ ಆಯೋಜಕನೆಂದೇ ಕುಪ್ರಸಿದ್ಧಿ ಪಡೆದು ಜೈಲು ಸೇರಿದ್ದ ಮಾಜಿ ಸಚಿವ ಅಮಿತ್ ಷಾಗೆ ಜಾಮೀನು ಕೊಡಿಸಿ ಆತನಿಗೆ ಉತ್ತರ ಪ್ರದೇಶದಲ್ಲಿನ ಚುನಾವಣಾ ಜವಾಬ್ದಾರಿ ವಹಿಸಲಾಗಿದೆ. ಆತ ಉತ್ತರ ಪ್ರದೇಶಕ್ಕೆ ಕಾಲಿಟ್ಟ ಕೆಲವೇ ದಿನಗಳಲ್ಲಿ ಮುಝಾಫರ್ ನಗರದಲ್ಲಿ ಕೋಮು ಬೆಂಕಿ ಹೊತ್ತಿ ಉರಿದು ಸುಮಾರು ೫೦ ಜನ ಹತರಾಗಿ ಸಾವಿರಾರು ಜನ ನಿರಾಶ್ರಿತರಾಗಿದ್ದಾರೆ. ಈ ಬೆಂಕಿಯಲ್ಲಿ ತನ್ನ ಚುನಾವಣಾ ಮೈ ಕಾಯಿಸಿಕೊಳ್ಳಲು ಹೋದ ಯಾದವ ಅಪ್ಪ–ಮಗ ಮೈಸುಟ್ಟುಕೊಂಡು ಮಾಧ್ಯಮಗಳ ಮುಂದೆ ಮುಲಾಮು ಹಚ್ಚಿಕೊಂಡು ನರಳುತ್ತಿರುವುದು ಬೇರೆಯೇ ವಿಷಯ.

ಮುಸ್ಲಿಮರ ತುಷ್ಟೀಕರಣದ ಬಗ್ಗೆ *ಮಿಂಯಾ ಮುಷ್ರಾಫ್*, *ಮೌಲ್ವಿ ಮುಲಾಯಂ*, *ಸೆಕ್ಯುಲರಿಸಂನ ಬುರ್ಖಾ* ಮುಂತಾದ ಪ್ರಚೋದನಕಾರಿ ಶಬ್ದ ಪ್ರಯೋಗಗಳ ಮೂಲಕ ಕಾಂಗ್ರೆಸ್ಸನ್ನು ಕಿಚಾಯಿಸುತ್ತಿದ್ದ ಮೋದಿ ಈಗ ಗುಜರಾತ್‌ನ ಹೊರಗೆ ಯಶಸ್ವಿಯಾಗಲು ಮುಸ್ಲಿಂ ಮತದಾರರ ಸಹಾನುಭೂತಿ ಅನಿವಾರ್ಯ ಎಂದು ಅರಿತಂತಿದೆ. ಈತ ಈಗ ಗುಜರಾತ್‌ನಲ್ಲಿನ ಕೆಲವು ಮುಸ್ಲಿಂ ಉದ್ಯಮಿಗಳು ಮತ್ತು ಆಯ್ದ ಕೆಲವು ಪ್ರತಿಷ್ಠಿತರನ್ನು ಓಲೈಸಿಕೊಂಡು ಅವರ ಮೂಲಕ ತನ್ನ ಪ್ರಚಾರ ಸಭೆಗಳಿಗೆ ಮುಸ್ಲಿಮರನ್ನು ಸೇರಿಸುವ ಯತ್ನದಲ್ಲಿದ್ದಾರೆ. ಅಷ್ಟೇ ಅಲ್ಲ, ತನಗೆ ಈಗ ಮುಸ್ಲಿಮರ ಬೆಂಬಲವೂ ದೊರಕತೊಡಗಿದೆ ಎಂಬುದನ್ನು ದೇಶಕ್ಕೆ ತೋರಿಸಲು ಈ ಸಭೆಗಳಿಗೆ ಮುಸ್ಲಿಮರು ತಮ್ಮ ಟೋಪಿ ಮತ್ತು ಬುರ್ಖಾಗಳೊಂದಿಗೆ ಬರುವಂತೆ ಕರೆಕೊಟ್ಟಿದ್ದಾರಲ್ಲದೆ, ತಮ್ಮ ಪಕ್ಷದ ವತಿಯಿಂದ ಸಾವಿರಾರು ಟೋಪಿ, ಬುರ್ಖಾಗಳನ್ನೂ ಹಂಚುವ ವ್ಯವಸ್ಥೆ ಮಾಡಿದ್ದಾರೆ. ಇದು 'ಹುಸಿ ಸೆಕ್ಯಲರಿಸಂ' ವಿರುದ್ಧದ ಈತನ ನಿಜ ಸೆಕ್ಯಲರಿಸಂ ಕಾರ್ಯಾಚರಣೆಯ ವೈಖರಿ!

(೧೫ನೇ ಪುಟಕ್ಕೆ

## ನಿಮ್ಮ ಪತ್ರ

ಪ್ರಿಯ ಸಂಪಾದಕರೇ,

'ಹೊಸ ಮನುಷ್ಯ'ದ ಸಂಚಿಕೆಗಳನ್ನು, ನಿರ್ದಿಷ್ಟವಾಗಿ ವಿಶೇಷ ಸಂಚಿಕೆಯನ್ನು ವಿವರವಾಗಿ ಓದಿ ಸಂತೋಷಪಟ್ಟಿರುವೆ. ವಿಶೇಷಾಂಕದ ನಿಮ್ಮ ಸಂಪಾದಕೀಯ, ಸವಿತಾ ಅವರ ಕಿಷನ್ ಪಟ್ನಾಯಕ್ ಕುರಿತ ಬರಹ ಹಾಗೂ ಹಲವು ಸಮಾಜವಾದಿಗಳ ಸಂದರ್ಶನ ಮತ್ತು ಪರಿಚಯ ಲೇಖನಗಳು ನನಗೆ ಮೆಚ್ಚಿಗೆಯಾದವು.

ಕರ್ನಾಟಕದಲ್ಲಿ ಸಮಾಜವಾದಿ ಚಿಂತನೆ ಉಳಿದು ಬೆಳೆಯಲು ನಿಮ್ಮಂತಹವರು ಹೆಚ್ಚು ಕಾಲ ಬಾಳಿ ಬದುಕಬೇಕು. ಹಾಗಾಗಿ ಹಿಂದೊಮ್ಮೆ ನಿಮಗೆ ಹೇಳಿದ್ದ 'ನೀವು ನಿಮ್ಮ ದೇಹಾರೋಗ್ಯ ಕೆಡದಂತಹ ಜೀವನ ಶೈಲಿಯನ್ನು ಅಳವಡಿಸಿಕೊಳ್ಳಿ' ಎಂಬ ಮಾತನ್ನು ಈಗ ಮತ್ತೊಮ್ಮೆ ಪ್ರಬಲವಾಗಿ ಹೇಳಬಯಸುವೆ.

–**ಡಾ. ಎ.ಎನ್. ನಾಗರಾಜ್**, ಭೀಮನಕಟ್ಟೆ.

ವಿಶೇಷಾಂಕ ನಮ್ಮ ನಿರೀಕ್ಷೆಯನ್ನೂ ಮೀರಿ ಒಳಹೂರಣ ಮತ್ತು ಅಚ್ಚುಕಟ್ಟು ಎರಡರಲ್ಲೂ ಗುಣಾತ್ಮಕತೆಯನ್ನು ಮೆರೆದು ಹೊರಬಂದಿದೆ. ರಾಜೇಶ್ವರಿ ತೇಜಸ್ವಿಯವರೊಂದಿಗೆ ಮಾತುಕತೆ ಮತ್ತು ನಾಗವೇಣಿಯವರ ವಿಲಕ್ಷಣ ಕಥೆ ಗಮನ ಸೆಳೆಯುವಂತಿದ್ದವು. ರಾಜೇಂದ್ರ ಚೆನ್ನಿಯವರು ಕನ್ನಡ ಸಾಹಿತ್ಯವನ್ನು 'ಮೌಲ್ಯ'ಮಾಪನ ಮಾಡಿರುವ ಬಗೆ ಹೊಸದೆನ್ನಿಸುವುದಾದರೂ, ವಿವಾದಾಸ್ಪದವಾದುದು. ಪ್ರೊ. ಬಿ.ಕೃಷ್ಣಪ್ಪ ನೆನಪಿನ ಮಾಲೆ ಪರೋಕ್ಷವಾಗಿ ಇಂದಿರಾ ಕೃಷ್ಣಪ್ಪನವರ ಬದುಕಿನ ಏಳುಬೀಳುಗಳನ್ನೂ, ಸೂಕ್ಷ್ಮಗಳನ್ನೂ ನಿರೂಪಿಸುತ್ತಾ ಕುತೂಹಲ ಹುಟ್ಟಿಸುವಂತಿದೆ.

–**ಎಂ. ನಾಗರಾಜು**, ಮೈಸೂರು

ನಾನು ಪತ್ರಿಕೆ ಆರಂಭವಾದಾಗಿನಿಂದಲೂ ಪ್ರತಿ ಸಂಚಿಕೆಯನ್ನೂ ವಿವರವಾಗಿ ಓದುತ್ತಿರುವೆ. ಈ ಸಲದ ವಿಶೇಷ ಸಂಚಿಕೆಯನ್ನು ನೋಡಿ ನನಗನ್ನಿಸಿದ್ದು, ನೀವು ನಿಮ್ಮ ಸಾಹಿತ್ಯ ಕೃತಿಗಳು ಮತ್ತು ಈ ಪತ್ರಿಕೆಯ ಮೂಲಕ ನಮ್ಮ ಯಾವುದೇ ವಿಶ್ವವಿದ್ಯಾಲಯದ ದೊಡ್ಡ ದೊಡ್ಡ ಹೆಸರುಗಳುಳ್ಳ ಅಧ್ಯಯನ ಪೀಠಗಳು ಮಾಡಲಾಗದಿರುವ ಅಮೂಲ್ಯ ಕೆಲಸವನ್ನು ಮಾಡುತ್ತಿರುವಿರಿ. ನಿಮಗೆ ಅಭಿನಂದನೆಗಳು.

ವಿಶೇಷಾಂಕದಲ್ಲಿ ಕೆ.ಪಿ. ನಟರಾಜ್ ಅವರು ಕಳೆದೊಂದು ವರ್ಷದ ಸಂಚಿಕೆಗಳ ಸಮೀಕ್ಷೆ ಮಾಡಿರುವುದು ಕುತೂಹಲಕಾರಿಯಾಗಿದೆ. ಆದರೆ ಅವರು ೨೦೧೩ರ ಫೆಬ್ರುವರಿ ಸಂಚಿಕೆಯನ್ನು ಗಮನಿಸದೇ ಹೋಗಿರುವುದು ಆಶ್ಚರ್ಯ. ಅದರ ಪ್ರತಿಯೊಂದು ಲೇಖನವೂ–ಪ.ಪೂ. ಶಿಕ್ಷಣ ಕುರಿತ ಮಂಜುಳಾ ರಾಜು ಅವರ ಲೇಖನ, ಜಾಗತೀಕರಣಕ್ಕೂ ಮಹಿಳೆಯರ ಮೇಲೆ ಅತ್ಯಾಚಾರಗಳು ಹೆಚ್ಚುತ್ತಿರುವುದಕ್ಕೂ ಇರುವ ಸಂಬಂಧ ಕುರಿತ ವಂದನಾ ಶಿವ ಅವರ ಲೇಖನ ಮತ್ತು ಮುಖ್ಯವಾಗಿ ಕಾಶ್ಮೀರದ ಇತಿಹಾಸ ಕುರಿತ ವಿಶೇಷ ಲೇಖನ ಅಮೂಲ್ಯವಾದವು. ಹಾಗೇ ಡಿಸೆಂಬರ್ ಸಂಚಿಕೆಯಲ್ಲಿನ 'ಕವಲುದಾರಿಯಲ್ಲಿರುವ ಮುಸ್ಲಿಂ ಸಮಾಜ' ಲೇಖನ ಗುಚ್ಛ ನಿಜವಾಗಿಯೂ ಸಂಗ್ರಹ ಯೋಗ್ಯವಾದದ್ದು.

–**ಬಿ. ರಾಘವೇಂದ್ರ ಜೋಷಿ**, ಬಾಗಲಕೋಟೆ

ಸೆಪ್ಟೆಂಬರ್ ಸಂಚಿಕೆಯ ಸಂಪಾದಕೀಯದಲ್ಲಿ ನೀವು ಸಿದ್ಧರಾಮಯ್ಯನವರನ್ನು ತೀಕ್ಷ್ಣ ವಿಮರ್ಶೆಗೆ ಒಳಪಡಿಸಿರುವುದು ಸರಿಯಾಗಿಯೇ ಇದೆ. ಪತ್ರಿಕೆಯು ಪ್ರಸಕ್ತ ವ್ಯವಸ್ಥೆಗೆ ತೀಕ್ಷ್ಣ ಪ್ರಶ್ನೆಗಳನ್ನು ಹಾಕುತ್ತಾ, ಅದಕ್ಕೆ ಪರ್ಯಾಯ ಹುಡುಕುವಲ್ಲಿ ಮಿಣುಕು ಹುಳುವಿನ ಸಣ್ಣ ಬೆಳಕಿನ ಕಿಡಿಯಂತೆ ಪರಿಣಾಮಕಾರಿಯಾಗಿ ಕೆಲಸ ಮಾಡುತ್ತಿದೆ.

–**ಅಪೂರ್ವ ಡಿ'ಸಿಲ್ವ**, ಚಾಮರಾಜನಗರ

# ಅಮೃತಮಹಲ್ ಕಾವಲ್ ಸ್ವಾಧೀನ: ಚಳ್ಳಕೆರೆಯಲ್ಲಿ ಜನರ ಪ್ರತಿಭಟನೆ



**ಕ**ಳೆದ ಸೆಪ್ಟೆಂಬರ್ ೪ರಂದು ಚಳ್ಳಕೆರೆಯಲ್ಲಿ ಜನರ ಪ್ರತಿಭಟನೆ, ಆಕ್ರೋಶ ಮುಗಿಲು ಮುಟ್ಟಿತ್ತು. ಸುತ್ತಮುತ್ತಲ ಸುಮಾರು ಎಂಭತ್ತು ಹಳ್ಳಿಗಳ ಸಾವಿರಾರು ಜನ ಅಂದು ನಗರದಲ್ಲಿ ಸೇರಿ ಸರ್ಕಾರದ ವಿರುದ್ಧ ಧಿಕ್ಕಾರ ಕೂಗಿದರು. ಜಿಲ್ಲೆಯಲ್ಲಿ ಕಾಲಾನುಕಾಲದಿಂದಲೂ ಸ್ಥಳೀಯ ಜನಸಮುದಾಯಗಳ ಪಾರಂಪರಿಕ ಜೀವನೋಪಾಯವಾಗಿರುವ ಹಸು, ಎಮ್ಮೆ, ಎತ್ತು, ಕುರಿ ಮೇಕೆಗಳನ್ನೊಳಗೊಂಡಂತೆ ಅವುಗಳ ಸ್ಥಳೀಯ ತಳಿ ಅಭಿವೃದ್ಧಿ ಮತ್ತು ಸಂಗೋಪನೆಗೆಂದೇ ಮೀಸಲಿರಿಸಿದ್ದ ಸಾವಿರಾರು ಎಕರೆ ಅಮೃತ ಮಹಲ್ ಕಾವಲು ಭೂಮಿಯನ್ನು ಸರ್ಕಾರ ಕಾನೂನುಗಳನ್ನು ಗಾಳಿಗೆ ತೂರಿ ರಕ್ಷಣಾ ಇಲಾಖೆ, ಬಾಬಾ ಅಣು ಸಂಶೋಧನೆ ಕೇಂದ್ರ, ಭಾರತೀಯ ಬಾಹ್ಯಾಕಾಶ ಸಂಶೋಧನಾ ಸಂಸ್ಥೆ, ಭಾರತೀಯ ವಿಜ್ಞಾನ ಸಂಸ್ಥೆ, ಕರ್ನಾಟಕ ಗೃಹ ನಿರ್ಮಾಣ ಮಂಡಳಿ ಮುಂತಾದ ಸರ್ಕಾರಿ ಸಂಸ್ಥೆಗಳು ಮತ್ತು ಇತರೆ ಖಾಸಗಿ ಸಂಸ್ಥೆಗಳ ಚಟುವಟಿಕೆ ಮತ್ತು ಉದ್ಯಮಗಳಿಗೆ ನೀಡಿರುವುದೇ ಇದಕ್ಕೆ ಕಾರಣವಾಗಿತ್ತು. ಖುದಾಪುರ, ನೆಲಗೇತನಹಳ್ಳಿ ಮುಂತಾದ ಹಳ್ಳಿಗಳಿಂದ ೧೫ ಕಿ.ಮೀ. ಜಾಥಾದಲ್ಲಿ ಬಂದ ಜನಸ್ತೋಮ ಚಳ್ಳಕೆರೆಯಲ್ಲಿ ತಹಸೀಲ್ದಾರರ ಕಛೇರಿ ಮುಂದೆ ಸಭೆ ಸೇರಿ ತನ್ನ ಅಳಲುಗಳನ್ನು ವಿಶಾಲ ಜನತೆ ಮತ್ತು ಸರ್ಕಾರದ ಮುಂದೆ ತೋಡಿಕೊಂಡಿತು.

ತಮ್ಮ ಸಾಕುಪ್ರಾಣಿಗಳ ಮೇವು, ಮನೆಗೆ ಸೌದೆ, ರೋಗ ರುಜಿನಗಳಿಗೆ ಔಷಧ ಮೂಲಿಕೆಗಳನ್ನು ಒದಗಿಸುವುದಲ್ಲದೆ ತಮ್ಮ ಶ್ರದ್ಧಾ ಕೇಂದ್ರಗಳೂ ಮತ್ತು ತಮ್ಮ ಸಮುದಾಯಗಳ ದೇವತೆಗಳ ಆವಾಸ ಸ್ಥಾನವೂ ಆಗಿರುವ ಈ ಭೂಮಿಯನ್ನು ರಾಜ್ಯ ಉಚ್ಚ ನ್ಯಾಯಾಲಯದ ಆದೇಶವನ್ನು ಉಲ್ಲಂಘಿಸಿ, ಇಲ್ಲಿ ಕೈಗಾರಿಕೋದ್ಯಮಗಳನ್ನು ಸ್ಥಾಪಿಸಲು ಮುಂದಾಗಿರುವುದನ್ನು ಸಭೆ ಖಂಡಿಸಿತು. ಜಿಲ್ಲೆಯ ಹಿಂದಿನ ಜಿಲ್ಲಾಧಿಕಾರಿ ಬಿಸ್ವಾಸ್ ಅವರನ್ನು ಸೇವೆಯಿಂದ ಕೂಡಲೇ ಅಮಾನತುಗೊಳಿಸಿ, ಸರ್ಕಾರ ಈ ಭೂ ಪರಿವರ್ತನೆ ಮತ್ತು ಹಸ್ತಾಂತರ ಪ್ರಕ್ರಿಯೆಯನ್ನು ತಡೆ ಹಿಡಿದು, ಇಲ್ಲಿ ಎಂದಿನ ಸುಗಮವಾದ ಪಶುಸಂಗೋಪನಾ ಜೀವನಕ್ಕೆ ಅನುವು ಮಾಡಿಕೊಡಬೇಕೆಂದು ಚಳ್ಳಕೆರೆ ತಹಸೀಲ್ದಾರ್‌ರ ಮೂಲಕ ಮುಖ್ಯಮಂತ್ರಿಗಳಿಗೆ ಸಲ್ಲಿಸಿದ ಮನವಿಪತ್ರದಲ್ಲಿ ಒತ್ತಾಯಿಸಲಾಯಿತು.

ಈ ಪ್ರತಿಭಟನಾ ಸಭೆಯನ್ನು ದೊಡ್ಡುಳ್ಳರ್ತಿಯ ಕರಿಯಣ್ಣ ಅಧ್ಯಕ್ಷರೂ, ಜಿ. ಹನುಮಂತರಾಯಪ್ಪ ಕಾರ್ಯದರ್ಶಿಯೂ ಆಗಿರುವ ಜಿಲ್ಲಾ ಅಮೃತಮಹಲ್ ಕಾವಲು ಹೋರಾಟ ಸಮಿತಿ ಸಂಘಟಿಸಿತ್ತು. ಸಭೆಯಲ್ಲಿ ಮೊಳಕಾಲ್ಮೂರಿನ ಶಾಸಕ ಎಸ್.ತಿಪ್ಪೇಸ್ವಾಮಿಯವರೂ ಸೇರಿದಂತೆ ಜಿಲ್ಲಾ ಪಂಚಾಯಿತಿ ಮತ್ತು ತಾಲ್ಲೂಕು ಪಂಚಾಯಿತಿಗಳ ಹಲವು ಸದಸ್ಯರು ಮತ್ತು ರೈತ ಸಂಘದ ಪ್ರತಿನಿಧಿಗಳು ಭಾಗವಹಿಸಿದ್ದರು.

ಕೇಂದ್ರ ಸರ್ಕಾರ ಜನಪರವಾದದ್ದೆಂದು ಹೇಳಲಾಗುತ್ತಿರುವ ಹೊಸ ಭೂ ಸ್ವಾಧೀನ ಕಾಯಿದೆಯನ್ನು ಜಾರಿಗೆ ತರುತ್ತಿರುವ ಮತ್ತು ಪಶುಸಂಗೋಪನಾ ಸಮುದಾಯಕ್ಕೆ ಸೇರಿ ಅವರ ಕ್ಷೇಮಾಭ್ಯುದಯದ ಹೆಸರಿನಲ್ಲಿಯೇ ಅಧಿಕಾರಕ್ಕೇರಿದವರೊಬ್ಬರು ಮುಖ್ಯಮಂತ್ರಿಯಾಗಿರುವ ಹೊತ್ತಿನಲ್ಲೇ ಈ ಬೆಳವಣಿಗೆ ನಡೆದಿರುವುದು ಒಂದು ರಾಜಕೀಯ ವಿಪರ್ಯಾಸ ಅಲ್ಲವೇ?

(ಆಧಾರ:**ಹೋರಾಟ ಸಮಿತಿಯ ಪತ್ರಿಕಾ ಪ್ರಕಟಣೆ**)

# ನಮ್ಮ ಸಮಾಜವಾದಿಗಳು: ರಸಿಕ ಹೋರಾಟಗಾರ ಜೆ.ಹೆಚ್. ಪಟೇಲ್

ಕರ್ನಾಟಕದ ಸಮಾಜವಾದಿಗಳಲ್ಲಿ ಅತ್ಯಂತ ವರ್ಣರಂಜಿತ ವ್ಯಕ್ತಿತ್ವವೆಂದರೆ ಜೆ.ಹೆಚ್. ಪಟೇಲರು. ಆಗರ್ಭ ಶ್ರೀಮಂತ ಕುಟುಂಬದಲ್ಲಿ ಹುಟ್ಟಿಯೂ ಯೌವ್ವನದ ಹುಮ್ಮಸ್ಸಿನಲ್ಲಿ ಸಮಾಜವಾದವನ್ನು ಅಪ್ಪಿಕೊಂಡವರು. ಬಡವರ ಪಕ್ಷವಾಗಿದ್ದ ಸಮಾಜವಾದಿ ಪಕ್ಷದ ಉನ್ನತಿಗಾಗಿ ತಮ್ಮ ಆಸ್ತಿಪಾಸ್ತಿಯನ್ನು ಸ್ವಲ್ಪಮಟ್ಟಿಗಾದರೂ ಧಾರೆಯೆರೆದ ಪಟೇಲರು ರಾಜ್ಯದಲ್ಲಿ ಸಮಾಜವಾದಿ ಚಳುವಳಿಗೆ ಗೋಪಾಲಗೌಡರ ಜೊತೆ ತಮ್ಮ ಬುದ್ಧಿವಂತಿಕೆ ಮತ್ತು ಅಧ್ಯಯನಶೀಲತೆಯಿಂದ ಒಂದು ಘನತೆ ಒದಗಿಸಿದವರು. ಅವರು ತಮ್ಮ ರಾಜಕೀಯ ಜೀವನದಲ್ಲಿ ಹಲವು ಅವಸ್ಥಾಂತರ ಹಾಗೂ ಏಳು ಬೀಳುಗಳನ್ನು ಕಂಡು ರಾಜ್ಯದ ಮುಖ್ಯಮಂತ್ರಿಯೂ ಆದರು. ಆದರೆ ಆ ಹೊತ್ತಿಗೆ ಅವರು ಸಮಾಜವಾದಿಯಾಗಿ ಉಳಿದಿದ್ದರೇ ಎಂಬ ಪ್ರಶ್ನೆಗೆ ಯು.ಆರ್ ಅನಂತಮೂರ್ತಿಯರ ಹೊರತಾಗಿ ಇನ್ನಾರೂ ಖಚಿತ ಉತ್ತರ ಹೇಳಲಾರರೇನೋ! ತಮ್ಮ ಅಧಿಕಾರದ ಅವಧಿಯಲ್ಲಿ ಆಸ್ತಿ, ಮದ್ಯ, ಮಾನಿನಿಯರ ಬಗ್ಗೆ ಸಾಮಾಜಿಕ ಮರ್ಯಾದೆ ಮೀರಿ ಮಾತಾಡುತ್ತಾ ಸಮಾಜವಾದಿಗಳ ಮುಜುಗರಕ್ಕೂ ಜನರ ಜಿಗುಪ್ಸೆಗೂ ಕಾರಣರಾಗಿದ್ದ ಅವರು, ಕೊನೆಗೆ ಜನಪ್ರೀತಿ ಕಳೆದುಕೊಂಡು ನಂತರದ ಚುನಾವಣೆಯಲ್ಲಿ ಆಘಾತಕಾರಿ ಸೋಲನ್ನು ಅನುಭವಿಸಿ ಈ ಲೋಕದಿಂದಲೇ ನಿರ್ಗಮಿಸಬೇಕಾಯಿತು. ಅಂದ ಮಾತ್ರಕ್ಕೆ ರಾಜ್ಯದ ಸಮಾಜವಾದಿ ಚಳುವಳಿಗೆ ಅವರ ಕೊಡುಗೆಯನ್ನು ನಾವು ಮರೆಯುವಂತಿಲ್ಲ.**–ಸಂ**



**ಜೆ.** ಹೆಚ್. ಪಟೇಲರು ನನ್ನ ಅಣ್ಣನಾಗಿದ್ದು, ನನ್ನ ಈ ಬರಹ ಸ್ವಲ್ಪ ಮಟ್ಟಿಗೆ ವ್ಯಕ್ತಿಗತವಾಗಿದ್ದರೆ ದಯವಿಟ್ಟು ಕ್ಷಮಿಸಬೇಕು. ನಾನೂ ಸಮಾಜವಾದಿ ಪಕ್ಷದ ಕಾರ್ಯಕರ್ತನಾಗಿ, ಅವರ ಒಡನಾಡಿಯೂ ಆಗಿದ್ದೆ. ಪಟೇಲರು ತಮ್ಮ ಪ್ರೌಢಶಾಲೆಯ ದಿನಗಳಲ್ಲಿಯೇ ಸಮಾಜವಾದದ ಪ್ರಭಾವಕ್ಕೆ ಒಳಗಾಗಿದ್ದರು. ಅವರು ೧೯೪೭ರಲ್ಲಿ ಸೆಪ್ಟೆಂಬರ್ ತಿಂಗಳ ೧ನೇ ತಾರೀಖು ಮೈಸೂರು ಮಹಾರಾಜರ ವಿರುದ್ಧ ಕರ್ನಾಟಕ ಪ್ರದೇಶ ಕಾಂಗ್ರೆಸ್ ಕರೆ ಕೊಟ್ಟಿದ್ದ 'ಮೈಸೂರು ಚಲೋ' ಸತ್ಯಾಗ್ರಹದಲ್ಲಿ ಸಕ್ರಿಯವಾಗಿ ಭಾಗವಹಿಸಿದ್ದರು.

ನಮ್ಮ ಊರಾದ ಕಾರಿಗನೂರು ಅಂದಿನ ಚಳುವಳಿಗೆ ಒಂದು ಕೇಂದ್ರವಾಗಿತ್ತು. ನಮ್ಮ ಈ ಊರಿದ್ದ ಚನ್ನಗಿರಿ ತಾಲ್ಲೂಕು ಆ ಚಳುವಳಿಯಲ್ಲಿ ತುಂಬಾ ಉತ್ಸಾಹದಿಂದ ಪಾಲ್ಗೊಂಡಿತ್ತು. ಸೆಪ್ಟೆಂಬರ್ ೩ರಂದು ಚನ್ನಗಿರಿ ನಗರದಲ್ಲಿ ಈ ಸತ್ಯಾಗ್ರಹ ಕಾಂಗ್ರೆಸ್ ಬಾವುಟದ ಮೆರವಣಿಗೆಯೊಂದಿಗೆ ಪ್ರಾರಂಭವಾಯಿತು. ನಾನು ಬಾವುಟವನ್ನು ಹಿಡಿದುಕೊಂಡಿದ್ದೆ. ಪೋಲೀಸ್‌ನವರು ನಮ್ಮ ಮೇಲೆ ದಾಳಿ ಮಾಡಿ ಸಭೆಯನ್ನು ಚೆಲ್ಲಾಪಿಲ್ಲಿಯಾಗುವಂತೆ ಹೊಡೆದರು. ನಾಯಕತ್ವ ವಹಿಸಿದ್ದ ಜೆ.ಹೆಚ್. ಪಟೇಲ್ ತಾಲ್ಲೂಕು ಕಛೇರಿಯ ಮೇಲೆ ಬಾವುಟವನ್ನು ಹಾರಿಸಲು ಪ್ರಯತ್ನ ಮಾಡಿದರು. ಆಗ ಅವರನ್ನ ಸೆರೆ ಹಿಡಿದು ಕೈಗೆ ಕೋಳ ತೊಡಿಸಿ, ಇನ್ನೂ ಹಲವರನ್ನು ಕೂಡಿಸಿಕೊಂಡು ಶಿವಮೊಗ್ಗದ ಕಡೆಗೆ ಹೋದರು. ಶಿವಮೊಗ್ಗದಲ್ಲಿ ಅವರನ್ನು ಎರಡು ದಿನ ಜಿಲ್ಲಾ ಕಾರಾಗೃಹದಲ್ಲಿ ಇಟ್ಟು, ಮುಂದೆ ಮಂಡಗದ್ದೆ ಕಾರಾಗೃಹಕ್ಕೆ ರವಾನಿಸಿದರು. ಅವರಿಗೆ ಮೂರು ತಿಂಗಳು ಸೆರೆಮನೆ ವಾಸವನ್ನು ಕೋರ್ಟ್ ವಿಧಿಸಿತ್ತು. ಅವರ ರಾಜಕೀಯ ಜೀವನ ಸ್ವಾತಂತ್ರ್ಯ ಹೋರಾಟ(ಮೈಸೂರು ಅರಸರ ವಿರುದ್ಧ) ಕಾರಾಗೃಹವಾಸದಿಂದ ಪ್ರಾರಂಭವಾಯಿತು. ಆಗ ಅವರಿಗೆ ೧೮ ವರ್ಷ ತುಂಬಿರಲಿಲ್ಲ.

ಅವರು ಹುಟ್ಟಿದ್ದು, ೧ ಅಕ್ಟೋಬರ್ ೧೯೩೦ರಲ್ಲಿ. ಅವರ ವಿದ್ಯಾಭ್ಯಾಸ ಇಂಟರ್‌ಮೀಡಿಯೆಟ್‌ವರೆಗೆ; ಅಂದರೆ ೧೯೫೦ರವರೆಗೆ, ದಾವಣಗೆರೆಯಲ್ಲಿಯೇ ನಡೆಯಿತು. ಇಂಟರ್‌ಮೀಡಿಯೆಟ್‌ನಲ್ಲಿ ವಿಜ್ಞಾನದ ವಿದ್ಯಾರ್ಥಿಯಾಗಿದ್ದ ಅವರು, ರಾಜಕೀಯ ಜೀವನವನ್ನು ಆಯ್ಕೆ ಮಾಡಿದ್ದರಿಂದ ಬಿ.ಎ. ತರಗತಿ ಓದುವುದು ಹೆಚ್ಚು ಸೂಕ್ತವೆಂದು ಮೈಸೂರು ಮಹಾರಾಜ ಕಾಲೇಜಿನಲ್ಲಿ ಪ್ರವೇಶವನ್ನು ಪಡೆದರು. ಅವರ ಮಹಾರಾಜ ಕಾಲೇಜಿನ ವ್ಯಾಸಂಗ ಬಹುಮಟ್ಟಿಗೆ ಅವರ ವ್ಯಕ್ತಿತ್ವವನ್ನು ರೂಪಿಸಿತು ಎಂದು ನನ್ನ ಗ್ರಹಿಕೆ.

ಮೊದಲನೆಯ ಸಾರ್ವತ್ರಿಕ ಚುನಾವಣೆಯ ಸಂದರ್ಭದಲ್ಲಿ ಜಯಪ್ರಕಾಶ್ ನಾರಾಯಣ್‌ರವರು ಸಮಾಜವಾದಿ ಪಕ್ಷದ ನಾಯಕರಾಗಿ, ಚುನಾವಣಾ ಪ್ರಚಾರಕ್ಕೆ ಮೈಸೂರಿಗೆ ಆಗಮಿಸಿದ್ದರು. ಅದು ೧೯೫೧ನೇ ಇಸವಿ. ಜೆ. ಹೆಚ್. ಪಟೇಲರ ಜೀವನದಲ್ಲಿ ಹೊಸ ತಿರುವು ನೀಡಿದ ಒಂದು ಕಾಲಘಟ್ಟವದು. ತದನಂತರದಲ್ಲೇ ಕಾಗೋಡು ಸತ್ಯಾಗ್ರಹ ಆರಂಭವಾಗಿ ಡಾ. ಲೋಹಿಯಾ ಅವರು ಕರ್ನಾಟಕಕ್ಕೆ ಬಂದು ಆ ಸತ್ಯಾಗ್ರಹದಲ್ಲಿ ಭಾಗವಹಿಸಿದ್ದು, ಸಮಾಜವಾದಿ ತತ್ವದಲ್ಲಿ ವಿಶ್ವಾಸವಿಟ್ಟಿದ್ದ ಎಲ್ಲರಿಗೂ ಒಂದು ಹೊಸ ಹುರುಪನ್ನು ನೀಡಿತು. ಈ ಸಮಾಜವಾದದ ಗುಂಗಿನಲ್ಲಿಯೇ ಪಟೇಲರು ೧೯೫೪ರವರೆಗೆ ಬೆಳಗಾವಿಯಲ್ಲಿ ಅಭ್ಯಾಸ ಮಾಡಿ ಎಲ್.ಎಲ್.ಬಿ. ಪದವಿ ಪಡೆದರು. ೧೯೫೪ರ ಮೇನಲ್ಲಿ ಸರ್ವಮಂಗಳ ಅವರ ಜೊತೆಗೆ ವಿವಾಹವಾಯಿತು. ಅದೇ ವರ್ಷ ಪ್ರಸಿದ್ಧ ವಕೀಲರಾಗಿದ್ದ ಎಸ್. ವಿ. ಕೃಷ್ಣಮೂರ್ತಿರಾಯರ ಕಛೇರಿಯಲ್ಲಿ ವಕೀಲಿ ವೃತ್ತಿ ಅನುಭವ ಪಡೆದರು. ಕೃಷ್ಣಮೂರ್ತಿ ಅವರು ಕೊನೆಯ ತನಕ ಜೆ. ಹೆಚ್. ಪಟೇಲರ ಬಗ್ಗೆ ಅತ್ಯಂತ ಅಭಿಮಾನ ಉಳ್ಳವರಾಗಿದ್ದರು.

೧೯೫೨ರ ಚುನಾವಣೆಯಲ್ಲಿ ಕಾಂಗ್ರೆಸ್‌ನಿಂದ ಸಿಡಿದು ಹೊರಗಡೆ ಬಂದು ಚನ್ನಗಿರಿ ತಾಲ್ಲೂಕಿನಿಂದ ಕಾಂಗ್ರೆಸ್ ಸೋಲಿಸಿ, ಶಾಸಕರಾಗಿ ಚುನಾಯಿತರಾಗಿದ್ದ ಎಲ್. ಸಿದ್ದಪ್ಪನವರ ಆಯ್ಕೆಗೆ ನಮ್ಮ ತಂದೆಯವರ ಬೆಂಬಲ ಅತ್ಯಂತ ನಿರ್ಣಾಯಕವಾಗಿತ್ತು. ಅಂದಿನಿಂದ ವಿರೋಧ ಪಕ್ಷಗಳ ಜೊತೆಗೆ ಗುರುತಿಸಿಕೊಂಡ ಪಟೇಲರು ಕಾಂಗ್ರೆಸ್‌ಗೆ ಸದಾ ವಿರೋಧವನ್ನು ವ್ಯಕ್ತಮಾಡುತ್ತಲೇ ಬಂದರು. ೧೯೫೫ರಲ್ಲಿ ಶಿವಮೊಗ್ಗದಲ್ಲಿ ತನ್ನ ಸಹಪಾಠಿ ಮಿತ್ರ ಶಂಕರನಾರಾಯಣ ಭಟ್ಟರ ಜೊತೆಗೆ ವಕೀಲಿ ವೃತ್ತಿಯನ್ನು ಆರಂಭಿಸಿದರು. ಅವರ ವಕೀಲಿ ವೃತ್ತಿ ಅವರ ಜೀವನದಲ್ಲಿ ಪ್ರಮುಖವಾಗದೇ ರಾಜಕಾರಣಕ್ಕೆ ಪೂರಕವಾಗಿಯೇ ಇತ್ತು. ೧೯೫೭ರಲ್ಲಿ ಅವರು ಚನ್ನಗಿರಿ ತಾಲ್ಲೂಕಿನ ಮುಂದಾಳುಗಳಾಗಿದ್ದ ಪಾಪಣ್ಣನವರನ್ನು ವಿಧಾನಸಭೆಗೆ ಸ್ಪರ್ಧಿಸಲು ಬೆಂಬಲಿಸಿದರು. ವಿಧಿವಶಾತ್ ಚುನಾವಣಾ ದಿನ ಬರುವುದಕ್ಕೆ ಮುಂಚೆ ಪಾಪಣ್ಣನವರು ತೀರಿಕೊಂಡರು.

೧೯೫೭ರ ನಂತರ ಸಮಾಜವಾದಿ ಪಕ್ಷದ ಹೋರಾಟದಲ್ಲಿ ಶಾಂತವೇರಿ ಗೋಪಾಲಗೌಡರ ಜೊತೆಗೂಡಿದರು. ಶಾಂತವೇರಿ ಗೋಪಾಲ ಗೌಡರು ರಾಜ್ಯದ ಎರಡನೇ ವಿಧಾನಸಭಾ ಚುನಾವಣೆಯಲ್ಲಿ ಆಯ್ಕೆಯಾಗಿ ಕರ್ನಾಟಕ ರಾಜ್ಯಾದ್ಯಂತ ಪ್ರಮುಖ ಜನ ನಾಯಕರೆಂದು ಗುರುತಿಸಲ್ಪಟ್ಟಿದ್ದರು. ೧೯೬೦ರ ತಾಲ್ಲೂಕು ಬೋರ್ಡ್ ಚುನಾವಣೆ ಜೆ.ಹೆಚ್. ಪಟೇಲರನ್ನು ಚುನಾವಣಾ ರಾಜಕೀಯಕ್ಕೆ ಧುಮುಕಿಸಿತು. ಆಗ ಬಸವಾಪಟ್ಟಣ ಕ್ಷೇತ್ರದಿಂದ ಚನ್ನಗಿರಿ ತಾಲ್ಲೂಕು ಬೋರ್ಡ್‌ಗೆ ಚುನಾಯಿತರಾದರು. ಈ ಮಧ್ಯೆ ಕಾಗೋಡು ಸತ್ಯಾಗ್ರಹ ಒಂದು ರಾಷ್ಟ್ರೀಯ ಸುದ್ದಿಯಾಗಿ, ಭಾರತದ ಎಲ್ಲಾ ಕಡೆಗೂ ಲೋಹಿಯಾ ಅವರು 'ಉಳುವವನಿಗೆ ಭೂಮಿ' ಚಳುವಳಿಯನ್ನು ಪ್ರಾರಂಭಿಸಿದ್ದರು. ಆಗ ಶಿವಮೊಗ್ಗ ಜಿಲ್ಲೆಯಲ್ಲಿ ಸಮಾಜವಾದಿ ಪಕ್ಷದ ಬೆಳವಣಿಗೆ ತುಂಬಾ ಪರಿಣಾಮಕಾರಿಯಾಗಿತ್ತು. ರಾಜ್ಯದಲ್ಲಿ ಸಮಾಜವಾದಿ ಪಕ್ಷ ನಡೆಸಿದ ಭೂ ಚಳುವಳಿಗಳಲ್ಲಿ ಜೆ.ಹೆಚ್. ಪಟೇಲರು ೫೮ರಲ್ಲಿ ಎರಡು ಸಾರಿ ಸೆರೆಮನೆ ವಾಸ, ಒಮ್ಮೆ ಬಳ್ಳಾರಿಯಲ್ಲಿ ಮತ್ತೊಮ್ಮೆ ಶಿವಮೊಗ್ಗದಲ್ಲಿ ಅನುಭವಿಸಿದ್ದರು.

ಪಟೇಲರ ತುರ್ತು ಪರಿಸ್ಥಿತಿಯ ವಿಧ್ವಂಸಕ ಚಟುವಟಿಕೆ ಬಗ್ಗೆ ಎರಡು ಮಾತನ್ನು ನಾನು ಹೇಳಲೇಬೇಕು. ಒಂದು ಅವರು ಯಾವ ಗಂಡಾಂತರಕ್ಕೂ ಹೆದರುವ ಜಾಯಮಾನದವರಾಗಿರಲಿಲ್ಲ. ಆ ತುರ್ತು ಪರಿಸ್ಥಿತಿಯ ಪೂರ್ಣಾವಧಿಯಲ್ಲಿ ಒಂದಲ್ಲ ಒಂದು ಜೈಲಿನಲ್ಲಿ ಸೆರೆಮನೆವಾಸ ಮಾಡುತ್ತಿದ್ದರು. ಒಮ್ಮೆ ಶಿವಮೊಗ್ಗ ಜೈಲಿನಿಂದ ಬಿಡುಗಡೆ ಹೊಂದಿ ಹೊರಗಡೆ ಬಂದಿದ್ದರು. ಪುನಃ ಅವರನ್ನು ದಸ್ತಗಿರಿ ಮಾಡುತ್ತಾರೆ;ಮುನ್ನೆಚ್ಚರಿಕೆ ಕಾಯ್ದೆ **(Preventive detention)** ಪ್ರಕಾರ ಪುನಃ ಜೈಲಿಗೆ ಕಳುಹಿಸುತ್ತಾರೆ ಎಂದು ಎಲ್ಲರಿಗೂ ಗೊತ್ತಿತ್ತು. ಆದರೂ ಅವರು ಆ ಬಿಡುವಿನಲ್ಲಿ ದಾವಣಗೆರೆಗೆ ಬಂದಿದ್ದರು. ನಾನು ಆಗಲೇ ಕಾನೂನು ಮಹಾವಿದ್ಯಾಲಯದ ಪ್ರಾಚಾರ್ಯನಾಗಿದ್ದೆ. ಅವರು ಒಂದು ರಾತ್ರಿ ನನ್ನ ಮನೆಯಲ್ಲಿ ಉಳಿದಿದ್ದರು. ಆಗ ನನಗೆ ಗೊತ್ತಾಯಿತು, ಅಣ್ಣನವರು ಮೊದಲೇ ಆಯೋಜಿಸಿದಂತೆ ಬೀರೂರು ಸಮೀಪ ರೈಲ್ವೆ ಹಳಿಗೆ ಸಿಡಿಮದ್ದನ್ನು ಇಟ್ಟು ಸ್ಫೋಟಿಸುವವರಿದ್ದಾರೆ ಎಂದು. ಬೆಳಿಗ್ಗೆ ನಮ್ಮದೇ ಕಾರು ಹೊರಟು ನಿಂತಿತ್ತು. ಅದರಲ್ಲಿ ಎಲ್ಲಾ ಸಲಕರಣೆಯನ್ನು ಇಟ್ಟುಕೊಂಡಿದ್ದರು. ನಾನು ತಡೆಯಲಾರದೇ ಅವರಿಗೆ ಒಂದು ಚಿಕ್ಕ ಪತ್ರವನ್ನು ಬರೆದೆ. ಅದರಲ್ಲಿ ಬಹಳ ಸಂಕ್ಷಿಪ್ತವಾಗಿ "ನಾವು ಸ್ವಾತಂತ್ರ್ಯವನ್ನು ಪಡೆದದ್ದು ಅಹಿಂಸಾ ಮಾರ್ಗದಿಂದ, ಅದು ಗಾಂಧಿ ಮಾರ್ಗ. ಇಂದು ಏಕೆ ಹಿಂಸಾ ಮಾರ್ಗದಲ್ಲಿ ತೊಡಗಿದ್ದೀರಿ? ಇದು ಸರಿಯಲ್ಲ" ಎಂದು ಬರೆದಿದ್ದೆ. ಅವರು ಕಾರಿನಲ್ಲಿ ಕೂತಾಗ ಈ ಪತ್ರವನ್ನು ಕೊಟ್ಟೆ. ಅವರು ಓದಿಕೊಂಡು ಒಂದು ತರಹ ನಗೆಯಿಂದ ನನ್ನನ್ನು ಉದ್ದೇಶಿಸಿ, "ರೀ, ನಿಮ್ಮ ಈ ಬೋಧನೆಯನ್ನ ನಿಮ್ಮ ತರಗತಿಗಳಲ್ಲಿ ಬಳಸಿ, ನನ್ನ ಮೇಲೆ ಬೇಡ' ಎಂದು ಹೇಳಿ ಅವರ ಕಾರ್ಯಕ್ಕೆ ಹೊರಟುಹೋದರು. ನಾನು ಈ ಪ್ರಸಂಗವನ್ನು ಬೇಕಂತಲೇ ನೀಡುತಿದ್ದೇನೆ.

೧೯೬೭ರ ಸಾರ್ವತ್ರಿಕ ಚುನಾವಣೆಯಲ್ಲಿ ಜೆ. ಹೆಚ್. ಪಟೇಲರು ಅತ್ಯಧಿಕ ಬಹುಮತದಿಂದ ಶಿವಮೊಗ್ಗ ಕ್ಷೇತ್ರದಿಂದ ಲೋಕಸಭೆಗೆ ಆಯ್ಕೆಯಾದರು. ಅವರು ಲೋಕಸಭೆಯಲ್ಲಿ ಪ್ರಥಮ ಬಾರಿಗೆ ಕನ್ನಡದಲ್ಲಿ ಮಾತನಾಡಿದ್ದು, ನಂತರ ಗೃಹಮಂತ್ರಿಗಳಾಗಿದ್ದ ವೈ. ವಿ. ಚವ್ಹಾಣರೊಡನೆ ಮಹಾಜನ ಆಯೋಗದ ಸಂಬಂಧವಾಗಿ ಕರ್ನಾಟಕದ ಪರವಾಗಿ ವಾಗ್ಯುದ್ಧ ನಡೆಸಿದ್ದು, ಕರ್ನಾಟಕದಲ್ಲಿ ಎಲ್ಲರ ಮನೆಮಾತಾಗಿತ್ತು. ಅವರು ಬಹು ಜನಪ್ರಿಯ ಲೋಕಸಭಾ ಸದಸ್ಯರಾಗಿದ್ದರು. ಡಾ. ಲೋಹಿಯುರವರ ಅಚ್ಚುಮೆಚ್ಚಿನ ಸಂಗಾತಿಯಾಗಿದ್ದರು. ಡಾ. ಲೋಹಿಯವರು ಲೋಕಸಭೆಗೆ ಒಂದು ಪಕ್ಕದಲ್ಲಿ ಜಾರ್ಜ್ ಫರ್ನಾಂಡೀಸ್‌ರು, ಇನ್ನೊಂದು ಪಕ್ಕದಲ್ಲಿ ಜೆ. ಹೆಚ್. ಪಟೇಲರು, ಇವರಿಬ್ಬರ ಹೆಗಲ ಮೇಲೆ ಕೈ ಹಾಕಿಕೊಂಡೇ ಲೋಕಸಭೆ ಪ್ರವೇಶಿಸುತ್ತಿದ್ದರಂತೆ.

ಜೆ. ಹೆಚ್. ಪಟೇಲರ ಮುಂದಿನ ರಾಜಕೀಯ ಇತಿಹಾಸ ಎಲ್ಲರಿಗೂ ಗೊತ್ತಿರುವುದು. ಆದರೆ ಅವರ ಬಗ್ಗೆ ಕೆಲವು ಮಾತುಗಳನ್ನು ಆಡದಿದ್ದರೆ, ಇದು ಸಂಪೂರ್ಣವಾಗುವುದಿಲ್ಲ. ಅವರು ಕೆಲವು ವಿಶಿಷ್ಟ ಗುಣಗಳನ್ನು ಹೊಂದಿದ್ದರು. ತಂದೆ–ತಾಯಿ, ಸೋದರ, ಸೋದರಿಯರು, ನಮ್ಮ ಊರು ಇವುಗಳ ಬಗ್ಗೆ ಅತೀವವಾದ ಪ್ರೀತಿಯಿತ್ತು. ಅವರು ತಮ್ಮ ಧರ್ಮಪತ್ನಿ ಸರ್ವಮಂಗಳಾ ದೇವಿಯನ್ನು ಅತ್ಯಂತ ಗಾಢವಾಗಿ ಪ್ರೀತಿಸುತ್ತಿದ್ದರು. ನನ್ನ ಅತ್ತಿಗೆಯವರು ಮಾನಸ ಸರೋವರ ನೋಡಲು ಹೋಗಿ ತೀವ್ರವಾದ ದೈಹಿಕ ಯಾತನೆಗೆ ಒಳಗಾಗಿ ಉಳಿದು ಬಂದಿದ್ದೇ ಹೆಚ್ಚಾಗಿತ್ತು. ಆಗ ಅವರ ಮುಖ್ಯಮಂತ್ರಿ ಪದವಿ ಕೊನೆಗೊಂಡಿತ್ತು. ತನ್ನ ಹೆಂಡತಿಗಾದ ನೋವನ್ನು ಅವರು ಎಷ್ಟು ತೀವ್ರವಾಗಿ ಅನುಭವಿಸಿದರು ಎಂಬುದು ಕುಟುಂಬದವರಿಗೆ ಮಾತ್ರ ಗೊತ್ತಿತ್ತು. ಆದರೆ ಪಟೇಲರು ಮಹಾ ರಸಿಕರೆಂಬ, ಸ್ತ್ರೀ ಲಂಪಟರೆಂಬ ಟೀಕೆಗಳಿವೆ. ನಿಜ, ಅವರು ಶ್ರೀರಾಮನ ಭಕ್ತನಾಗಿರದೆ, ಶ್ರೀಕೃಷ್ಣನ ಭಕ್ತರಾಗಿದ್ದರು. ಅವರನ್ನು ಅರ್ಥ ಮಾಡಿಕೊಂಡವರಿಗೆ ಗೊತ್ತು, ಅವರಲ್ಲಿ ರಸಿಕತೆಯಿತ್ತು; ಆದರೆ ಅವರು ವಿಷಯ ಲಂಪಟ ಅಥವಾ ವ್ಯಭಿಚಾರಿಯಾಗಿದ್ದರೆನ್ನುವುದು ತಪ್ಪಾಗುತ್ತದೆ. ಮದ್ಯವನ್ನು ಆನಂದಿಸುತ್ತಿದ್ದರು. ಆದರೆ ಅದಕ್ಕೆ ಬಲಿಯಾಗಿರಲಿಲ್ಲ.

ಪಟೇಲರು ಅವರ ಅಧಿಕಾರವನ್ನು ಮಂತ್ರಿಯಾಗಿದ್ದಾಗ ಆಗಲೀ, ಮುಖ್ಯಮಂತ್ರಿಗಳಾಗಿದ್ದಾಗಲೇ ಆಗಲೀ, ಕುಟುಂಬಕ್ಕಾಗಿ ಅಧಿಕಾರ ದುರುಪಯೋಗ ಮಾಡಲಿಲ್ಲ. ಯಾವ ಮಕ್ಕಳನ್ನೂ ಚುನಾವಣೆಗೆ ನಿಲ್ಲಿಸಲು ಒಪ್ಪಲಿಲ್ಲ. ಆದರೆ ನನಗೆ ಎರಡು ಬಾರಿ ಲೋಕಸಭೆಗೆ ಸ್ಪರ್ಧಿಸಲು ಅವಕಾಶ ಮಾಡಿಕೊಟ್ಟಿದ್ದರು. ಆದರೆ ನನ್ನ ಪ್ರಯತ್ನ ಸಫಲವಾಗಲಿಲ್ಲ. ಅದು ಅವರಿಗೆ ನೋವನ್ನು ಉಂಟುಮಾಡಿತ್ತು. ಅವರು ಸದಾ ಸ್ನೇಹಿತರೊಡನೆ ಮತ್ತು ಕುಟುಂಬದೊಡನೆ ಅತ್ಯಂತ ಮನಃಪೂರ್ವಕವಾಗಿ ಸಂತೋಷ ಕೂಟಗಳಲ್ಲಿ ಭಾಗವಹಿಸುತ್ತಿದ್ದರು. ಮಕ್ಕಳ ಮೇಲಿನ ಪ್ರೀತಿಗಿಂತ ಮೊಮ್ಮಕ್ಕಳ ಮೇಲಿನ ಪ್ರೀತಿ ಅಗಾಧವಾಗಿತ್ತು. ಅವರು ಯಾರನ್ನೂ ಶಾಶ್ವತವಾಗಿ ದ್ವೇಷಿಸುತ್ತಿರಲಿಲ್ಲ. ಎಂತಹ ವಿರೋಧಿಗಳನ್ನೂ ವಿಶ್ವಾಸದಿಂದ ಕಾಣುತ್ತಿದ್ದರು. ಅವರು ಒಟ್ಟು ಜೀವನ ಪ್ರೇಮಿಯಾಗಿದ್ದರು.

**–ಪ್ರೊ. ಎಸ್.ಎಚ್. ಪಟೇಲ್**

## ಲೋಹಿಯಾ ಜನ್ಮ ಶತಾಬ್ದಿ ಪ್ರತಿಷ್ಠಾನ (ರಿ), ಸಾಗರ

### ಸಮಾಜವಾದಿ ಅಧ್ಯಯನ ಶಿಬಿರ: 'ಇಂದು ನಮಗೆ ಬೇಕಾದ ಗಾಂಧಿ'

ನಮ್ಮ ಪ್ರತಿಷ್ಠಾನವು ಪ್ರತಿ ವರ್ಷದಂತೆ ಈ ವರ್ಷವೂ ಕುಪ್ಪಳ್ಳಿಯ ರಾಷ್ಟ್ರಕವಿ ಕುವೆಂಪು ಪ್ರತಿಷ್ಠಾನದ ಆಶ್ರಯದಲ್ಲಿ ಎರಡು ದಿನಗಳ ಸಮಾಜವಾದಿ ಅಧ್ಯಯನ ಶಿಬಿರವನ್ನು ಏರ್ಪಡಿಸುತ್ತಿದೆ. ಈ ಬಾರಿಯ ಶಿಬಿರ ಕರ್ನಾಟಕ ವಾರ್ತಾ ಮತ್ತು ಪ್ರಚಾರ ಇಲಾಖೆಯ ಸಹಯೋಗದಲ್ಲಿ **ಈ ಅಕ್ಟೋಬರ್ 19 ಹಾಗೂ 20ರಂದು (ಶನಿವಾರ ಮತ್ತು ಭಾನುವಾರ)** ನಡೆಯಲಿದ್ದು, ಶಿಬಿರದ ವಿಷಯ 'ಇಂದು ನಮಗೆ ಬೇಕಾದ ಗಾಂಧಿ' ಎಂಬುದಾಗಿರುತ್ತದೆ. ಶಿಬಿರದಲ್ಲಿ ಈ ವಿಷಯದ ಹಲವು ಮಗ್ಗುಲುಗಳ ಬಗ್ಗೆ ಆರು ಗೋಷ್ಠಿಗಳಲ್ಲಿ ವಿಷಯ ಪರಿಣತರಿಂದ ಉಪನ್ಯಾಸ ಮತ್ತು ಚರ್ಚೆಗಳು ಇರುತ್ತದೆ. ಜೊತೆಗೆ ಸಂಬಂಧಿತ ಚಲಚಿತ್ರ ಪ್ರದರ್ಶನವೂ ಇರುತ್ತದೆ. ಆಸಕ್ತರು **ನೂರೈವತ್ತು ರೂಪಾಯಿಗಳ (ವಿದ್ಯಾರ್ಥಿಗಳಿಗೆ ನೂರು ರೂಪಾಯಿಗಳು)** ಶಿಬಿರ ಶುಲ್ಕ ಪಾವತಿಸಿ ತಮ್ಮ ಹೆಸರನ್ನು ನೋದಾಯಿಸಿಕೊಳ್ಳಬಹುದಾಗಿದೆ.

ಶಿಬಿರಾರ್ಥಿಗಳಿಗೆ 19 ಹಾಗೂ 20ರಂದು ಸಾಮೂಹಿಕ ವಸತಿ, ಊಟ–ಉಪಾಹಾರ ಮತ್ತು ಲೇಖನ ಸಾಮಗ್ರಿಯನ್ನು ಒದಗಿಸಲಾಗುವುದಲ್ಲದೆ, ವಾರ್ತಾ ಮತ್ತು ಪ್ರಚಾರ ಇಲಾಖೆ ಕೊಡಮಾಡಲಿರುವ ಆಯ್ದ ಗಾಂಧಿ ಸಾಹಿತ್ಯ ಕೃತಿಗಳನ್ನು ನೀಡಲಾಗುವುದು. ವಸತಿ ವ್ಯವಸ್ಥೆ ಸೀಮಿತವಾಗಿರುವುದರಿಂದ ಆಸಕ್ತರು ಆದಷ್ಟು ಬೇಗ ಕರ್ನಾಟಕ ಬ್ಯಾಂಕಿನ ಹೆಗ್ಗೋಡು ಶಾಖೆಯ ಉಳಿತಾಯ ಖಾತೆ ಸಂ: **3062500100508301(IFSC: KARB 00508301)** ಇಲ್ಲಿಗೆ ಶಿಬಿರ ಶುಲ್ಕ ಪಾವತಿಸಿ ಅಥವಾ ಈ ಮುಂದಿನ ವಿಳಾಸಕ್ಕೆ ಎಂ.ಓ. ಮಾಡಿ ತಮ್ಮ ಹೆಸರನ್ನು ನೋಂದಾಯಿಸಿಕೊಳ್ಳಬೇಕು.: ಎನ್.ಎಂ. ಕುಲಕರ್ಣಿ, 'ಅಂಬರ ಚಿತ್ತಾರ', ಹೆಗ್ಗೋಡು (ಸಾಗರ ತಾ. ಶಿವಮೊಗ್ಗ ಜಿ.) ಸಂಪರ್ಕ ದೂ: **9480954550 / 9448238638 / 9481351079**

ನೋಂದಣಿಗೆ **ಕೊನೆಯ ದಿನಾಂಕ ಇದೇ ಅಕ್ಟೋಬರ್ 12.**

–ಡಿ.ಎಸ್. ನಾಗಭೂಷಣ (ಅಧ್ಯಕ್ಷರು)

# ಸಾವಯವ ಕೃಷಿ–ಸಾವಯವ ಬದುಕು: ನನ್ನ ಅನುಭವಗಳು

–ಡಾ. ಎ.ಎನ್. ನಾಗರಾಜ್

ಕನ್ನಡದ ಖ್ಯಾತ ಲೇಖಕ ಡಾ. ಎ.ಎನ್ ಮೂರ್ತಿರಾಯರ ಮಕ್ಕಳಲ್ಲಿ ಒಬ್ಬರಾದ ಡಾ. ಎ.ಎನ್ ನಾಗರಾಜ್ ಅಮೆರಿಕಾದಲ್ಲಿನ ವಿಶ್ವ ಆಹಾರ ಮತ್ತು ಕೃಷಿ ಸಂಸ್ಥೆಯಲ್ಲಿ ವಿಜ್ಞಾನಿಯಾಗಿದ್ದವರು. ಅಲ್ಲಿಯೇ ಮದುವೆಯಾಗಿ ಕುಟುಂಬ ಸ್ಥಾಪಿಸಿಕೊಂಡಿದ್ದವರು. ಆದರೆ ಅವರು ಮತ್ತು ಅವರ ಪತ್ನಿ ನ್ಯಾನ್ಸಿ ಅಮೆರಿಕಾದಲ್ಲಿನ ಭಾರಿ ಪ್ರಮಾಣದ ರಸಾಯನಿಕ ಕೃಷಿಯ ಭೀಕರ ಪರಿಣಾಮಗಳು ಮತ್ತು ಅದನ್ನು ಪೋಷಿಸುವ ಅಲ್ಲಿನ ಹಣ ಮತ್ತು ವಸ್ತು ಪ್ರಧಾನ ಸಮಾಜದಿಂದ ಬೇಸತ್ತು ಕಳೆದ ಎಪ್ಪತ್ತರ ದಶಕದಲ್ಲೇ ತಮ್ಮ ಕುಟುಂಬದೊಂದಿಗೆ ಅಮೆರಿಕಾ ಬಿಟ್ಟು ಮೈಸೂರಿನ ಹಳ್ಳಿಯೊಂದಕ್ಕೆ ಬಂದರು. ಅಲ್ಲಿ ಹಲವು ವರ್ಷಗಳ ಕಾಲ ತಾವು ಕಂಡಿದ್ದಂತೆ ಅಮೆರಿಕಾದಲ್ಲಿ ಹಲವರು ನಡೆಸಿದ್ದ ಸಾವಯವ ಕೃಷಿ ಮತ್ತು ಬದುಕಿನ ಪ್ರಯೋಗವನ್ನು ನಡೆಸಿದರು. ನಂತರ ಅವರು ಆ ಜಾಗ ಬಿಟ್ಟು ಈಗ ತೀರ್ಥಹಳ್ಳಿ ಬಳಿ ತುಂಗಾ ನದಿ ತೀರದ ಭೀಮನಕಟ್ಟೆಯಲ್ಲಿ ಪುಟ್ಟ ಮನೆ ಕಟ್ಟಿಕೊಂಡು ಅಲ್ಲಿಯೇ ಪುಟ್ಟ ಜಮೀನಿನಲ್ಲಿ ಸಹಜ ಕೃಷಿ ಮಾಡಿಕೊಂಡು ಸಹಜ ಜೀವನ, ಸಹಜ ಆರೋಗ್ಯ ಶೈಲಿಗಳ ಬಗ್ಗೆ ತಮ್ಮದೇ ರೀತಿಯಲ್ಲಿ ಪ್ರಚಾರ ಕಾರ್ಯ ಕೈಗೊಂಡಿದ್ದಾರೆ. ಇತರ ಹಲವರಂತೆ ಇವರಿಂದ ಸ್ಫೂರ್ತಿ–ಪ್ರೇರಣೆ ಪಡೆದು, ತೀರ್ಥಹಳ್ಳಿಯಲ್ಲಿ ದಿ. ಪುರುಷೋತ್ತಮರಾಯರು ಸಾವಯವ ಕೃಷಿ ಪ್ರಚಾರವನ್ನು  ತಮ್ಮ ಜೀವನದ ಮಹದೋದ್ದೇಶವನ್ನಾಗಿ ಮಾಡಿಕೊಂಡು ದೊಡ್ಡ ಆಂದೋಲನವನ್ನೇ ಪ್ರಾರಂಭಿಸಲು ಸಾಧ್ಯವಾಯಿತು.

ಕೃಷಿಋಷಿ ಫುಕುವೊಕಾ ಹೇಳುವಂತೆ, ಕೃಷಿ ಎನ್ನುವುದು ಒಂದು ಉದ್ಯೋಗವಲ್ಲ. ಏಕೆಂದರೆ, ಅಲ್ಲಿ ನಾವು ಬೆಳೆಯುವುದು ರಾಗಿ, ಬತ್ತ, ಕಬ್ಬು, ಅಡಿಕೆಯ ಬೆಳೆಯನ್ನಲ್ಲ; ಮಾನವತೆಯ ಬೆಳೆಯನ್ನು. ಸರಳ ನೆಮ್ಮದಿಯ ಬದುಕಿನ ಸಂತೋಷ–ಆನಂದಗಳನ್ನು. ಡಾ. ನಾಗರಾಜ್ ಅಂತಹ ಅನುಭವದ ಕೆಲವು ಸೆಳಕುಗಳನ್ನಿಲ್ಲಿ ನೀಡಿದ್ದಾರೆ.–ಸಂ.

ಮೈಸೂರಿನಿಂದ ಸುಮಾರು ೧೦ ಕಿಲೊಮೀಟರು ದೂರದಲ್ಲಿರುವ ಕಳಲವಾಡಿ ಗ್ರಾಮದಲ್ಲಿ ೧೯೭೦ರಲ್ಲಿ ೧೪ ಎಕರೆ ಜಮೀನನ್ನು ಖರೀದಿ ಮಾಡಿ ಅಲ್ಲಿ ಒಂದು ಸರಳವಾದ ಮನೆಯನ್ನು ಕಟ್ಟಿಕೊಂಡು, ನಮ್ಮ ತಾಯಿಯು ನ್ಯಾನ್ಸಿಗೆ ಕೊಟ್ಟಿದ್ದ ಚಿನ್ನದ ಸರ, ಬಳೆ ಇತ್ಯಾದಿಗಳನ್ನು ಮಾರಿ, ಸರಳವಾದ ಮತ್ತು ಪರಿಸರ ಸ್ನೇಹಿಯಾದ ಜೀವನವನ್ನು ನಡೆಸಲು ಪ್ರಾರಂಭಿಸಿದೆವು. ಇದರ ಅಂಗವಾಗಿ, ೯ ವರ್ಷ ಸಾವಯವ ಕೃಷಿಯಲ್ಲಿ ತರಕಾರಿಗಳು, ಹಣ್ಣುಗಳು, ಧಾನ್ಯಗಳು, ತೆಂಗು ಇತ್ಯಾದಿ ಹಲವಾರು ತರಹದ ಬೆಳೆಗಳನ್ನು ಬೆಳೆದೆವು. ರಾಸಾಯನಿಕ ಕೃಷಿಕರು ಪಡೆಯುತ್ತಿದ್ದ ಇಳುವರಿಗೆ ಸಮನಾದ ಇಳುವರಿಯನ್ನು ೩–೪ ವರ್ಷಗಳ ಸಾವಯುವ ಕೃಷಿ ಮಾಡಿದ ನಂತರ ಪಡೆದುಕೊಳ್ಳಬಹುದೆಂದು ಕಂಡುಕೊಂಡೆವು. ಅಷ್ಟೇ ಅಲ್ಲ. ನಮ್ಮ ಬೆಳೆಗಳಿಗೆ ರೋಗಗಳ ಮತ್ತು ಕೀಟಗಳ ಬಾಧೆ ಅತ್ಯಂತ ಕಡಿಮೆ ಪ್ರಮಾಣದಲ್ಲಿತ್ತು. ಉದಾಹರಣೆಗೆ ನಮ್ಮ ಜೋಳದ ಬೆಳೆಯಲ್ಲಿ ಅಲ್ಲಲ್ಲಿ ಡೌನಿ ಮಿಲ್ಡ್ಯೂ(Downy Mildew) ಎಂಬ ಕಾಯಿಲೆ ಕಾಣಿಸಿಕೊಂಡಿತ್ತು. ಮಾನಸ *ಗಂಗೋತ್ರಿ*ಯಲ್ಲಿ ಸಸ್ಯ ರೋಗದಲ್ಲಿ ಪ್ರಾಧ್ಯಾಪಕರಾಗಿದ್ದ ನನ್ನ ಮಿತ್ರರು ಅದನ್ನು ನೋಡಿ ಕಾಯಿಲೆ ಬಂದಿದ್ದ ಎಲ್ಲ ಗಿಡಗಳನ್ನೂ ಸುಡಬೇಕೆಂದೂ, ತಕ್ಷಣ ರಾಸಾಯನಿಕ ಔಷಧಿಯನ್ನು ಸಿಂಪಡಿಸಬೇಕೆಂದೂ, ಹಾಗೆ ಮಾಡದಿದ್ದರೆ ನನ್ನ ಮುಂದಿನ ಜೋಳದ ಬೆಳೆಯಲ್ಲಿ ಆ ಕಾಯಿಲೆ ವ್ಯಾಪಕವಾಗಿ ಹರಡಿ ಬೆಳೆಯು ಸಂಪೂರ್ಣವಾಗಿ ನಾಶವಾಗುವುದೆಂದೂ ಎಚ್ಚರಿಕೆ ಕೊಟ್ಟರು. ರಾಸಾಯನಿಕ ಕೃಷಿಯ ಬೆಳೆಗಳಲ್ಲಿ ಹಾಗಾಗುವುದು ನಿಜ. ಆದರೆ ಸಾವಯವ ಕೃಷಿಯ ಭೂಮಿಯಲ್ಲಿ ಹೇರಳವಾಗಿ ಬೆಳೆಯುವ ಅನೇಕ ರೀತಿಯ ಜೀವಾಣುಗಳು, ಡೌನಿ ಮಿಲ್ಡ್ಯೂಗೆ ಕಾರಣವಾದ ಶಿಲೀಂಧ್ರಗಳು ಮಿತಿಮೀರಿ ಬೆಳೆಯದಂತೆ ಹತೋಟಿಯಲ್ಲಿಡುತ್ತವೆ. ಇದನ್ನು ನಾನು ನನ್ನ ಮಿತ್ರರಿಗೆ ತಿಳಿಸಿದೆ. ನಾನು ನಿರೀಕ್ಷಿಸಿದಂತೆ ನಮ್ಮ ಮುಂದಿನ ವರ್ಷದ ಜೋಳದ ಬೆಳೆಯಲ್ಲಿ ಆ ರೋಗ ಹರಡಲಿಲ್ಲ. ಅಲ್ಲದೆ ರಾಸಾಯನಿಕ ಕೃಷಿಕರ ಭತ್ತದ ಬೆಳೆಗಳಲ್ಲಿ ಅತ್ಯಂತ ಸಾಮಾನ್ಯವಾಗಿರುತ್ತಿದ್ದ ಬೆಂಕಿ ರೋಗ ಮತ್ತು ಕಾಂಡ ಕೊರೆಯುವ ಹುಳುಗಳು ಕೂಡ ನಮ್ಮ ಸಾವಯವ ಕೃಷಿಯ ಭತ್ತದ ಬೆಳೆಗಳಲ್ಲಿ ಅಲ್ಲೊಂದು ಇಲ್ಲೊಂದು ಕಾಣಿಸಿಕೊಂಡವೇ ಹೊರತು ಅವು ದೊಡ್ಡ ಪ್ರಮಾಣದಲ್ಲಿ ಹರಡಲಿಲ್ಲ.

ನಾವು ನೆಟ್ಟಿದ್ದ ನಿಂಬೆ, ಮೋಸಂಬಿ ಮತ್ತು ಕಿತ್ತಳೆ ಗಿಡಗಳಿಗೆ, ನೆಟ್ಟ ಮೊದಲ ವರ್ಷದಲ್ಲಿ ಒಂದು ಜಾತಿಯ ಹುಳು ಆ ಗಿಡಗಳ ಎಲ್ಲ ಎಲೆಗಳನ್ನೂ ತಿಂದು ಹಾಕಿತು. ನಮ್ಮ ತತ್ವಗಳಿಗನುಗುಣವಾಗಿ ನಾವು ಯಾವ ಔಷಧಿಯನ್ನೂ ಸಿಂಪಡಿಸಲಿಲ್ಲ. ಆ ಗಿಡಗಳಿಗೆ ಬೇಕಾದ ಆಹಾರಾಂಶಗಳು ನಮ್ಮ ಜಮೀನಿನಲ್ಲಿಲ್ಲದೇ ಈ ಗಿಡಗಳು ಅಶಕ್ತವಾಗಿ ಹುಳಗಳನ್ನು ಆಕರ್ಷಿಸಿರಬಹುದು ಅಥವಾ, ಇವನ್ನು ತಿನ್ನುತ್ತಿರುವ ಹುಳುಗಳಿಗೆ ಪ್ರಕೃತಿಯಲ್ಲಿ ವೈರಿ ಕೀಟಗಳು ಮುಂದಿನ ತಿಂಗಳುಗಳಲ್ಲಿ



ತಮ್ಮ ಭೀಮನಕಟ್ಟೆ ತೋಟದಲ್ಲಿ ಲೇಖಕರು

ಹುಟ್ಟಿಕೊಳ್ಳಬಹುದು ಎಂಬುದು ನಮ್ಮ ನಿರೀಕ್ಷೆಯಾಗಿತ್ತು. ಅದಕ್ಕೆ ಸರಿಯಾಗಿ ಮುಂದಿನ ವರ್ಷ ಈ ಹುಳುಗಳು ಕಾಣಿಸಿಕೊಳ್ಳಲೇ ಇಲ್ಲ. ಆ ಗಿಡಗಳು ಚೆನ್ನಾಗಿ ಬೆಳೆದು ಫಲ ಕೊಡಲು ಆರಂಭಿಸಿದವು. ನಾವು ಅಲ್ಲಿದ್ದ ೯ ವರ್ಷಗಳಲ್ಲಿ ಜಂಬುನೇರಳೆ, ಬಾಳೆ, ಪಪ್ಪಾಯ, ಸೀಬೆ ಇತ್ಯಾದಿ ಹಣ್ಣುಗಳು, ಹಲವಾರು ತರಹದ ತರಕಾರಿಗಳು, ನಾವೇ ಬೆಳೆದ ರಾಗಿ, ಜೋಳ, ಭತ್ತ, ಮುಸುಕಿನ ಜೋಳ ಇತ್ಯಾದಿಗಳನ್ನು ತೃಪ್ತಿಯಾಗುವಷ್ಟು ತಿಂದು ಅಲ್ಲಿಯ ಪ್ರಶಾಂತ ವಾತಾವರಣದಲ್ಲಿ ಖುಷಿಯಾಗಿದ್ದೆವು.

ಸಾವಯವ ಕೃಷಿಯು ಭೂಮಿಯಲ್ಲಿರುವ ಸಾವಯವ ಪದಾರ್ಥಗಳು ಮಳೆಯ ನೀರನ್ನು ಹೆಚ್ಚಿನ ಪ್ರಮಾಣದಲ್ಲಿ ಹಿಡಿದಿಟ್ಟುಕೊಳ್ಳುತ್ತವೆ. ೨–೩ ವಾರಗಳು ಮಳೆ ಬರದಿದ್ದಾಗ, ಅಕ್ಕಪಕ್ಕದ ರಾಸಾಯನಿಕ ಕೃಷಿಕರ ಮಳೆಯಾಧಾರಿತ ಬೆಳೆಗಳು ಒಣಗಿ ಹೋಗುತ್ತಿದ್ದವು. ಆದರೆ, ನಮ್ಮ ಸಾವಯವ ಕೃಷಿಯ ಬೆಳೆಗಳು ಅಷ್ಟು ಸುಲಭವಾಗಿ ಒಣಗದೆ ಹಸಿರಾಗಿರುತ್ತಿದ್ದವು. ನಮ್ಮ ಜಮೀನಿನಲ್ಲೇ ಸಾವಯುವ ಗೊಬ್ಬರಗಳನ್ನು ತಯಾರಿಸಿಕೊಳ್ಳುತ್ತಿದ್ದುದರಿಂದ ರಾಸಾಯನಿಕ ಗೊಬ್ಬರ, ಕೀಟ–ಕಳೆನಾಶಕಗಳಿಗೆ ಕೊಡುವ ಹಣ ಉಳಿದು ನಮಗೆ ವ್ಯವಸಾಯದ ಖರ್ಚೂ ಕಮ್ಮಿಯಾಗುತ್ತಿತ್ತು. ನಮ್ಮ ಬೆಳೆಗಳಲ್ಲಿ ವಿಷಪೂರಿತ ಕೀಟನಾಶಕಗಳು ಮತ್ತು ನೈಟ್ರೇಟುಗಳೂ ಇಲ್ಲದಿರುವುದರಿಂದ ಇವು ಆರೋಗ್ಯಕರ ಕೂಡ. ರಾಸಾಯನಿಕ ಕೃಷಿಯ ಭೂಮಿಯಲ್ಲಿ ಮೇಲ್ಮಣ್ಣು ದೊಡ್ಡ ಪ್ರಮಾಣದಲ್ಲಿ ಕೊಚ್ಚಿಕೊಂಡು ಹೋಗುವುದರಿಂದ ವಿಶ್ವದಾದ್ಯಂತ ಲಕ್ಷಾಂತರ ಎಕರೆ ಭೂಮಿಯು ಬರಡಾಗುತ್ತಿದೆ. ಸಾವಯವ ಕೃಷಿ ಮಾಡುವುದರಿಂದ ಇದನ್ನೂ ತಪ್ಪಿಸಬಹುದು.

## ಕೆಲಸಗಾರರೊಡನೆ ಮೈತ್ರಿಯುತ ವ್ಯವಹಾರ:

ನಮಗೆ ಜಾತೀಯ ಭಾವನೆಗಳು ಎಳ್ಳಷ್ಟೂ ಇರಲಿಲ್ಲ, ನನ್ನ ಅಮೆರಿಕನ್ ಹೆಂಡತಿಗೆ ಜಾತಿಯ ಕಲ್ಪನೆಗಳೆ ಇರಲಿಲ್ಲ. ಜನಗಳ ಗುಣವೇ ಮುಖ್ಯ ಅವರ ಜಾತಿಯಲ್ಲ ಎಂಬುದು ನಮ್ಮ ದೃಢ ನಂಬಿಕೆಯಾಗಿದ್ದರಿಂದ, ನಮ್ಮ ಕೆಲಸಗಾರರನ್ನು ನಮ್ಮ ಮನೆಯವರನ್ನು ನೋಡಿಕೊಳ್ಳುವ ಹಾಗೆಯೇ ನೋಡಿಕೊಳ್ಳುತ್ತಿದ್ದೆವು. ತೋಟದಲ್ಲಿ ನಾವು ಕಟ್ಟಿಕೊಂಡ ಸರಳ ಮನೆಯ 'ಗೃಹಪ್ರವೇಶ' ಮಾಡಿದಾಗ, ಮನೆ ಕಟ್ಟುವುದರಲ್ಲಿ ಪಾತ್ರ ವಹಿಸಿದ್ದ ಎಲ್ಲ ಕೆಲಸಗಾರರಿಗೂ, ನಮ್ಮೆಲ್ಲರ ಜೊತೆಯಲ್ಲೇ ಊಟದ ವ್ಯವಸ್ಥೆ ಮಾಡಿದ್ದೆವು. ಅವರಲ್ಲಿ ಕೆಲವರು ದಲಿತರೂ ಇದ್ದರು. ಇದು ನಮ್ಮ ಬ್ರಾಹ್ಮಣ ಸಂಬಂಧಿಗಳಿಗೆ ಕಸಿವಿಸಿಯುಂಟು ಮಾಡಿದರೂ ನಾನೂ ಮತ್ತು ನನ್ನ ತಂದೆ ಜಾತೀಯ ಭಾವನೆಗಳಿಲ್ಲದವರು ಎಂಬುದು ಸಂಬಂಧಿಗಳಿಗೆಲ್ಲ ಗೊತ್ತಿದ್ದುದರಿಂದ ನಮ್ಮ ಈ ವರ್ತನೆಯನ್ನು ಅವರೆಲ್ಲ ಸಹಿಸಿಕೊಂಡರು. ಕೆಲವರು ಮಾತ್ರ ಇತರ ಎಲ್ಲರ ಊಟ ಆದಮೇಲೆ ಊಟ ಮಾಡಿದರು.

ನಮ್ಮ ಖಾಯಂ ಕೆಲಸಗಾರರಲ್ಲಿ ಮೂವರು ದಲಿತರು, ಇಬ್ಬರು ಪರಿವಾರ ಎಂಬ 'ಮೇಲ್ಜಾತಿ'ಯವರಿದ್ದರು. ನಮ್ಮ ಭಾವಿಯಿಂದ ದಲಿತರು ನೀರು ಸೇದಿದರೆ ಪರಿವಾರದವರು ಆ ಭಾವಿಯ ನೀರನ್ನು ಕುಡಿಯುವುದಿಲ್ಲ ಎಂದು ಮೊದಮೊದಲು ತಕರಾರು ಮಾಡಿದರೂ ಕಾಲಕ್ರಮೇಣ ಅದಕ್ಕೆ ಹೊಂದಿಕೊಂಡರು ಮತ್ತು ಒಂದೇ ಕುಟುಂಬದವರಂತೆ ಕೆಲಸ ಮಾಡಲು ಕಲಿತರು. ಅಷ್ಟೇ ಅಲ್ಲ. ಈ ಸೌಹಾರ್ದತೆಯ ಪರಿಣಾಮವಾಗಿ ನಮ್ಮ ಒಬ್ಬ ದಲಿತ ಕೆಲಸಗಾರ ನಮ್ಮಲ್ಲಿ ಕೆಲಸ ಮಾಡುತ್ತಿದ್ದ ಪರಿವಾರದ ಹುಡುಗಿಯೊಬ್ಬಳನ್ನು ಪ್ರೀತಿಸಿ ಅವಳನ್ನು ಮದುವೆಯಾಗುವ ಬಗ್ಗೆ ಆಲೋಚನೆ ಮಾಡಿದ್ದ! ಹಿಂದೆ ಹಾಗೆ ಮಾಡಿದ್ದ ಒಬ್ಬ ದಲಿತ ಹುಡುಗನನ್ನು ಪರಿವಾರದವರು ಹಿಗ್ಗಾಮುಗ್ಗಾ ಹೊಡೆದು ತಮ್ಮ ಹಳ್ಳಿಯಿಂದ ಓಡಿಸಿದ್ದರು. ಇದನ್ನು ನಮ್ಮ ದಲಿತ ಹುಡುಗನಿಗೆ ವಿವರಿಸಿ ಹೇಳಿ, ಅವರಿಬ್ಬರೂ ತಮ್ಮ ಹಳ್ಳಿಗಳನ್ನು ಬಿಟ್ಟು ಬಹು ದೂರ ಹೋಗಿ ನೆಲೆಸಲು ತಯಾರಾಗಿದ್ದರೆ ಮಾತ್ರ ಮದುವೆ ಮಾಡಿಕೊಳ್ಳಿ ಎಂದು ಸಲಹೆ ಕೊಟ್ಟೆ. ಆದರೆ ಅವನಿಗೆ ಅದು ಸಾಧ್ಯವಿರಲಿಲ್ಲವಾದ್ದರಿಂದ ಮದುವೆಯ ಪ್ರಸ್ತಾಪ ಕೈ ಬಿಟ್ಟ. ನಂತರದಲ್ಲೂ ಅವರಿಬ್ಬರೂ ನಮ್ಮ ಜಮೀನಿನಲ್ಲೇ, ನಾವು ಅಲ್ಲಿಂದ ಬೇರೆ ಕಡೆಗೆ ಹೋಗುವವರೆಗೂ, ಕೆಲಸ ಮಾಡುವುದನ್ನು ಮುಂದುವರೆಸಿದರು. ನಮ್ಮ ಮೂರು ಮಕ್ಕಳೂ ಅಮೇರಿಕಕ್ಕೆ ಹೋಗಿ ನೆಲೆಸಿದರೂ ನಮ್ಮ ಕೆಲಸಗಾರರ ಬಗ್ಗೆ ಪ್ರೀತಿ ವಿಶ್ವಾಸಗಳನ್ನಿಟ್ಟುಕೊಂಡಿದ್ದಾರೆ. ಮಕ್ಕಳೆಲ್ಲ ಕೆಲಸಕ್ಕೆ ಸೇರಿದ ಮೇಲೆ, ಆ ದಲಿತ ಕೆಲಸಗಾರನಿಗೆ ೬೦ ಸಾವಿರ ರೂಪಾಯಿ ಕಳುಹಿಸಿ ಅವನ ಖುಷ್ಕಿ ಜಮೀನಿಗೆ ಭಾವಿ ಮತ್ತು ಪಂಪು ಸೆಟ್ಟು ಹಾಕಿಸಿಕೊಟ್ಟರು.

## ಕೆಲಸಗಾರರಿಗೂ ಪಾಲು-ವೈದ್ಯಕೀಯ ಶುಶ್ರೂಷೆ

ನಮ್ಮ ಕೆಲಸಗಾರರಿಗೆ ನಾವು ಇತರ ಜಮೀನುದಾರರು ಕೊಡುವ ಸಂಬಳಕ್ಕಿಂತ ಜಾಸ್ತಿ ಸಂಬಳ ಕೊಟ್ಟು ಬೇರೆ ಯಾರಿಗೂ ಅದನ್ನು ಹೇಳಬೇಡವೆಂದು ಸೂಚನೆ ಕೊಟ್ಟಿದ್ದೆವು. ಇಲ್ಲದಿದ್ದರೆ ನಾವು ಅಕ್ಕಪಕ್ಕದವರ ಕೋಪಕ್ಕೆ ಗುರಿಯಾಗುತ್ತಿದ್ದೆವು. ಜತೆಗೆ, ನಾವು ಬೆಳೆದ ತರಕಾರಿ-ಹಣ್ಣುಗಳಲ್ಲಿ ಅವರಿಗೆ ಪಾಲು ಕೊಟ್ಟು, ಬಾಳೆ ಹಣ್ಣು, ಪಪ್ಪಾಯ ಹಣ್ಣು ಇತ್ಯಾದಿಗಳನ್ನು ಮಾರಿದಾಗ ಬಂದ ಬೆಲೆಯಲ್ಲಿ ಶೇ.೧೦ ಅನ್ನು ಕೆಲಸಗಾರರಿಗೆ ಕೊಡುತ್ತಿದ್ದೆವು, ಊರಲ್ಲಿ ಯಾರಿಗೆ ಕಾಯಿಲೆ ಬಂದರೂ ನಮ್ಮ ಎತ್ತಿನ ಗಾಡಿಯಲ್ಲಿ (ಇದನ್ನು ನಾವು ನಮ್ಮ 'ಪರಿಸರ ಸ್ನೇಹಿ ಕಾರ್' ಎಂದು ಕರೆಯುತ್ತಿದ್ದೆವು ಮತ್ತು ಅದನ್ನೇ ನಮ್ಮೆಲ್ಲ ಕೃಷಿ ವ್ಯವಹಾರ-ವಿಹಾರಗಳಿಗೂ ಬಳಸುತ್ತಾ ಹಗಲು ರಾತ್ರಿಗಳೆನ್ನದೆ ಅದರ ಪ್ರಯಾಣದ ಆನಂದವನ್ನು ಸವಿಯುತ್ತಿದ್ದೆವು!)ಮೈಸೂರಿಗೆ ಕರೆದುಕೊಂಡು ಹೋಗಿ ನಮ್ಮ ವೈದ್ಯರ ಹತ್ತಿರ ಚಿಕಿತ್ಸೆ ಮಾಡಿಸುತ್ತಿದ್ದೆವು. ಆ ವೈದ್ಯರು 'ನೀವು ಇಷ್ಟೊಂದು ವಿಶ್ವಾಸದಿಂದ ಕೆಲಸಗಾರರಿಗೆ ಸಹಾಯ ಮಾಡುತ್ತಿರುವಾಗ ನಾನು ಹೇಗಪ್ಪ ನಿಮ್ಮ ಹತ್ತಿರ ದುಡ್ಡು ತೆಗೆದುಕೊಳ್ಳಲಿ, ನಿಮ್ಮ ಸಹಾಯದ



**ತಮ್ಮ ತೋಟದ ಮನೆಯ ಮುಂದೆ ತಂದೆ ಮೂರ್ತಿರಾಯರೊಂದಿಗೆ ನಾಗರಾಜ್ ಮತ್ತು ಅವರ ಕುಟುಂಬ**

ಜತೆಗೆ ನನ್ನದೂ ಸ್ವಲ್ಪ ಸಹಾಯ ಬಳಸಿಕೊಳ್ಳಿ' ಎಂದು ಹೇಳಿ ಪುಕ್ಕಟೆಯಾಗಿ ಸಂತೋಷದಿಂದ ರೋಗಿಗಳಿಗೆ ಚಿಕಿತ್ಸೆ ಮಾಡುತ್ತಿದ್ದರು. ಹಾಗಾಗಿ ಅತಿಯಾದ ಖರ್ಚು ಇಲ್ಲದೆ ನಮ್ಮ ಹಳ್ಳಿಯವರಿಗೆ ವೈದ್ಯಕೀಯ ಸಹಾಯ ದೊರಕುತ್ತಿತ್ತು. ಈ ಸೌಲಭ್ಯವನ್ನು ನಮ್ಮ ಕೆಲಸಗಾರಿಗೆ ಮಾತ್ರವಲ್ಲದೆ ಹಳ್ಳಿಯಲ್ಲಿ ಎಲ್ಲರಿಗೂ ಒದಗಿಸುತ್ತಿದ್ದೆವು. ಅವರಲ್ಲಿ ಸುಮಾರು ಹೆಂಗಸರಿಗೆ ಎರಡು ಮಕ್ಕಳಾದ ಮೇಲೆ, ನ್ಯಾನ್ಸಿ ಅವರ ಜತೆ ಆಸ್ಪತ್ರೆಗೆ ಹೋಗಿ ಮಕ್ಕಳ ಸಂತಾನ ತಡೆಯುವ ಶಸ್ತ್ರಚಿಕಿತ್ಸೆ ಮಾಡಿಸಿದ್ದಳು. ನಮ್ಮ ಎತ್ತಿನ ಗಾಡಿಯು ಹಳ್ಳಿಯಲ್ಲಿ ಯಾರಿಗೆ ಬೇಕಾದರೂ ಲಭ್ಯವಿರುತ್ತಿತ್ತು. ಇವೆಲ್ಲ ಕಾರಣಗಳಿಂದ ನಮಗೆ ಕಳಲವಾಡಿ ಗ್ರಾಮದ ಎಲ್ಲ ಜನರ ಸ್ನೇಹ ಮತ್ತು ಸಹಕಾರ ಸಿಕ್ಕುತ್ತಿತ್ತು. ಆದರೆ, ನಾವು ನಮ್ಮ ಕೃಷಿಯಿಂದ ನಮ್ಮ ಸಂಸಾರವನ್ನು ಮತ್ತು ಐದು ಜನ ಕೆಲಸಗಾರರನ್ನು ೮ ವರ್ಷ ಚೆನ್ನಾಗಿ ಸಾಕಿದ್ದಲ್ಲದೆ, ದೊಡ್ಡ ಪ್ರಮಾಣದಲ್ಲಿ ಜಮೀನಿನಿಂದ ಲಾಭ ಗಳಿಸಿಕೊಳ್ಳಲಿಲ್ಲ. ಮುಂದೊಂದು ದಿನ ಜಮೀನನ್ನು ಮಾರಿದಾಗಲೂ ನಾವು ಖರ್ಚು ಮಾಡಿದ್ದಷ್ಟು ಹಣಕ್ಕೇ ಮಾರಿದೆವು.

ತೋಟಗಳ ಯಜಮಾನರಿಗೂ ಕೆಲಸಗಾರರಿಗೂ ಹಲವಾರು ವಿಷಯಗಳಲ್ಲಿ ಘರ್ಷಣೆಯಾಗುವುದು ಅತಿ ಸಾಮಾನ್ಯ. ಅದಕ್ಕೆ ಮುಖ್ಯ ಕಾರಣ, ಯಜಮಾನರುಗಳು ಆಳುಗಳಿಗೆ ಕಡಿಮೆ ಸಂಬಳ ಕೊಟ್ಟು ಹೆಚ್ಚು ಕೆಲಸ ಮಾಡಿಸಿಕೊಳ್ಳುವ ಧೋರಣೆ ಇಟ್ಟುಕೊಂಡಿರುತ್ತಾರೆ. ಕೆಲಸಗಾರರು ಸಾಧ್ಯವಾದಷ್ಟು ಹೆಚ್ಚು ಸಂಬಳ ಪಡೆದುಕೊಂಡು, ಕಡಿಮೆ ಕೆಲಸ ಮಾಡುವ ಧೋರಣೆ ಇಟ್ಟುಕೊಂಡಿರುತ್ತಾರೆ. ಇಬ್ಬರ ಮಧ್ಯೆ ಪ್ರೀತಿ ವಿಶ್ವಾಸ ಮತ್ತು ಕಾಳಜಿಗಳ ಕೊರತೆ ಇರುವುದು ಅತಿ ಸಾಮಾನ್ಯ. ಜಮೀನುದಾರರಿಗೂ ಕೆಲಸಗಾರರಿಗೂ ತೋಟದ ಬೆಳೆವಣಿಗೆಯಲ್ಲಿ ಲಾಭವಿದ್ದರೆ ಮತ್ತು ಕೆಲಸಗಾರರಿಗೆ ಜಮೀನುದಾರರು ಗೌರವ, ವಿಶ್ವಾಸ, ಕಾಳಜಿ ಮತ್ತು ಪ್ರೀತಿಗಳನ್ನು ಕೊಟ್ಟರೆ, ಅವರುಗಳು ಕೆಲಸಗಾರರು ಅದಕ್ಕೆ ಸಕಾರಾತ್ಮಕವಾಗಿ ಸ್ಪಂದಿಸುವ ಸಾಧ್ಯತೆ ಹೆಚ್ಚು. ಹಾಗೆ ಸ್ಪಂದಿಸುವ ಕೆಲಸಗಾರರು, ಸಂಬಳಕ್ಕೆ ಮಾತ್ರ ಕೆಲಸಗಾರರಾಗಿರುವ ಬದಲು, ತೋಟದ ಬೆಳೆವಣಿಗೆಯಲ್ಲಿ ಸಮ ಪಾಲುದಾರರಾಗುತ್ತಾರೆ ಎಂಬುದರ ಅನುಭವ ನಮಗಾಯ್ತು. ಕೆಲಸಗಾರರ ಜೊತೆ ನಾವೂ ಕೆಲಸ ಮಾಡಿ, ಹಾಗೆ ಮಾಡುವುದರಲ್ಲಿನ ಆನಂದ-ತೃಪ್ತಿಗಳನ್ನು ಅನುಭವಿಸಿದೆವು. ನಮ್ಮ ಕೃಷಿಯ ಮೊದಲ ೩-೪ ವರ್ಷಗಳಲ್ಲಿ ಒಂದು ವರ್ಷ ನಮ್ಮ ಮುಖ್ಯ ಬೆಳೆಯಾಗಿದ್ದ ಜೋಳಕ್ಕೆ ಮಾರುಕಟ್ಟೆಯ ಬೆಲೆ ಕ್ವಿಂಟಾಲಿಗೆ ೧೫೦ ರುಪಾಯಿಯಿಂದ ೭೦ ರುಪಾಯಿಗೆ ಇಳಿದು ನಮಗೆ ಕೆಲಸಗಾರರಿಗೆ ಕೊಡುವುದಕ್ಕೆ ಹಣ ಸಾಕಾಗಲಿಲ್ಲ. ಆಗ ನಮ್ಮ ಎಲ್ಲ ಕೆಲಸಗಾರರೂ ಸಂಬಳಕ್ಕೆ ಬದಲು ಹೋದ ವರ್ಷದ ಬೆಲೆಯಾಗಿದ್ದ ಕ್ವಿಂಟಾಲಿಗೆ ೧೫೦ ರುಪಾಯಿಯನ್ನೇ ಕೊಟ್ಟು ಜೋಳ ಕೊಂಡರು!

## ದಲಿತ ಮಗ:

ನಮ್ಮ ತೋಟದಲ್ಲಿ ಕೆಲಸ ಮಾಡುತ್ತಿದ್ದವರಲ್ಲಿ ಮೂವರು ದಲಿತರಾಗಿ ಹುಟ್ಟಿ ಬೆಳೆದಿದ್ದವರು. ಅವರೆಲ್ಲರಲ್ಲಿ ಅತ್ಯಂತ ಶುಭ್ರವಾಗಿದ್ದವನು, ಸೌಮ್ಯವಾಗಿದ್ದವನು, ಪ್ರಾಮಾಣಿಕ ಮತ್ತು ವಿಶ್ವಾಸಿಯಾಗಿದ್ದವನು ದಲಿತ ಚಿಕ್ಕಹೈದ. ಪ್ರತಿನಿತ್ಯ ಸ್ನಾನಮಾಡಿ ಶುಭ್ರವಾದ ಬಟ್ಟೆಯನ್ನುಟ್ಟುಕೊಂಡು

ಕೆಲಸಕ್ಕೆ ಬರುತ್ತಿದ್ದ. ನ್ಯಾನ್ಸಿಯು ತನ್ನ ತವರಿಗೆ ಸಂಬಂಧಿಸಿದ ಕರ್ತವ್ಯವೊಂದನ್ನು ನಿರ್ವಹಿಸಲು ಅಮೇರಿಕಕ್ಕೆ ಹೋಗಿದ್ದ ಅವಧಿಯಲ್ಲಿ ನಾನು ಮತ್ತು ಮಕ್ಕಳಿಗೆ ಅಡಿಗೆ ಮಾಡಿ ಬಡಿಸುವ ಕೆಲಸವನ್ನು ಚಿಕ್ಕಹೈದನೇ ಮಾಡುತ್ತಾ, ನಮ್ಮ ಮನೆಗೆ ಹಿರಿಯ ಮಗನಂತಿದ್ದ. ಅವನಿಗೆ ಹಣದ ವಹಿವಾಟೂ ಸೇರಿ ಯಾವ ಕೆಲಸವನ್ನು ಬೇಕಾದರೂ ಸಂಪೂರ್ಣ ನಂಬಿಕೆಯಿಂದ ಒಪ್ಪಿಸಬಹುದಾಗಿತ್ತು. ನಮ್ಮ ಜಮೀನು ಮಾರಿ ನಾವು ತೀರ್ಥಹಳ್ಳಿಗೆ ಬಂದಾಗ, ಅವನೂ ನಮ್ಮ ಜತೆ ಬರಲಿಕ್ಕೆ ತಯಾರಿದ್ದ. ತಂದೆ, ತಾಯಿ, ಅಣ್ಣ ತಮ್ಮಂದಿರಿಂದ ಅವನನ್ನು ಬೇರ್ಪಡಿಸುವುದು ಸರಿಯಲ್ಲ ಎಂದು ನಮಗನ್ನಿಸಿತು. ಅಲ್ಲದೆ ಅವನಿಗೆ ಅಲ್ಲಿ ಜಮೀನು ಕೂಡ ಇತ್ತು. ನಾವು ಒಬ್ಬ ಖಾಯಂ ಕೆಲಸಗಾರನನ್ನು ಇಟ್ಟುಕೊಳ್ಳುವ ಅಗತ್ಯವಿಲ್ಲದಷ್ಟು ಸಣ್ಣ ಪ್ರಮಾಣದಲ್ಲಿ ವ್ಯವಸಾಯ ಮಾಡುವುದೆಂದು ತೀರ್ಮಾನಿಸಿದ್ದೆವು. ಅಷ್ಟು ಹಣವೂ ನಮ್ಮಲ್ಲಿರಲಿಲ್ಲ. ಆದ್ದರಿಂದ ನಮ್ಮ 'ಹಿರಿಯ ಮಗ'ನನ್ನು ಕಳಲವಾಡಿಯಲ್ಲೆ ಬಿಟ್ಟು ತೀರ್ಥಹಳ್ಳಿಗೆ ಬಂದೆವು.

ಚಿಕ್ಕಹೈದ ದಲಿತನಾದರೂ ಅವನ ಬಗ್ಗೆ ಕಳಲವಾಡಿಯ ಜನರಲ್ಲಿ ತುಂಬ ಗೌರವವಿತ್ತು. ಏಕೆಂದರೆ ಅವನ ಮೇಲೆ ಪ್ರತಿ ಶನಿವಾರ ಶನಿದೇವರು ಬರುತ್ತಿತ್ತು. ಹಾಗೆ ಬಂದಾಗ ಹಳ್ಳಿಯ ಜನರು ಅವನಲ್ಲಿ ತಮ್ಮ ಕಷ್ಟಗಳಿಗೆ ಪರಿಹಾರ ಕೇಳುತ್ತಿದ್ದರು. ಕಾಯಿಲೆ ಬಂದವರು ಅವನು ಕೊಟ್ಟ ತಾಯಿತವನ್ನು ಕಟ್ಟಿಕೊಳ್ಳುತ್ತಿದ್ದರು. ನನ್ನ ಹತ್ತಿರ ಕೆಲವು ಕಾಲ ಕೆಲಸ ಮಾಡಿದ ಮೇಲೆ, ಅವನಿಗೆ ತಾಯಿತದ ಜತೆಗೆ ಸರಿಯಾದ ಔಷಧಿಯನ್ನೂ ಕೊಟ್ಟರೆ ಒಳ್ಳೆಯದು ಎಂಬುದರ ಬಗ್ಗೆ ತಿಳಿವಳಿಕೆಯನ್ನು ನಾನು ಕೊಟ್ಟಿದ್ದೆ. ಅವನ ಮೇಲೆ ಬರುತ್ತಿದ್ದ ಶನಿದೇವರಿಗೂ ಅದು ಅರ್ಥವಾಯಿತೋ ಏನೋ, ಆ ದೇವರು ತಾಯಿತದ ಜತೆಗೆ 'ಜಯರಾಮ ಡಾಕಟ್ರ ತಾವು (=ಕೈಯಲ್ಲಿ) ಔಷಧಿಯನ್ನೂ ತೆಗೆದುಕೊಳ್ಳುವಂತೆ' ಸೂಚಿಸಲು ಪ್ರಾರಂಭಿಸಿತು! ಹೀಗೇ, ದೆವ್ವ-ಭೂತಗಳ ಬಗ್ಗೆ ಆ ಹಳ್ಳಿಯ ಜನರಲ್ಲಿದ್ದ ನಂಬಿಕೆ-ಭಯಗಳನ್ನೂ, ಅವು ಹೇಗೆ ಕಳ್ಳತನಕ್ಕಾಗಿ ಹುಟ್ಟಿಸಲಾಗಿರುವ ಪುಕಾರುಗಳು ಮಾತ್ರವೆಂಬುದನ್ನು ಕೆಲವು ಕಳ್ಳತನಗಳನ್ನು ಬಯಲುಗೊಳಿಸಿ ತೋರಿಸುವ ಮೂಲಕ ನಿವಾರಿಸಿದೆವು.

## ಮಕ್ಕಳ ವಿದ್ಯಾಭ್ಯಾಸ:

ನಮ್ಮ ತೋಟವು ಮೈಸೂರಿನಿಂದ ೧೨ ಕಿಲೋ ಮೀಟರ್ ದೂರದಲ್ಲಿದ್ದುದರಿಂದ ಮತ್ತು ಮಕ್ಕಳಿಗೆ ಹಳ್ಳಿಯ ಜನಗಳ ಒಡನಾಟ ಇರಲಿ ಎಂಬ ಎರಡು ಕಾರಣಗಳಿಗೆ, ನಮ್ಮ ಮಕ್ಕಳನ್ನು ತೋಟದಿಂದ ೪ ಕಿಲೊಮೀಟರು ದೂರದಲ್ಲಿದ್ದ ಉದ್ಬೂರು ಎಂಬ ಹಳ್ಳಿಯಲ್ಲಿದ್ದ ಸರ್ಕಾರಿ ಶಾಲೆಗೆ ಕಳುಹಿಸುತ್ತಿದ್ದೆವು. ಪ್ರತಿ ದಿನ ಮಕ್ಕಳು ಕಾಲುದಾರಿಯಲ್ಲಿ ನಡೆದುಕೊಂಡು ಹೋಗುತ್ತಿದ್ದವು. ಮಕ್ಕಳು ಹಳ್ಳಿಯ ಶಾಲೆಗೆ ಮತ್ತು ಅಲ್ಲಿಯ ಮಕ್ಕಳಿಗೆ ಸುಲಭವಾಗಿ ಹೊಂದಿಕೊಂಡಿದ್ದವು. ಹಳ್ಳಿಯ ಜನಗಳ ಸಂಪರ್ಕದಿಂದ ಅವರುಗಳ ಬಗ್ಗೆ ಕಾಳಜಿ, ಸಹಾನುಭೂತಿಗಳನ್ನು ಬೆಳೆಸಿಕೊಂಡ ನಮ್ಮ ಮಕ್ಕಳು ಈಗ ಅಮೇರಿಕಾದಲ್ಲಿದ್ದರೂ ಆ ಪ್ರೀತಿಯ ಭಾವನೆಗಳನ್ನು ಇನ್ನೂ ಉಳಿಸಿಕೊಂಡಿದ್ದಾರೆ. ನಿಜ, ಹಳ್ಳಿಯ ಶಾಲೆಯಲ್ಲಿ ವಿದ್ಯಾಭ್ಯಾಸ ಕೆಳ ದರ್ಜೆಯಲ್ಲೇ ಇತ್ತು. ಅದರಿಂದ ಹಿರಿಯ ಮಗಳು ಕಮಲ ಕಾಲೇಜು ಸೇರಿದಾಗ ಮೊದಮೊದಲು ಅವಳಿಗೆ ಸ್ವಲ್ಪ ಕಷ್ಟವಾಯಿತು ಆದರೆ, ಕಾಲಕ್ರಮೇಣ ಅವಳ ಅಮೇರಿಕನ್ ಅಜ್ಜಿಯ ಸಹಕಾರದಿಂದ ಅಮೇರಿಕಾಕ್ಕೆ ಹೋಗುವ ಅವಕಾಶ ಸಿಕ್ಕಿ, ಅಲ್ಲಿ ಅವಳು ಪರಿಸರ ವಿಜ್ಞಾನದಲ್ಲಿ ಪದವಿಯನ್ನು ಪಡೆದುಕೊಂಡು, ಒಳ್ಳೆಯ ಕೆಲಸ ಪಡೆದುಕೊಂಡು ಉತ್ತಮವಾಗಿ ಆ ಕೆಲಸವನ್ನು ನಿರ್ವಹಿಸುತ್ತಿದ್ದಾಳೆ. ಹಳ್ಳಿಯ ಶಾಲೆಯಲ್ಲಿ ಓದಿದ್ದ ಮಗ ಕೈಲಾಸ ಮತ್ತು ಮಗಳು ಆಶಾ ಕೂಡ ಎಂ.ಎಸ್. ಮತ್ತು ಮತ್ತು ಎಂ.ಎ. ಪದವಿಗಳನ್ನು ಉತ್ತಮ ದರ್ಜೆಯಲ್ಲಿ ಸಂಪಾದಿಸಿಕೊಂಡು ಒಳ್ಳೆಯ ಕೆಲಸಗಳಲ್ಲಿದ್ದಾರೆ.


ತೋಟದಲ್ಲಿ ಮಕ್ಕಳ ಆಟ

## ಸಹಕಾರದಲ್ಲಿ ರಸ್ತೆಯ ನಿರ್ಮಾಣ:

ಮುಖ್ಯ ಟಾರು ರಸ್ತೆಯಿಂದ ನಮ್ಮ ತೋಟಕ್ಕೆ ಹೋಗುವ ೪ ಕಿಲೊಮೀಟರು ಉದ್ದದ ಕಚ್ಚಾ ರಸ್ತೆಯು ನಾನು ತೋಟವನ್ನು ತೆಗೆದುಕೊಂಡಾಗ ಹಳ್ಳಕೊಳ್ಳಗಳಿಂದ ತುಂಬಿತ್ತು. ಸರಕಾರವು ಈ ರಸ್ತೆಯನ್ನು ಸರಿಪಡಿಸುತ್ತಿಲ್ಲ ಎಂಬ ಕೊರಗು ಎಲ್ಲರಲ್ಲೂ ಇತ್ತು. ನಾವು ಮೂರು ಜನ ಜಮೀನುದಾರರು ಸೇರಿ ನಾವೇ ಏಕೆ ರಸ್ತೆಯನ್ನು ರಿಪೇರಿ ಮಾಡಬಾರದು ಎಂದು ಯೋಚಿಸಿ, ಪ್ರತಿ ಸೋಮವಾರ ಮೂರು ಗಾಡಿಗಳನ್ನು ಹೂಡಿಕೊಂಡು, ಗುಡ್ಡದ ಮೇಲೆ ಹೇರಳವಾಗಿದ್ದ ಜಲ್ಲಿ ಕಲ್ಲುಗಳನ್ನು ತುಂಬಿಕೊಂಡು ಹಳ್ಳಗಳನ್ನೆಲ್ಲ ಮುಚ್ಚಿದೆವು. ರೋಣಗಲ್ಲಿನಲ್ಲಿ ರಸ್ತೆಯನ್ನು ಸಮ ಮಾಡಲು ಹಲವಾರು ವಾರಗಳು ಕೆಲಸ ಮಾಡಿ, ಅಚ್ಚುಕಟ್ಟಾದ ರಸ್ತೆ ತಯಾರು ಮಾಡಿದೆವು.

## ನಗರಸಭೆಯಿಂದ ಕೊಡುಗೆ:

ಕಳಲವಾಡಿಯಲ್ಲಿ ೯ ವರ್ಷಗಳು ಹಲವಾರು ವಿಷಯಗಳಲ್ಲಿ ಆನಂದಕರವಾದ, ತೃಪ್ತಿಕರವಾದ, ವೈಯಕ್ತಿಕವಾಗಿ ನಮ್ಮ ಜ್ಞಾನ ಮತ್ತು ತಿಳಿವಳಿಕೆಗಳನ್ನು ಹೆಚ್ಚಿಸಿದ ಜೀವನವನ್ನು ಅನುಭವಿಸಿದೆವು. ನಂತರ, ಮೈಸೂರು ನಗರದ ಪುರಸಭೆಯು ನಗರದ ಒಂದು ಭಾಗದ ಮಲಮೂತ್ರ ಮತ್ತು ಇತರ ರಾಸಾಯನಿಕಗಳು ಸೇರಿದ, ಯಾವ ತರಹದಲ್ಲೂ ಪರಿಷ್ಕರಿಸದೇ ಇರುವ ಕೊಳಚೆ ನೀರನ್ನು ನಮ್ಮ ಕೃಷಿ ಜಮೀನಿಗೆ ನೀರು ಒದಗಿಸುತ್ತಿದ್ದ 'ಎಣ್ಣೆ ಹೊಳೆ'ಗೆ ಬಿಡಲು ತೀರ್ಮಾನಿಸಿತು. ಇದನ್ನು ಪ್ರತಿಭಟಿಸಲು ನಮ್ಮ ಸುತ್ತಮುತ್ತಲಿನ ರೈತರನ್ನು ಸಂಘಟಿಸಲು ಪ್ರಯತ್ನಿಸಿದೆವು. ಆದರೆ ಎಲ್ಲರೂ ಕೊಳಚೆ ನೀರು ಒಳ್ಳೆಯ ಗೊಬ್ಬರವನ್ನು ಪುಕ್ಕಟೆಯಾಗಿ ಒದಗಿಸುತ್ತದೆ ಎಂದು ನಂಬಿ ಅದನ್ನು ಸ್ವಾಗತಿಸಿದರು. ಗೊಬ್ಬರದ ಜತೆಗೆ ಬರುವ ಹಾನಿಕರ ರಾಸಾಯನಿಕಗಳು, ರೋಗಗಳನ್ನು ಹರಡುವ ಕ್ರಿಮಿಗಳು ಇತ್ಯಾದಿಗಳ ಬಗ್ಗೆ ನಾನು ಅವರಿಗೆ ವಿವರಿಸಲು ಮಾಡಿದ ಪ್ರಯತ್ನವು ವ್ಯರ್ಥವಾಯಿತು. ತಾತ್ಕಾಲಿಕವಾಗಿ ಸಿಗುವ ಲಾಭಕ್ಕಾಗಿ ಅದರಿಂದಾಗುವ ದುಶ್ಪರಿಣಾಮಗಳನ್ನು ನಿರ್ಲಕ್ಷಿಸುವುದು, ನಮ್ಮ ರಾಜಕಾರಣಿಗಳೂ ಸೇರಿ ಎಲ್ಲರಿಗೂ ಇರುವ ಕೆಟ್ಟ ಕಾಯಿಲೆ. ಕಡೆಗೆ ನಾವು ಜಮೀನನ್ನು ಮಾರಿ, ಇನ್ನೂ ಅಷ್ಟೊಂದು ಕಲುಷಿತವಾಗಿಲ್ಲದಿದ್ದ ತೀರ್ಥಹಳ್ಳಿ ಬಳಿ ತುಂಗಾನದಿ ತೀರದಲ್ಲಿ ಮರಳಿನ ಸುಂದರ ಬೀಚುಳ್ಳ ಭೀಮನಕಟ್ಟೆಗೆ ಬಂದೆವು. ಅಲ್ಲಿ ೨ ಎಕರೆ ಜಮೀನು ಖರೀದಿಸಿ, ಅದರಲ್ಲಿ ಒಂದು ಸರಳವಾದ ಮನೆ ಕಟ್ಟಿಕೊಂಡು ನೆಲೆಸಿದೆವು.

## ಈಗ ಮಂಗಗಳಿಗಾಗಿ ಕೃಷಿ!

ಹಲವಾರು ತರಹದ ಹಣ್ಣಿನ ಗಿಡಗಳನ್ನು ನೆಟ್ಟು, ಅದರಿಂದ ಬರುವ ಹಣ್ಣುಗಳನ್ನು ಪುಕ್ಕಟೆಯಾಗಿ, ಅಥವಾ ಅತ್ಯಂತ ಕಡಿಮೆ ದರದಲ್ಲಿ ಭೀಮನಕಟ್ಟೆಯ ಮತ್ತು ಸುತ್ತಮುತ್ತಲ ಹಳ್ಳಿಗಳ ಜನರಿಗೆ ಕೊಡುವ ಯೋಜನೆ ಹಾಕಿ, ಅಂತಹ ಗಿಡಗಳನ್ನು ನೆಟ್ಟೆವು. ಈಗ ಹಲಸು, ಮಾವು, ಸಪೋಟ, ಸೀಬೆ, ನೆಲ್ಲಿ, ಬಾಳೆ, ಬಾದಾಮಿ. ತೆಂಗು ಇತ್ಯಾದಿ ಮರಗಳು ಸಮೃದ್ಧವಾಗಿ ಫಲ ಕೊಡುತ್ತಿವೆ. ಮಂಗಗಳು ಹಿಂಡುಹಿಂಡಾಗಿ ಬಂದು ಎಲ್ಲ ಹಣ್ಣುಗಳನ್ನೂ ತಿಂದು ಅಥವಾ ಹಾಳು ಮಾಡಲು ತೊಡಗಿದಾಗ ಕೆಲವು ಮರಗಿಡಗಳಿಗೆ ಕಬ್ಬಿಣದ ಜಾಲರಿ ಹಾಕಿ, ನಮಗೆ ಸಾಕಾಗುವಷ್ಟು ಪ್ರಮಾಣದಲ್ಲಿ ಹಣ್ಣುಗಳನ್ನು ಮಾತ್ರ ಉಳಿಸಿಕೊಳ್ಳುತ್ತಿದ್ದೇವೆ. ಇಂತಹ ಜಾಲರಿಗಳನ್ನು ಹೆಚ್ಚುಹೆಚ್ಚಾಗಿ ಬಳಸಿ ನಮಗೆ ಬೇಕಾದ ಎಲ್ಲ ಹಣ್ಣು ತರಕಾರಿಗಳನ್ನೂ ಬೆಳೆಯುವ ಪ್ರಯತ್ನದಲ್ಲಿದ್ದೇವೆ. ಸಹಜ ಕೃಷಿಯಲ್ಲಿ ಉತ್ತಮ ಬೆಳೆಗಳನ್ನು ತೆಗೆಯಬಹುದು ಮತ್ತು ನಮ್ಮ ಪರಿಸರದೊಂದಿಗೆ ಸಮರಸವಾಗಿ ಬೆರೆತು ಸಂತೋಷ-ನೆಮ್ಮದಿಗಳಿಂದ ಹೆಚ್ಚು ಕಾಲ ಬಾಳುತ್ತಾ ಸುತ್ತಲಿನ ಸಮಾಜಕ್ಕೂ ನೆರವಾಗಬಹುದೆಂಬುದೇ ಈ ಪ್ರಯೋಗದಿಂದ ನಾವು ಕಲಿತಿರುವ ಬದುಕಿನ ದೊಡ್ಡ ಪಾಠ. *

## ಪ್ರೊ. ಬಿ. ಕೃಷಪ್ಪ ನೆನಪಿನ ಮಾಲೆ-೧೧

–ಇಂದಿರಾ ಬಿ. ಕೃಷ್ಣಪ್ಪ

# ಅಂಬೇಡ್ಕರರ ಸೆಳೆತ
# ಕಾವ್ಯದ ಮೊರೆತ

**ಸ**ಮಾಜವಾದಿ ಯುವಜನ ಸಭೆಯ ಕಾರ್ಯದರ್ಶಿಯಾಗಿದ್ದ ಕೃಷ್ಣಪ್ಪನವರ ನೇತೃತ್ವದಲ್ಲಿ ೧೯೭೩–೧೯೭೪ ರಲ್ಲಿ ಅನೇಕ ಹೋರಾಟಗಳನ್ನು ಶಿವಮೊಗ್ಗ – ಭದ್ರಾವತಿಯಲ್ಲಿ ಕೈಗೆತ್ತಿಕೊಳ್ಳಲಾಗಿತ್ತು. ಅದರಲ್ಲಿ ಬಹಳ ಪ್ರಮುಖವಾದುದು ಭದ್ರಾವತಿಯ ಕಬ್ಬಿಣ ಮತ್ತು ಉಕ್ಕು ಕಾರ್ಖಾನೆಯಲ್ಲಿ ನೇರ ನೇಮಕಾತಿಯ ಹೆಸರಿನಲ್ಲಿ ಶೂದ್ರರಿಗೆ ಉದ್ಯೋಗಾವಕಾಶಗಳು ಕುಂಠಿತವಾಗುತ್ತಿರುವುದು. ಮತ್ತೊಂದು, ಭದ್ರಾವತಿ ಕಾಗದ ಕಾರ್ಖಾನೆಯ ಎಂ.ಡಿ.ಯವರ ಮಗಳ ಮದುವೆಯ ಸಿದ್ಧತೆಗಾಗಿ ಕಾರ್ಖಾನೆಯ ನೌಕರವರ್ಗದ ದುರ್ಬಳಕೆ ಹಾಗೂ ಅದ್ದೂರಿ ಮದುವೆ ತಯಾರಿಗಳು ಇವೆರಡು ವಿಚಾರಗಳಲ್ಲಿ ಪ್ರತಿಭಟನೆಗಳು ನಡೆದವು. ಸರ್ಕಾರದ ನಿಯಮಗಳನ್ವಯ 'ಮೀಸಲಾತಿ' ಪಾಲಿಸದೆ, ನೇರ ನೇಮಕಾತಿ ಹೆಸರಿನಲ್ಲಿ ಒಂದು ವರ್ಗದ ಜನರೇ ಉದ್ಯೋಗಗಳನ್ನು ಕಬಳಿಸುತ್ತಿರುವುದರ ವಿರುದ್ಧ ಪ್ರತಿಭಟಿಸುತ್ತಲೇ, ಶೂದ್ರರಿಗೆ ಸಮಾನ ಉದ್ಯೋಗಾವಕಾಶಗಳ ಕೋರಿಕೆಗಳನ್ನು ಕಾರ್ಖಾನೆಯ ಆಡಳಿತ ಮಂಡಳಿಗೆ ಕಳುಹಿಸಲಾಗಿತ್ತು. ಈ ಹೋರಾಟದಲ್ಲಿ, ಎಂ.ಐ.ಎಸ್.ಎಲ್‌ನ ಎನ್.ಗಿರಿಯಪ್ಪ, ಚಂದ್ರಪ್ರಸಾದ್ ತ್ಯಾಗಿ, ರಾಜಣ್ಣದ್ವಯರು, ಶಿವಪ್ರಸಾದ್, ದೊಡ್ಡಮನಿ, ಸಿದ್ದಯ್ಯ, ರಾಜಾರಾವ್, ಹಾಗೂ ನಾಗೇಂದ್ರರಾವ್‌ರವರು ಪ್ರಮುಖ ಪಾತ್ರ ವಹಿಸಿದ್ದರು.

ಕಾಗದ ಕಾರ್ಖಾನೆಯ ಎಂ.ಡಿ.ಯವರ ಮಗಳ ವೈಭವದ ಮದುವೆ ದಿನದಂದು ಯುವಜನ ಸಭಾದ ಕಾರ್ಯಕರ್ತರೊಂದಿಗೆ ಕಾಗದ ಕಾರ್ಖಾನೆಯ ನೌಕರರಾದ ಈರಯ್ಯ, ಚಂದ್ರನ್, ಧರ್ಮಪ್ರಭು ನರಸಿಂಹಯ್ಯ, ಟಿ.ಎನ್. ರಂಗೇಗೌಡ, ಚಿದಾನಂದ, ಮಹಾರುದ್ರ ಮತ್ತಿತರರು ಸೇರಿ ಕಲ್ಯಾಣಮಂಟಪದ ಮುಂಭಾಗ ಕಪ್ಪು ಬಾವುಟ ಪ್ರದರ್ಶನ ಮಾಡಿದ್ದರು. ಮೊದಲೇ ಕರಪತ್ರ ಹೊರಡಿಸಿದ್ದರಿಂದ, ಎಂ.ಡಿ.ಯವರು ಪೂರ್ವಭಾವಿಯಾಗಿ ಪೋಲೀಸ್ ನೆರವನ್ನು ಪಡೆದಿದ್ದರು. ಅದ್ದೂರಿ ವಿವಾಹ, ಕಾರ್ಖಾನೆಯ ಸಿಬ್ಬಂದಿಯ ದುರ್ಬಳಕೆ, ಕಾರ್ಖಾನೆಯ ಸಾರಿಗೆ, ಸೌಕರ್ಯಗಳು ದುರುಪಯೋಗವಾಗುತ್ತಿರುವುದರ ವಿರುದ್ಧ ಘೋಷಣೆಗಳನ್ನು ಕೂಗಲಾಯಿತು. ಸ್ಲೋಗನ್‌ಗಳ ಆರ್ಭಟ ಜಾಸ್ತಿಯಾದಂತೆ, ಆಹ್ವಾನಿತರ ಗಮನ ಇತ್ತ ಹರಿದು, ಅಲ್ಲಿ ಜನ ಜಮಾಯಿಸುವುದನ್ನು ತಡೆಗಟ್ಟಲು, ಚಳುವಳಿಗಾರರನ್ನು ಬಂಧಿಸಲಾಯಿತು. ಸಂಜೆಯ ಹೊತ್ತಿಗೆ ಬಿಡುಗಡೆಯಾಗಿ, ನಮ್ಮ ಮನೆಯಲ್ಲಿ ಎಲ್ಲರೂ ಸೇರಿದ್ದರು. ಈ ಪ್ರತಿಭಟನೆಯ ಪೂರ್ವಾಪರಗಳನ್ನು ಚರ್ಚಿಸುತ್ತಾ, ಇಂತಹ ಅದ್ದೂರಿ ಮದುವೆಗಳನ್ನು ಮಾಡಿಕೊಳ್ಳಲೂಬಾರದು; ಮತ್ತು ಅಂತಹ ಮದುವೆಗಳಿಗೆ ಹೋಗಲೂಬಾರದೆಂದು ಕಾರ್ಯಕರ್ತರು ನಿರ್ಧರಿಸಿಕೊಂಡರು.

ಇದರೊಂದಿಗೇ, ಸಾಹಿತ್ಯ ವೇದಿಕೆಯೊಂದನ್ನು ರಚಿಸಿಕೊಂಡು ಕೃಷ್ಣಪ್ಪ–"ಅಸ್ಪೃಶ್ಯತೆ ಮತ್ತು ಗಾಂಧೀಜಿ" ಎಂಬ ಕಿರು ಕೈಪಿಡಿಯನ್ನು ಹೊರತಂದರು. ಇದು ಅಂದಿನ ಯುವಜನಸಭಾದಲ್ಲೂ, ಗೆಳೆಯರ ಬಳಗದಲ್ಲೂ ಸಂಚಲನ ಉಂಟುಮಾಡಿತು. ಈ ವಿಷಯದಲ್ಲಿ ಅನೇಕ ಚರ್ಚೆಗಳು ವಾಗ್ವಾದಗಳು ಮನೆಯಲ್ಲೂ ನಡೆದಿದ್ದುಂಟು. ಅಸ್ಪೃಶ್ಯತೆ ನಿವಾರಣೆ ವಿಷಯದಲ್ಲಿ, ಗಾಂಧೀಜಿಯವರ ಕ್ರಮಗಳು ಆಮೂಲಾಗ್ರ ಬದಲಾವಣೆ ತರುವಂತಹವುಗಳಲ್ಲ; ಅವು ಹಿಂದೂಧರ್ಮವನ್ನು ಉಳಿಸಲು ಮತ್ತು ದಲಿತರನ್ನು–ಹಿಂದೂಧರ್ಮದ ಕಕ್ಷೆಯೊಳಗೆ ಉಳಿಸುವ ಕ್ರಮವಾಗಿದೆ ಎಂಬ ವಿಚಾರಗಳು ಕೈಪಿಡಿಯ ಮುಖ್ಯಾಂಶಗಳಾಗಿದ್ದುವು. ಇದೇ ವಿಷಯದಲ್ಲಿ ನಡೆದ ಸಂವಾದದ ಸಂದರ್ಭದಲ್ಲಿ ಕೃಷ್ಣಪ್ಪ ಮುನೀರ್ ಭಾಷಾರವರ (ಬಚ್ಚೆಮ್ಮಾರವರ ಮಗ) ಕೆನ್ನೆಗೆ ಒಂದೇಟು



**ಪ್ರವಾಸವೊಂದರ ಸಂದರ್ಭದಲ್ಲಿ ಬಿ.ಕೃಷ್ಣಪ್ಪ ತಮ್ಮ ಕಿರಿಯ ಗೆಳೆಯ ಮಹಾರುದ್ರ ಅವರೊಂದಿಗೆ, ಹಳೇಬೀಡಿನ ದೇವಾಲಯವೊಂದರ ಪೌಳಿಯಲ್ಲಿ.**

ಹಾಕಿಯೇಬಿಟ್ಟರು. ನಾನು ಇಬ್ಬರ ನಡುವೆ ಬಂದು, ಸಮಾಧಾನ ಪಡಿಸುತ್ತಿದ್ದರೂ, ಮುನೀರ್, ಮನೆಯಿಂದ ಹೊರಟೇಬಿಟ್ಟರು. ಎರಡು ದಿನಗಳಾದರೂ ಮನೆಕಡೆ ಮುನೀರ್ ಬಾರದೆ ಇದ್ದುದರಿಂದ ತಳಮಳಗೊಂಡ ಕೃಷ್ಣಪ್ಪ, ಅವರ ಮನೆಗೆ ತಾವೇ ಹೋಗಿದ್ದರು. "ಮುನೀರ್, ಬಾರೋ, ತಪ್ಪಾಯ್ತು; ಆವೇಶದ ಭರದಲ್ಲಿ ಹೊಡೆದುಬಿಟ್ಟೆ, ಬಾ ಮನೆಗೆ ಹೋಗೋಣ" ಎಂದು ಹೆಗಲಮೇಲೆ ಕೈಹಾಕಿಕೊಂಡು ಮನೆಗೆ ಕರೆತಂದಿದ್ದರು. ನಾವೆಲ್ಲ ಕುಳಿತು, ಸಂಜೆಯ ಟೀ ಸೇವಿಸಿದೆವು. ಮನಸ್ಸುಗಳು ತಿಳಿಗೊಂಡವು. ಇದನ್ನು ಈಗಲೂ ನೆನೆಸಿಕೊಳ್ಳುವ ಮುನೀರ್ "ಆಗ ಅಂಬೇಡ್ಕರ್ ಮತ್ತು ಗಾಂಧಿಯನ್ನು ಆಳವಾಗಿ ಅಧ್ಯಯನ ಮಾಡುತ್ತಿದ್ದ, ಕೃಷ್ಣಪ್ಪನವರನ್ನು ನಾನು ಸರಿಯಾಗಿ ಅರ್ಥಮಾಡಿಕೊಳ್ಳದೆ ಬರಿದೇ ವಾದಿಸಿದ್ದೆ. ಅವರು ಹಾಗೆ ಹೊಡೆದಿದ್ದು, ನನ್ನ ಮೈಮನಗಳಲ್ಲಿ ನೋವಾಗಿ ಉಳಿದಿಲ್ಲ; ಆದರೆ ಅವರು ಎರಡೇ ದಿನದಲ್ಲಿ ಮನೆಗೆ ಬಂದು, ಗೆಳೆಯನಂತೆ ನನ್ನನ್ನು ತಬ್ಬಿ, ಹೆಗಲಮೇಲೆ ಕೈಹಾಕಿಕೊಂಡು ಕರೆದುಕೊಂಡರಲ್ಲಾ, ಅದು ನನ್ನ ಮನಸ್ಸಿನಲ್ಲಿ ಅಚ್ಚಳಿಯದೆ ನಿಂತಿದೆ' ಎನ್ನುವ ಅವರ ಕಣ್ಣುಗಳಲ್ಲಿ ಆರ್ದ್ರತೆ ತುಂಬಿಕೊಳ್ಳುತ್ತದೆ, ಗಂಟಲುಬ್ಬಿ ಬರುತ್ತವೆ.

ಡಾ. ಬಿ.ಆರ್. ಅಂಬೇಡ್ಕರ್‌ರವರ ಚಿಂತನೆಗಳ ತೀವ್ರ ಅಧ್ಯಯನ ಮಾಡುತ್ತಿದ್ದ ಕೃಷ್ಣಪ್ಪ, ಗೆಳೆಯರೊಂದಿಗೆ ಮತ್ತು, ಕಾಲೇಜಿನ ಸಹೋದ್ಯೋಗಿಗಳಾದ, ಕುಮಾರಸ್ವಾಮಿ, ಎಂ.ಕೆ.ತಿರುಮಲೇಶ್, ಭೈರಪ್ಪ, ತಿಪ್ಪೇಸ್ವಾಮಿ, ಹನುಮಂತಪ್ಪ, ಇವರೊಂದಿಗೆ ಚಿಂತನಾ ಬೈಠಕ್‌ಗಳನ್ನು ನಡೆಸುತ್ತಿದ್ದರು. ಇಂದು ಆ ಸಂದರ್ಭಗಳನ್ನು ಪುನರಾವಲೋಕಿಸಿದಾಗ ಕೃಷ್ಣಪ್ಪನವರ ಚಿಂತನೆಯ ಹರವು, ಬ್ರಾಹ್ಮಣೇತರ–ಶೂದ್ರ ಚಳುವಳಿಯಿಂದ, ದಲಿತ–ಹಿಂದುಳಿದ–ಅಲ್ಪಸಂಖ್ಯಾತರ ಕಡೆಗೆ ದುಮ್ಮಿಕ್ಕಿದುದನ್ನು ನಾವು ಗುರ್ತಿಸಬಹುದಾಗಿದೆ. ಭಾರತೀಯ ಸಮಾಜದಲ್ಲಿ, ಪುರೋಹಿತಶಾಹಿ ಹಾಗೂ ಬಂಡವಾಳಶಾಹಿ ವರ್ಗ, ಪ್ರಜ್ಞಾಪೂರ್ವಕವಾಗಿ ಶತಮಾನಗಳಿಂದ ದಲಿತರನ್ನು ಸಾಮಾಜಿಕ–ಆರ್ಥಿಕ–ಶೈಕ್ಷಣಿಕ ಹಾಗೂ ರಾಜಕೀಯವಾಗಿ ಶೋಷಣೆ ನಡೆಸುತ್ತಾ, ಅವರನ್ನು ಗುಲಾಮಿ ಸ್ತರಕ್ಕೆ, ತಳ್ಳಿರುವುದರ ಚರಿತ್ರೆ ಮತ್ತು ವರ್ತಮಾನದ ಘಟನೆಗಳು ಕೃಷ್ಣಪ್ಪನವರನ್ನು ನಖಶಿಖಾಂತ ತಲ್ಲಣಗೊಳಿಸಿದ್ದವು. ಇಂತಹ ಮೂಸೆಯಿಂದಲೇ ಎದ್ದುಬಂದ ಕೃಷ್ಣಪ್ಪ, ಅದರ ವಿರುದ್ಧ ಸಂಘಟನಾತ್ಮಕ ಹೋರಾಟ ನಡೆಸಲು ಮಾನಸಿಕವಾಗಿ ಸಿದ್ಧಗೊಂಡರು. ಯಾವುದೇ ನಿರ್ಧಾರ ಕೈಗೊಂಡಂಥ ಸಂದರ್ಭದಲ್ಲಿ, ಅವರ ನಡವಳಿಕೆಯನ್ನು ನಾನು ಗಮನಿಸಿದಂತೆ, 'ಹಲ್ಲು ಕಚ್ಚುವುದು, ಬಲಗೈ ಮುಂಚಾಚಿ ತೋರುಬೆರಳನ್ನೆತ್ತಿ ಸೈ ಎನ್ನುವ ಸನ್ನೆ ಮಾಡುವುದು, ಶತಪಥ ಧೃಡ ಹೆಜ್ಜೆ ಹಾಕುವುದು' ಮಾಡುತ್ತಿದ್ದರು. ಇದನ್ನು ಬಹಳ 'ಗೆಳೆಯರು ಗಮನಿಸಿದ್ದಾರೆ. ಹೀಗೆ ತೆಗೆದುಕೊಂಡ ದೃಢ ನಿಲುವು "ದಲಿತ

ಸಂಘಟನೆ–ಒಂದು ಕರೆ" ಎಂಬ ಕರಪತ್ರ ಮೂಲಕ ಸಾಕಾರಗೊಂಡಿತ್ತು. ದಿ. ೧೩.೧೦.೭೪ ರಲ್ಲಿ ಹೊರಡಿಸಿದ ಈ ಕರಪತ್ರದಲ್ಲಿ, ಐದುಸಾವಿರ ವರ್ಷಗಳ ದಲಿತರ ಸ್ಥಿತಿಗತಿಗಳನ್ನು ಹೃದಯ ತಲ್ಲಣಿಸುವಂತೆ ವಿವರಿಸುತ್ತಾ, ಸಂಘಟಿತರಾಗಲು ಕರೆಕೊಡುತ್ತಾ ಭದ್ರಾವತಿಯ ನ್ಯೂಟೌನ್ ಪ್ರಾಥಮಿಕ ಶಾಲೆಯಲ್ಲಿ ಆಯೋಜಿಸಿರುವ ಸಭೆಗೆ ಆಗಮಿಸಲು ಕೋರಲಾಗಿತ್ತು. ಈ ಕರಪತ್ರ ದಲಿತ ಚಳುವಳಿಯ ಇತಿಹಾಸದ ಮೊದಲ ಪುಟವೆಂದೇ ಹೇಳಬಹುದು.

ಆ ಸಭೆಗೆ ಸಮಾಜವಾದಿ ಗೆಳೆಯರು, ಮೈಸೂರು ಕಾಗದ ಕಾರ್ಖಾನೆಯ ನೌಕರರೂ, ಕಬ್ಬಿಣ ಮತ್ತು ಉಕ್ಕು ಕಾರ್ಖಾನೆಯ ನೌಕರ ಮಿತ್ರರೂ, ಕೃಷ್ಣಪ್ಪನವರ ಆಪ್ತ ಸಹೋದ್ಯೋಗಿಗಳು, ಸಿದ್ಲೀಪುರದ ಕೃಷಿಕಾರ್ಮಿಕರು, ಬಗರ್‌ಹುಕುಂ ಸಾಗುವಳಿದಾರರು ಬಂದಿದ್ದರು. ಸಭೆಯಲ್ಲಿ ಸುದೀರ್ಘ ಚರ್ಚೆ ನಡೆದು, ಎಲ್ಲಾ ಜಾತಿಯ ಬಡವರು, ಮುಖ್ಯವಾಗಿ, ಜಾತಿ ಮತ್ತು ವರ್ಗ ಶೋಷಣೆಗೆ ಗುರಿಯಾದವರೆಲ್ಲರೂ ಈ ಸಂಘಟನೆಯಲ್ಲಿ 'ದಲಿತರು' ಎಂಬ ವಿಶಾಲಾರ್ಥದಲ್ಲಿ ಸೇರ್ಪಡೆಯಾಗಲೂ, ಸಮಾಜದಲ್ಲಿ, ಎಲ್ಲಾ ತರಹದ ಶೋಷಣೆ ಮತ್ತು ಅನ್ಯಾಯದ ವಿರುದ್ಧ ಹೋರಾಡಲು ಮತ್ತು ಸಾಮಾಜಿಕ ನ್ಯಾಯಕ್ಕಾಗಿ 'ದಲಿತ ಸಂಘರ್ಷ ಸಮಿತಿ' ಎಂಬ ಹೆಸರಿನಲ್ಲಿ ಚಳುವಳಿ ಕಟ್ಟಲು, ಸಮಿತಿಯನ್ನು ನೋಂದಣಿ ಮಾಡಿಸಲು ತೀರ್ಮಾನಿಸಲಾಯಿತು.

ಕೃಷ್ಣಪ್ಪನವರು ಆಗ ಬರೆದ ಅನೇಕ ಕವನಗಳಲ್ಲಿ, ಅವರ ಮನದಲ್ಲಿ ನಡೆದ ಚಿಂತನ ಮಂಥನಗಳು ಮತ್ತು ಒಡಮೂಡಿದ ನಿರ್ಧಾರಗಳನ್ನೂ ನಾವು ಗಮನಿಸಬಹುದು. ಅವರ ಕವನಗಳು– 'ಶತಮಾನದ ನೊಗ', 'ಅನಾಮಿಕರ ಕವನ', 'ಮೂರ್ತಿಯೊಂದ ಮಾಡು'– ಇತ್ಯಾದಿಗಳಲ್ಲಿನ ಸಾಲುಗಳು ದಲಿತ ಚಳುವಳಿಯನ್ನು ತಾಯ್ತನದಿಂದ ಕಟ್ಟಲು ಸಾಧ್ಯವಾಯಿತೆಂಬುದನ್ನು ಗಮನಿಸಬಹುದು. 'ಶತಮಾನದ ನೊಗ' ಮತ್ತು 'ಅನಾಮಿಕರ ಕವನ'ದ ಸಾಲುಗಳು ದಲಿತ ಚಳುವಳಿಯ ಮಾನವೀಯ ತುಡಿತದ, ಕ್ರಾಂತಿಯ ಮಿಡಿತದ ಚೈತನ್ಯಗಳೇ ಸರಿ:

### ೧. ಶತಮಾನದ ನೊಗ

ಎಷ್ಟು ಶತಮಾನಗಳಿಂದ ಇವರು ನನ್ನ
ಹಗಲ ಮೇಲೆ ಕುಳಿತಿದ್ದಾರೆ ಎಂಬ ಅರಿವು ನನಗಿರಲಿಲ್ಲ.
ಆಗ ನಾನು ನಿರಕ್ಷರ ಕುಕ್ಷಿಯಾಗಿದ್ದೆ. ಅಜ್ಞಾನಿಯಾಗಿದ್ದೆ.
(ಹೌದು ಹಾಗೆ ಮಾಡಲ್ಪಟ್ಟಿದ್ದೆ.)
ಈಗ ಇತ್ತೀಚೆಗೆ ನಾನು ಅ ಆ ಇ ಈ
ಕಲಿಯಲು ಆರಂಭಿಸಿದ ನಂತರ ನನಗೆ
ಅರ್ಥವಾಗತೊಡಗಿದೆ,
ನನ್ನ ಹಗಲ ಮೇಲೆ ನಾಲ್ಕಾರು ಜನ ಕುಳಿತಿದ್ದಾರೆ ಎಂದು.
ಮೊದಲು ನನಗೆ ಭಾರವೇ ಕಾಣಿಸುತ್ತಿರಲಿಲ್ಲ.
ಈಗೀಗ ಭಾರ ನೂರುಪಟ್ಟು–ಸಾವಿರಪಟ್ಟು
ಕುತ್ತಿಗೆ ಮುರಿದಂತೆ, ನಾನು ಸತ್ತಿದ್ದೇನೆ ಅನ್ನಿಸುತ್ತಿದೆ.
ಹಂದಿಯಂತೆ, ಕತ್ತೆಯಂತೆ, ನನ್ನ ಮೇಲೆ ಇವರು
ಸವಾರಿ ಮಾಡಿದ್ದಾರೆ, ಕಂತೆ ಹೇರಿದ್ದಾರೆ.
ಬೆನ್ನು ಮೂಳೆ ಮುರಿದು, ಸೊಂಟ ಬಿದ್ದರೂ
ಒತ್ತಿ ಒತ್ತಿ ಖುಷಿ ಪಡುತ್ತಿದ್ದಾರೆ.
ನನ್ನ ನರನರಗಳು ಬೇಯುತ್ತಿವೆ, ಸಿಡಿಯುತ್ತಿವೆ, ಕೂಗುತ್ತಿವೆ.

ನಾನು ಗುದ್ದಿ ಕಟ್ಟಿದ ದನದಂತೆ ಒದ್ದಾಡುತ್ತಿದ್ದೇನೆ.
ಈ ಹಗ್ಗ ಹರಿಯಬೇಕು. ಈ ಗುದ್ದಿ ಕೀಳಬೇಕು.
ಹೆಗಲ ಮೇಲಿನ ಭಾರ ಕಿತ್ತು ಎಸೆಯಬೇಕು!
ಇವರಿಗೆ ಶಾಂತಿ ಮಂತ್ರವ ಹೇಳಿ, ಮಣ್ಣು ಮುಕ್ಕಿದ ಜನಕೆ,
ಲೆಕ್ಕವಿಲ್ಲ. ಇತಿಹಾಸ ಚಕ್ರಗಳ ಉರುಳಿಸಿಲ್ಲ.

ಈ ರಾಕ್ಷಸರಿಂದ ನನಗೆ ಬಿಡುಗಡೆ ಬೇಕು.
ಹೌದು ಬಿಡುಗಡೆ ಬೇಕು.



ಹಾಗಾದರೆ ಬಿಡುಗಡೆ ಹೇಗೆ, ಹೇಗೆ, ಹೇಗೆ ?
ಸಂಘರ್ಷ
ನನ್ನ ಹೆಗಲ ಮೇಲೆ ಕುಳಿತು ಕೆಳಗೆ ಇಳಿಯದ
ಈ ಧೂರ್ತರನ್ನು
ನಾನು ಎತ್ತಿ ನೆಲಕ್ಕೆ ಕುಕ್ಕಬೇಕು–ಒಗೆಯಬೇಕು.
ಒಗೆಯಲೇಬೇಕು.
ಈ ರಕ್ತ ಬೀಜಾಸುರರು ಮತ್ತೆ ಏಳದಂತೆ ಅಲ್ಲೆ ಮೆಟ್ಟಿ ತುಳಿಯಬೇಕು.
ಆಗಲೇ ನನಗೆ ಬೆಡುಗಡೆ
ನನಗೆ ಬಿಡುಗಡೆ–ಮುಕ್ತಿ–ಸ್ವಾತಂತ್ರ.
ಇತಿಹಾಸದ ಪಾಠ.

### ೨. ಅನಾಮಿಕರ ಕವನ

ಇದು ಸತ್ತವರ ಕವನ,
ಬೆದಿಬಂದು ಹದವಾಗದೆ ಸೋತು ಸುಣ್ಣವಾದವರ ಕವನ
ಮೈಯ ಮಾಂಸ ಕೊಯ್ದು ಉಣಲಿಟ್ಟ ಶಿಬಿ ದಧೀಚಿಗಳ ಕವನ
ತುಳಿದವರ ಪಾದಗಳು ತಣ್ಣಗಾಗಲಿ ಎಂದು
ಮೈಯ್ಯ ಚರ್ಮವ ಸುಲಿದು ಎಕ್ಕಡ ಹೊಲಿದಿತ್ತ ಹರಳಯ್ಯರ ಕವನ,
ಉಂಡವರ, ಉಂಡು ಅಜೀರ್ಣವಾದವರ,
ಅಜೀರ್ಣವಾಗಿ ಕಕ್ಕಿ ಧರ್ಮ ಇಕ್ಕಿದ ಅಮೇಧ್ಯವ
ಕೊಳಕು ನಾರುತ್ತಿದ್ದರೂ, ಬಾಂಡ ತಲೆ ಮೇಲೆ ಹೊತ್ತವರ,
ಊರ ಪರಿಮಳಿಸುತ ಅಸ್ಪೃಶ್ಯರಾದವರ ಕವನ
ಆರತಿ ಹೊತ್ತು, ಬೇವುಟ್ಟು, ಗುಡಿ ಗುಂಡಾರಗಳಿಗೆ ದಿಂಡರ
ಹಾಕಿದರೂ, ದೇವರ ಹೊಸಿಲಾಚೆ ಉಳಿದ, ಕನಕರ ಕವನ
ನಗ್ನ, ಅರೆನಗ್ನ ಬೆತ್ತಲೆಯಲಿ ಉಧೋ ಉಧೋ ಅಂದ ಮುಗ್ಧರ
ಕವನ
ನಿಂತ ಜೋಳದ ಹೊಲ, ಗದ್ದೆ ಬದು, ಆಲೆಮನಿ ಸಂದಿಗಳಲಿ
ಉಳ್ಳಾವರ ತೊಡೆತೀಟೆಗೆ ಬಲಿಯಾದ, ಬಲತ್ಕಾರಕ್ಕೆ ಬಸಿರಾದ
ಅಸಂಖ್ಯ, ಅಸಂಖ್ಯ ಪುಣ್ಯಕೋಟಿಗಳ ಕವನ.
ಶತಮಾನಗಳುದ್ದಕ್ಕೂ, ಗಾಳಿ ನೀರಿಲ್ಲದವರ ಕವನ
ಬೆಳಕು ಕಾಣದೆ ಕತ್ತಲಲಿ ಉಸಿರುಗಟ್ಟಿ,
ಅರೆಬೆಂದು ಉರಿಯುವವರ ಕವನ,
ಅರೆಹೊಟ್ಟೆ ಅರೆಬಟ್ಟೆ ಹರಕು ಜೋಪಡಿ,
ಮುರುಕು ಮನೆಗಳ ಸಿರಿವಂತರ ಕವನ
ದೇವರು, ಧರ್ಮ, ಜಾತಿ, ಭೂಮಾಲೀಕ, ಬಂಡವಾಳಶಾಹಿ
ವ್ಯವಸ್ಥೆಗೆ ಸವಾಲಾಗಿ ನಿಂತವರ ಕವನ
ಹೊಲೆ ಮಾದಿಗರ ದಲಿತರ ಕವನ
ಇದು ದಾಸಾನುದಾಸರ ಸತ್ತವರ ಕವನ

(ಮುಂದುವರೆಯುವುದು)

## ಸಮಕಾಲೀನ

# ಮತ್ತೆ ಮತ್ತೆ ಗಾಂಧಿ ನೆನಪು



ಅಕ್ಟೋಬರ್ ೨ ಗಾಂಧಿ ಜಯಂತಿಯ ದಿನ. ಅಕ್ಟೋಬರ್ ೧೧ ಹಾಗೂ ೧೨ ಕ್ರಮವಾಗಿ ಅವರ ವಿಶಿಷ್ಟ ಶಿಷ್ಯರಲ್ಲಿಬ್ಬರಾದ ಜಯಪ್ರಕಾಶ ನಾರಾಯಣ್ ಮತ್ತು ರಾಮಮನೋಹರ ಲೋಹಿಯಾರ ಹುಟ್ಟುಹಬ್ಬ ಮತ್ತು ಪುಣ್ಯತಿಥಿಗಳ ದಿನಗಳೂ ಹೌದು. ಹೀಗೆ ಈ ತಿಂಗಳು ಸಮಾಜವಾದಿ ತತ್ವದಲ್ಲಿ ನಂಬಿಕೆ ಇಟ್ಟವರಿಗೆ ತಮ್ಮ ನಡೆ ನುಡಿಗಳ ಬಗ್ಗೆ ಆತ್ಮ ವಿಮರ್ಶೆ ಮಾಡಿಕೊಳ್ಳುವ ಮತ್ತು ಈ ದೇಶ ಹಾಗೂ ಸಮಾಜ ತಪ್ಪು ಹಾಗೂ ಅಪಾಯಕಾರಿ ದಿಕ್ಕಿನಲ್ಲಿ ನಡೆಯುತ್ತಿದೆ ಎಂದು ನಮಗನ್ನಿಸುತ್ತಿದ್ದರೆ, ಅದರಲ್ಲಿ ನಮ್ಮ ಪಾತ್ರವೇನೂ ಇಲ್ಲವೇ ಎಂದು ಔಪಚಾರಿಕವಾಗಿಯಾದರೂ ಯೋಚಿಸಬೇಕಾದ ಸಂದರ್ಭಗಳನ್ನೊದಗಿಸುತ್ತದೆ.

ಆಧುನಿಕ ನಾಗರೀಕತೆಯ ವಿಮರ್ಶಕರಾಗಿ ಗಾಂಧಿ ಆ ಬಗ್ಗೆ ಹೇಳಿದ್ದ ಕೆಲವು ಮುಖ್ಯ ಮಾತುಗಳನ್ನಾದರೂ ಇಂದು ನೆನಪಿಸಿಕೊಳ್ಳಬೇಕಿದೆ. ಏಕೆಂದರೆ, ನಮಗೇ ಗೊತ್ತಾಗದಂತೆ ಆಧುನಿಕತೆಯ ಆತ್ಯಂತಿಕ ರೂಪವಾಗಿ ನಮಗೆದುರಾಗಿರುವ ಇಂದಿನ ಜಾಗತೀಕರಣದ ದಿನ ನಿತ್ಯದ ಅನುಭವಗಳ ಹಿನ್ನೆಲೆಯಲ್ಲಿ ಗಾಂಧಿಯ ಆ ಮಾತುಗಳು ಪ್ರವಾದಿಯ ಮಾತುಗಳಂತೆ ಮಾರ್ದನಿಸತೊಡಗಿವೆ. ಗಾಂಧಿ ಆಧುನಿಕ ನಾಗರೀಕತೆಯನ್ನು ಅದೊಂದು ನಾಗರೀಕತೆ ಎಂಬ ಶಬ್ದಕ್ಕೇ ಅನರ್ಹವಾದದ್ದು ಎಂದಿದ್ದರು. ಮೂಲತಃ ಅದೊಂದು ಕೇವಲ ದೇಹ ಸುಖ ಸಂವರ್ಧನೆಯ ರೋಗ ಎಂದು ಗುರುತಿಸಿದ್ದರು. ಅದು ತನ್ನ ಮಿತಿ ಮೀರಿದ ಕುತೂಹಲ, ವೇಗ ಹಾಗೂ ರುಚಿಗಳ ಮೂಲಕ ಮನುಷ್ಯನನ್ನು ಯಾಂತ್ರೀಕರಿಸಿ ತನ್ನನ್ನು ತಾನು ಅರಿವ ಅವನ ಮೂಲ ಕರ್ತವ್ಯದಿಂದ ವಿಮುಖನನ್ನಾಗಿ ಮಾಡಿ ಜಗತ್ತನ್ನು ಹಿಂಸೆ ಮತ್ತು ಅಶಾಂತಿಯ ತಾಣವನ್ನಾಗಿ ಮಾಡುತ್ತದೆ ಎಂದಿದ್ದರು. ಮನುಷ್ಯ ತನ್ನ ದೇಹ ವಿಧಿಸಿರುವ ಆಂತರಿಕ ಮತ್ತು ಬಾಹ್ಯ ಪರಿಮಿತಿಗಳನ್ನು ದೈವ/ನಿಸರ್ಗ ನಿಯಾಮಕವೆಂದು ಒಪ್ಪಿಕೊಂಡು ಆ ಪರಿಮಿತಿಗಳನ್ನು ಮೀರದೆ(ಹಾಗೆ ಮೀರುವುದೇ ಹಿಂಸೆಯ ಮೂಲ) ಬಾಳಿದರೆ ಮಾತ್ರ ಪ್ರತಿ ಮನುಷ್ಯನೂ ಶಾಂತಿ-ನೆಮ್ಮದಿಗಳಿಂದರಬಲ್ಲ ಎಂದು ಹೇಳಿದ್ದರು. ಒಂದು ನೆಲೆಯಲ್ಲಿ ಅತಿಗೆ ಹೋಗಿ ಆಡಿದಂತೆ ಕೇಳಿಸುವ ಅವರ ಈ ಮಾತುಗಳನ್ನು ಲೋಹಿಯಾ ಮತ್ತು ಜೆಪಿ ಸಾಂದರ್ಭೀಕರಿಸಿ ನೀಡಿದ ಸಮಾಜವಾದಿ ಕಾರ್ಯಕ್ರಮಗಳನ್ನು ನಾವಿಂದು ಪದೇ ಪದೇ ನೆನಪಿಸಿಕೊಳ್ಳಬೇಕಾದ ಸಂದರ್ಭ ಬಂದಿದೆ ಎನಿಸುತ್ತದೆ. ಇಂದು ಗಾಂಧಿ ನೆನಪು ಎಂದರೆ ಬಹುಶಃ ಇದೇ ಆಗಿರಬಹುದು.-ಸಂ

# ಹೆಗ್ಗೋಡಿನಲ್ಲಿ ಇನ್ನೊಂದು ಪ್ರಯೋಗ: ಪ್ರಸನ್ನರ 'ಶ್ರಮಜೀವಿ ಆಶ್ರಮ'

-ಎಂ.ರಾಘವೇಂದ್ರ



ಶಿವಮೊಗ್ಗ ಜಿಲ್ಲೆಯ ಸಾಗರ ತಾಲ್ಲೂಕಿನ ಹೆಗ್ಗೋಡು ಗ್ರಾಮ ಹಲವು ಕಾರಣಗಳಿಗೆ ರಾಷ್ಟ್ರದಲ್ಲೆ ಮಹತ್ವದ ಹೆಸರನ್ನು ಗಳಿಸಿರುವ ಗ್ರಾಮವಾಗಿದೆ. ಒಂದೆಡೆ ಸಾಂಸ್ಕೃತಿಕ ಚಳವಳಿಯನ್ನು ಕಟ್ಟುತ್ತಿರುವ ನೀನಾಸಂ ಇದ್ದರೆ ಇದೇ ಗ್ರಾಮದಲ್ಲಿ ಜಾಗತೀಕರಣಕ್ಕೆ ಪರ್ಯಾಯವಾಗಿ ಕೈಮಗ್ಗ ಉದ್ದಿಮೆ ಮೂಲಕ ಉತ್ತರ ಕೊಡುತ್ತಿರುವ ಚರಕ ಸಂಸ್ಥೆ ಇದೆ.

ಮಲೆನಾಡಿನಲ್ಲಿ ಕೃಷಿ, ವರ್ಷದ 12 ತಿಂಗಳು ಉದ್ಯೋಗ ಕೊಡುವ ಕ್ಷೇತ್ರವಲ್ಲ. ಈ ಕಾರಣಕ್ಕೆ ನಗರಕ್ಕೆ ವಲಸೆ ಹೋಗುತ್ತಿರುವವರ ಸಂಖ್ಯೆ ಇತ್ತೀಚಿನ ವರ್ಷಗಳಲ್ಲಿ ಗಣನೀಯ ಪ್ರಮಾಣದಲ್ಲಿ ಏರುತ್ತಿದೆ. ತಾವು ಬದುಕುತ್ತಿರುವ ಹಳ್ಳಿಯಲ್ಲೆ ಕೆಲಸ ದೊರಕಿದರೆ ಹಳ್ಳಿಗರು ವಲಸೆ ಹೋಗುವುದಿಲ್ಲ ಎಂದು ಸಾಬೀತುಪಡಿಸಿದ ಶ್ರೇಯಸ್ಸು ಚರಕ ಸಂಸ್ಥೆಗೆ ಸಲ್ಲುತ್ತದೆ. ಅದರಲ್ಲೂ ಗ್ರಾಮೀಣ ಪ್ರದೇಶದ ಹೆಣ್ಣು ಮಕ್ಕಳ ಸ್ವಾವಲಂಬಿ ಬದುಕಿಗೆ ಚರಕ ಸಂಸ್ಥೆ ನೀಡುತ್ತಿರುವ ಕೊಡುಗೆ ಗಮನಾರ್ಹವಾದದ್ದು. ಇದರ ಜೊತೆಗೆ ಚರಕದಲ್ಲಿ ಕೆಲಸ ಮಾಡುವ ಉದ್ಯೋಗಿಗಳು ಸಾಂಸ್ಕೃತಿಕವಾಗಿಯೂ ಕ್ರಿಯಾಶೀಲರಾಗಿರಬೇಕು ಎನ್ನುವ ಕಾರಣಕ್ಕೆ ಚರಕ ಸಂಸ್ಥೆ ಪ್ರತಿ ವರ್ಷ ಹಲವು ಚಟುವಟಿಕೆಗಳನ್ನು ನಡೆಸುತ್ತದೆ. ವರ್ಷಕ್ಕೊಮ್ಮೆ ನಡೆಯುವ 'ಚರಕ ಉತ್ಸವ' ಇಲ್ಲಿನ ಉದ್ಯೋಗಿಗಳಿಗೆ ಪ್ರತಿ ವರ್ಷದ ದೊಡ್ಡ ಹಬ್ಬವಿದ್ದಂತೆ. 'ಚಿಗುರು' ಎನ್ನುವ ಪತ್ರಿಕೆಯನ್ನು ಕೂಡ ಚರಕ ಹೊರತರುತ್ತಿದೆ.



ಗ್ರಾಮೀಣ ಕೈಗಾರಿಕೆಗಳ ಉತ್ಪನ್ನಗಳಿಗೆ ಮಾರುಕಟ್ಟೆ ಇಲ್ಲ ಎಂಬ ಎಂದಿನ ಕೊರಗನ್ನು ನಿವಾರಿಸುವ ಸಲುವಾಗಿ ಚರಕವು ದೇಸಿ ಸಂಸ್ಥೆಯ ಮೂಲಕ ರಾಜ್ಯದ ಪ್ರಮುಖ ನಗರಗಳಲ್ಲಿ ಮಳಿಗೆಗಳನ್ನು ತೆರೆದಿದೆ. ಸಾಂಪ್ರದಾಯಿಕವಾಗಿ ಮಗ್ಗದ ಕೆಲಸ ಮಾಡುವ ನೇಕಾರರು ತೀವ್ರ ಸಂಕಷ್ಟದಲ್ಲಿದ್ದು ಅವರಿಗೂ ನೆರವು ನೀಡುವ ಕೆಲಸವನ್ನು ಚರಕ ಮಾಡುತ್ತಿದೆ.

ಚರಕದ ಈ ಎಲ್ಲಾ ಚಟುವಟಿಕೆಗಳ ಹಿಂದೆ ಇರುವ ಪ್ರಮುಖ ವ್ಯಕ್ತಿ ರಂಗಕರ್ಮಿ ಪ್ರಸನ್ನ ಅವರು. ಭಾರತದ ರಂಗಭೂಮಿಯ ಅತ್ಯುತ್ತಮ ನಿರ್ದೇಶಕರಲ್ಲಿ ಒಬ್ಬರಾಗಿರುವ ಪ್ರಸನ್ನ ಈಗ್ಗೆ ಎರಡು ದಶಕಗಳ ಹಿಂದೆ ಪ್ರಜ್ಞಾಪೂರ್ವಕವಾಗಿ ನಗರದ ಬದುಕನ್ನು ತೊರೆದು ಹೆಗ್ಗೋಡು ಗ್ರಾಮದಲ್ಲಿ ನೆಲೆಸಿ ಚರಕವನ್ನು ಕಟ್ಟಿ ಬೆಳೆಸುವ ಕಾಯಕದಲ್ಲಿ ತೊಡಗಿದ್ದಾರೆ.

ಕಳೆದ 20 ವರ್ಷಗಳಲ್ಲಿ ಚರಕ ಸಂಸ್ಥೆಯ ಏಳು-ಬೀಳುಗಳನ್ನು ನೋಡಿದ ಪ್ರಸನ್ನ ಅವರು ಈಗ ಹೊಸದೊಂದು ಸಾಹಸಕ್ಕೆ ಕೈ ಹಾಕಿದ್ದಾರೆ. ಹೆಗ್ಗೋಡಿನ ಸಮೀಪವೇ ಇರುವ ಹೊನ್ನೇಸರ ಗ್ರಾಮದಲ್ಲಿ ಎಂಟು ಎಕರೆ ಭೂಮಿಯನ್ನು ಖರೀದಿಸಿ ಅಲ್ಲಿ 'ಶ್ರಮಜೀವಿ ಆಶ್ರಮ'ವನ್ನು ಸ್ಥಾಪಿಸಿದ್ದಾರೆ.

ಶ್ರಮಜೀವಿ ಆಶ್ರಮದ ಕಲ್ಪನೆ ಮೂಡಿದ್ದು ಹೇಗೆ, ಇದರ ಕಾರ್ಯ ಚಟುವಟಿಕೆಗಳ ಸ್ವರೂಪವೇನು, ಯಾವ ಉದ್ದೇಶ ಇದರ ಹಿಂದಿದೆ ಇವೇ ಮೊದಲಾದ ಪ್ರಶ್ನೆಗಳೊಂದಿಗೆ ಪ್ರಸನ್ನ ಅವರೊಂದಿಗೆ 'ಹೊಸ ಮನುಷ್ಯ' ನಡೆಸಿದ ಮಾತುಕತೆಯ ಆಯ್ದ ಭಾಗ ಇಲ್ಲಿದೆ:

# ಕೆಲಸ, ಚಿಂತನೆ ಮತ್ತು ಜೀವನಶೈಲಿಗಳ ನಡುವೆ ತಾದಾತ್ಮ್ಯ ಇರಬೇಕು....



**ಪತ್ರಿಕೆ:** ಶ್ರಮಜೀವಿ ಆಶ್ರಮ ಸ್ಥಾಪನೆ ಹಿಂದಿರುವ ಪರಿಕಲ್ಪನೆ ಯಾವುದು?

**ಪ್ರಸನ್ನ:** ಶ್ರಮದ ಜೀವನಕ್ಕೆ ಘನತೆ ತಂದುಕೊಡುವುದೆ ಆಶ್ರಮದ ಉದ್ದೇಶವಾಗಿದೆ. ಈ ಆಶ್ರಮ ಒಂದು ತರಬೇತಿ ಸಂಸ್ಥೆಯೂ ಹೌದು. ಇದರ ಅಗತ್ಯ ಕಂಡದ್ದು ಈಗಾಗಲೇ ಇಲ್ಲಿ ಕಾರ್ಯನಿರ್ವಹಿಸುತ್ತಿರುವ ಚರಕ ಸಂಸ್ಥೆಯ ಆಗು–ಹೋಗುಗಳನ್ನು ಗಮನಿಸಿದ ಫಲವಾಗಿ. 20 ವರ್ಷಗಳ ಹಿಂದೆ ಚರಕ ಆರಂಭವಾದ ಮಲೆನಾಡಿನ ಹಳ್ಳಿಗೂ, ಇಂದಿನ ಹಳ್ಳಿಯ ಸ್ಥಿತಿಗತಿಗೂ ತುಂಬಾ ವ್ಯತ್ಯಾಸವಿದೆ. ಈ ಹಿಂದೆ ಹಳ್ಳಿಗಳಲ್ಲಿ ಬಡತನ ಮಾತ್ರ ಇತ್ತು. ಆದರೆ ಇಂದು ಆರ್ಥಿಕತೆಯನ್ನು ಮೀರಿದ ಸಾಮಾಜಿಕ ಮತ್ತು ಸಾಂಸ್ಕೃತಿಕ ಅಂಶಗಳು ಹಳ್ಳಿಗರನ್ನು ಬಾಧಿಸುತ್ತ ಅವರು 'ಧೈರ್ಯ'ವನ್ನೇ ಕಳೆದುಕೊಂಡಿದ್ದಾರೆ. ಈ ಹಿನ್ನಲೆಯಲ್ಲಿ ಆಶ್ರಮ ಆರಂಭವಾಗುತ್ತಿದೆ.

**ಪತ್ರಿಕೆ:** ಹಳ್ಳಿಗರು ಕಳೆದುಕೊಂಡಿರುವ 'ಧೈರ್ಯ' ಎಂತಹದ್ದು ಎನ್ನುವುದನ್ನು ವಿವರಿಸುತ್ತೀರಾ?

**ಪ್ರಸನ್ನ:** ನೋಡಿ, ಈ ಹಿಂದೆ ಹಳ್ಳಿಗಳಲ್ಲಿ ಬಡತನದ ಜೊತೆಗೆ ಜಾತೀಯತೆಯಂತಹ ಸಾಮಾಜಿಕ ವಿಷಮತೆ ಇತ್ತು. ಆದರೆ ಈಗ ಈ ಸಾಮಾಜಿಕ ವಿಷಮತೆಗೆ ಪರಿಹಾರ ಒದಗಿಸಬಲ್ಲೆ ಎಂದು ಯಂತ್ರ ನಾಗರಿಕತೆ ತನ್ನನ್ನು ತಾನು ಬಿಂಬಿಸಿಕೊಳ್ಳುತ್ತಾ ಅವರಲ್ಲಿ ಹೊಸ ಭ್ರಮೆಗಳನ್ನು ಸೃಷ್ಟಿಸುತ್ತಿದೆ. ಹೀಗಾಗಿ ಹಳ್ಳಿಗಳಲ್ಲಿ ಯಾವುದೇ ರೀತಿಯ ಬಡತನ ನಿರ್ಮೂಲನೆಯ ಕಾರ್ಯಕ್ರಮ ಹಾಕಿಕೊಂಡರೂ ಕಡೆಯದಾಗಿ ಅದು ಹಳ್ಳಿಗರನ್ನು ಪೇಟೆಯತ್ತ ತರುತ್ತಿದೆ. ಹಾಗಾಗಿ ಇವತ್ತಿನ ಸಂದರ್ಭಗಳಲ್ಲಿ ಹಳ್ಳಿಗರಿಗೆ ಆರ್ಥಿಕ ಸಬಲತೆ ನೀಡುವ ಜೊತೆಗೆ ಸಾಮಾಜಿಕ, ಸಾಂಸ್ಕೃತಿಕ 'ಧೈರ್ಯ' ತುಂಬುವುದು ಮಹತ್ವದ ಸಂಗತಿಯಾಗಿದೆ. ಈ ಕೆಲಸವನ್ನು ಮಾಡಲು ಶ್ರಮಜೀವಿ ಆಶ್ರಮ ಮುಂದಾಗಲಿದೆ.

**ಪತ್ರಿಕೆ:** ಹಾಗಾದರೆ ಶ್ರಮಜೀವಿ ಆಶ್ರಮ ಚರಕ ಸಂಸ್ಥೆಯ ವಿಸ್ತರಣಾ ಘಟಕವೇ?

**ಪ್ರಸನ್ನ:** ಹೌದು. ಮೂಲಭೂತವಾಗಿ ಇದನ್ನು ಚರಕ ಸಂಸ್ಥೆಗಾಗಿಯೇ ನಿರ್ಮಿಸಿರುವುದು. ಆದರೆ ಆಶ್ರಮ ಅದರ ಆಚೆಗೂ ಕೆಲಸ ಮಾಡಬಹುದು. ಹೇಗೆಂದರೆ ಈ ಮೇಲೆ ಹೇಳಿದಂತೆ ಹಳ್ಳಿಗರ ಬದಲಾಗಿರುವ ಜೀವನ ಶೈಲಿಯಲ್ಲಿ ಅಡಕವಾಗಿರುವ ಸಾಮಾಜಿಕ ವಿಷಮತೆಯ ಬಗ್ಗೆ ಅರಿವು ಮೂಡಿಸುತ್ತ ಯಂತ್ರ ನಾಗರಿಕತೆ ಕುರಿತು ಎಚ್ಚರ ಮೂಡಿಸುವಂತಹ ಜೀವನ ಶೈಲಿಯನ್ನು ರೂಪಿಸುವುದು. ಶ್ರಮವೇ ಬದುಕಿಗೆ ಪ್ರಮುಖವಾದ ನೆಲೆಗಟ್ಟು, ಧರ್ಮ ಅಥವಾ ಸಮಾಜವಾದ ಹೀಗೆ ಯಾವುದನ್ನೇ ಆದರೂ ಶ್ರಮದ ಆಧಾರದ ಮೇಲೆ ನಿರ್ಮಿಸಿದರೆ ಅರ್ಥಪೂರ್ಣ ಅನಿಸುತ್ತದೆ.

**ಪತ್ರಿಕೆ:** ಹಾಗಾದರೆ ಹಳ್ಳಿಗರು ಆತ್ಮವಿಶ್ವಾಸವನ್ನೇ ಕಳೆದುಕೊಳ್ಳುತ್ತಿದ್ದಾರೆ ಅನ್ನುತ್ತೀರಾ?

**ಪ್ರಸನ್ನ:** ನಮ್ಮಲ್ಲಿ ಸಾಮಾನ್ಯವಾಗಿ ಒಂದು ತಪ್ಪು ಕಲ್ಪನೆ ಇದೆ. ಅದೇನೆಂದರೆ ಸಭ್ಯತೆ ಹಾಗೂ ಸುಸಂಸ್ಕೃತಿ ಎಂಬುದು ನಗರವಾಸಿ ಮತ್ತು ಮೇಲ್ವರ್ಗದವರಲ್ಲಿ ಮಾತ್ರ ಇದೆ ಎಂಬುದು. ಆದರೆ ಶ್ರಮಜೀವಿ ಸಮುದಾಯದವರಿಗೆ ಅವರದ್ದೆ ಆದ ಸಭ್ಯತೆ ಮತ್ತು ಸುಸಂಸ್ಕೃತಿ ಇದೆ. ಆದರೆ ಇಂದಿನ ದುರಂತವೆಂದರೆ ಶ್ರಮಜೀವಿಗಳೆ ತಮ್ಮ ಸಭ್ಯತೆ ಹಾಗೂ ಸುಸಂಸ್ಕೃತಿಯನ್ನು ಕಡೆಗಣಿಸುವಂತೆ ಹಾಗೂ ತುಚ್ಛೀಕರಿಸುವಂತೆ ಒಟ್ಟು ಸಮಾಜ ವ್ಯವಸ್ಥೆ ಪ್ರೇರೇಪಿಸುತ್ತಿದೆ. ಈ ಎಲ್ಲಾ ಅವಾಂತರಗಳ ನಡುವೆ ಯಂತ್ರ ನಾಗರಿಕತೆ ಮಧ್ಯೆ ನಿಂತು ತಾನೊಂದು ಪರ್ಯಾಯ ವ್ಯವಸ್ಥೆಯೆಂದು ತನ್ನನ್ನೆ ತಾನು ಬಿಂಬಿಸಿಕೊಳ್ಳುತ್ತಿದೆ. ಯಂತ್ರ ನಾಗರಿಕತೆ ಪರ್ಯಾಯವೂ ಅಲ್ಲ, ಸಮರ್ಥ ವ್ಯವಸ್ಥೆಯೂ ಅಲ್ಲ. ಅದು ಸಾಮಾಜಿಕ ವಿಷಮತೆಯನ್ನು ತೊಡೆದು ಹಾಕುವ ನಾಟಕ ಮಾಡುತ್ತಲೆ ಸಮಾಜ ವ್ಯವಸ್ಥೆಯನ್ನು ಸಡಿಲ ಮಾಡುತ್ತಿದೆ. ಯಂತ್ರ ನಾಗರಿಕತೆ ಮಾರುಕಟ್ಟೆ ಆಧಾರಿತವಾದ ಒಂದು ವ್ಯವಸ್ಥೆ. ಅಲ್ಲಿ ಹಣ, ಲಾಭ, ಸ್ವಾರ್ಥ ಬಿಟ್ಟರೆ ಬೇರ್‍ಯಾವ ಮೌಲ್ಯವೂ ಇಲ್ಲ ಎಂದು ಅರ್ಥವಾಗದೆ ಇದ್ದರೆ ಆತ್ಮವಿಶ್ವಾಸ ಕಳೆದುಕೊಳ್ಳಬೇಕಾಗುತ್ತದೆ.

**ಪತ್ರಿಕೆ:** ಆಶ್ರಮದಲ್ಲಿ ಯಾವ ರೀತಿಯ ಚಟುವಟಿಕೆಗಳನ್ನು ನಡೆಸಲು ಉದ್ದೇಶಿಸಿದ್ದೀರಿ?

**ಪ್ರಸನ್ನ:** ಆಶ್ರಮದ ಮುಖ್ಯ ಕಾರ್ಯಕ್ರಮ ತರಬೇತಿ. ರುಡ್‌ಸೆಟ್ ಗ್ರಾಮೀಣಾಭಿವೃದ್ಧಿ ಸಂಸ್ಥೆ ಇದೆಯಲ್ಲಾ ಅದೇ ರೀತಿ. ಆದರೆ ಇಲ್ಲಿ ಒಂದು ಪ್ರಮುಖ ವ್ಯತ್ಯಾಸವಿದೆ. ಅದೇನೆಂದರೆ ತಾಂತ್ರಿಕ ತರಬೇತಿಯಷ್ಟೆ ಪ್ರಾಮುಖ್ಯತೆಯನ್ನು ನೈತಿಕ, ಸಾಮಾಜಿಕ ತರಬೇತಿಗೆ, ವ್ಯಕ್ತಿತ್ವ ವಿಕಸನದ ತರಬೇತಿಗೆ ನೀಡಲಾಗುತ್ತದೆ. ನಾವು ಮಾಡುವ ಕೆಲಸಕ್ಕೂ, ನಮ್ಮ ಚಿಂತನೆಗೂ, ಜೀವನ ಶೈಲಿಗೂ ಸಂಪೂರ್ಣವಾದ ತಾದಾತ್ಮ್ಯ ಬರಬೇಕು ಎಂದು ಆಶ್ರಮ ಬಯಸುತ್ತದೆ. ಇಲ್ಲಿ ಮಗ್ಗದ ತರಬೇತಿ ನಡೆಯುವ ಜಾಗದಲ್ಲೆ ನೇಕಾರರು ನೇಯ್ಗೆ ಮಾಡುತ್ತಾರೆ. ಬಣ್ಣಗಾರಿಕೆ ತರಬೇತಿ ನಡೆಯುವ ಸ್ಥಳದಲ್ಲೇ ಬಣ್ಣ ಹಾಕುವ ಕೆಲಸ ಇರುತ್ತದೆ. ಕೇವಲ ಕಪ್ಪು ಹಲಗೆಯ ಮುಂದೆ ನಿಂತು ಪಾಠ ಮಾಡುವ ವಿಧಾನ ಬಳಸಬಾರದು ಎಂದು ನಿರ್ಧರಿಸಲಾಗಿದೆ.

**ಪತ್ರಿಕೆ:** ಇದೊಂದು ಬಹುದೊಡ್ಡ ಯೋಜನೆಯಂತೆ ಕಾಣುತ್ತದೆ. ಮೂರು ಎಕರೆ ಪ್ರದೇಶದಲ್ಲಿ ಹಲವು ಕಟ್ಟಡಗಳು ಏಳುತ್ತಿವೆ. ಇದಕ್ಕೆಲ್ಲ ಬಂಡವಾಳ ಎಲ್ಲಿಂದ ತಂದಿರಿ?

**ಪ್ರಸನ್ನ:** ಇದು ಐದಾರು ವರ್ಷಗಳಿಂದ ನಿರ್ಮಾಣದಲ್ಲಿರುವ ಸುಮಾರು ಒಂದು ಕೋಟಿ ರೂಪಾಯಿಗಳ ವೆಚ್ಚದ ಯೋಜನೆ. ಇದರಲ್ಲಿ





ಬಹಳಷ್ಟು ಹಣವನ್ನು 'ದೇಸಿ' ಸಂಸ್ಥೆ ಹೂಡಿದೆ. ಸ್ವಲ್ಪ ಭಾಗ ಸರ್ಕಾರ ನೇಕಾರರಿಗೆಂದು ರೂಪಿಸಿದ ವಿವಿಧ ಯೋಜನೆಗಳಡಿ ಮಂಜೂರಾದ ಹಣ. ಜೊತೆಗೆ ವಿಚಾರವಾದಿ ದಿ. ಕೆ. ರಾಮದಾಸ್ ಕುಟುಂಬ ನೀಡಿದ ನಾಲ್ಕು ಲಕ್ಷ ರೂಪಾಯಿಗಳೂ ಸೇರಿದೆ. ಇಲ್ಲಿನ ಸಭಾಂಗಣಕ್ಕೆ ರಾಮದಾಸ್ ಹೆಸರಿಟ್ಟಿದ್ದೇವೆ.

**ಪತ್ರಿಕೆ:** ಇಷ್ಟು ದೊಡ್ಡ ಆದರ್ಶಗಳನ್ನಿಟ್ಟುಕೊಂಡ ಇಷ್ಟು ದೊಡ್ಡ ಯೋಜನೆ ಇಂದಿನ ದಿನಗಳಲ್ಲಿ ಕಾರ್ಯಸಾಧು ಅನ್ನಿಸುತ್ತದೆಯೇ?

**ಪ್ರಸನ್ನ:** ನೋಡಿ, ಮುಖ್ಯ ಪ್ರಶ್ನೆ ಇಂದಿನ ಕಾರ್ಯಸಾಧುತ್ವದ್ದಲ್ಲ. ಇಂದು ಸಮಾಜ ಎಷ್ಟು ದಾರಿ ತಪ್ಪಿದೆಯೆಂದರೆ ಅದು ಒಂದಲ್ಲ ಒಂದು ದಿನ ಹಿಂದಿರುಗಿ ನೋಡಲೇಬೇಕು. ಆಗ ಒಂದು ಒಳ್ಳೆಯ ಮಾದರಿ ಅದರ ಕಣ್ಣಿಗೆ ಬೀಳುವಂತಿರಬೇಕು. ಅದು ಈ ಯೋಜನೆಯ ಉದ್ದೇಶ.

**ಪತ್ರಿಕೆ:** ಆಶ್ರಮದಲ್ಲಿ ಈಗ ಎಷ್ಟು ಜನ ನೆಲೆಸಿದ್ದಾರೆ?

**ಪ್ರಸನ್ನ:** ಮೊದಲು ನಾನೊಬ್ಬನೇ ಇಲ್ಲಿ ವಾಸಿಸಲು ಆರಂಭಿಸಿದೆ. ಈಗ ಕೆಲವು ನೇಕಾರರು ಇದ್ದಾರೆ. ಮುಂದಿನ ತಿಂಗಳಲ್ಲಿ ಆಶ್ರಮದ ಚಟುವಟಿಕೆ ಆರಂಭಗೊಳ್ಳುತ್ತದೆ. ಚರಕ ಸಂಸ್ಥೆಯ ಕೆಲವು ಘಟಕಗಳು ಇಲ್ಲಿ ವರ್ಗಾವಣೆಗೊಳುತ್ತವೆ.

**ಪತ್ರಿಕೆ:** ಚರಕ ಸಂಸ್ಥೆಯವರಲ್ಲದೆ ಬೇರೆಯವರು ಆಶ್ರಮಕ್ಕೆ ಬಂದು ನೆಲೆಸಬಹುದೇ?

**ಪ್ರಸನ್ನ:** ಚರಕ ಸಂಸ್ಥೆ ಆರಂಭವಾದ ನಂತರ ಕರ್ನಾಟಕದ ಹಲವು ಕಡೆಗಳಿಂದ ಗ್ರಾಮೀಣ ಸಂಘಟನೆಯವರು ನಮ್ಮ ಊರಿನಲ್ಲೂ ಚರಕ ಆರಂಭಿಸಿ ಎಂದು ಕೇಳುತ್ತಿದ್ದಾರೆ. ಅಂತವರಿಗೆ ನೀವು ಕೇಳಿದಂತೆ ನಿಮ್ಮ ಊರಿನಲ್ಲಿ ಸಂಸ್ಥೆ ಆರಂಭಿಸಲು ಸಾಧ್ಯವಿಲ್ಲ, ಬೇಕಾದರೆ ನಿಮ್ಮ ಉತ್ಪನ್ನಗಳಿಗೆ ಮಾರುಕಟ್ಟೆ ಒದಗಿಸಬಹುದು ಎಂದು ಹೇಳುತ್ತಾ ಬಂದಿದ್ದೇವೆ. ಈಗ ಆಶ್ರಮದ ಮೂಲಕ ಹೀಗೆ ಕೇಳಿದವರಿಗೆ ಚರಕ ಎಂದರೇನು, ಇಲ್ಲಿನ ಚಟುವಟಿಕೆ, ವ್ಯವಸ್ಥೆ ಹೇಗಿರುತ್ತದೆ ಎಂದೆಲ್ಲಾ ವಿವರಿಸಲು ಸಾಧ್ಯ. ಚರಕದಂತಹ ಸಂಸ್ಥೆ ಆರಂಭಿಸಲು ಉತ್ಸಾಹ ಇರುವವರು ಆಶ್ರಮದಲ್ಲಿ ಖುದ್ದಾಗಿ ನೆಲೆಸಿ ಮಾಹಿತಿ, ತರಬೇತಿ ಪಡೆಯುವ ಅವಕಾಶವಿದೆ. ಇಲ್ಲಿ ಹಳ್ಳಿಯವರು, ಪೇಟೆಯವರು ಎಂಬ ಭೇದವಿಲ್ಲ. ಏಕೆಂದರೆ ಪೇಟೆಯ ಹಲವರಿಗೂ ಬದಲಾವಣೆಯ ಅಗತ್ಯ ಕಂಡುಬಂದಿದೆ. ಪೇಟೆಯ ಮಂದಿಯಲ್ಲೂ ಗ್ರಾಮೀಣ ಉದ್ದಿಮೆಗೆ ಬೇಕಾಗಿರುವ ಹಲವು ತಂತ್ರಜ್ಞಾನ ಲಭ್ಯವಿದೆ. ಹೀಗಾಗಿ ಪೇಟೆಯ ಮತ್ತು ಹಳ್ಳಿಯ ಮಂದಿಯ ನಡುವಣ ಕೊಡು–ಕೊಳ್ಳುವಿಕೆಗೆ ಆಶ್ರಮ ಕೊಂಡಿಯಾಗಲಿದೆ. ಇನ್ನು ಕೆಲವೇ ತಿಂಗಳುಗಳಲ್ಲಿ ಆಶ್ರಮದಲ್ಲಿ 50 ರಿಂದ 60 ಜನ ಉಳಿದುಕೊಳ್ಳುವ ವ್ಯವಸ್ಥೆಯಾಗಲಿದೆ.

**ಪತ್ರಿಕೆ:** ಆಶ್ರಮ ಅನ್ನುವ ಪದವನ್ನು ಪ್ರಜ್ಞಾಪೂರ್ವಕವಾಗಿ ಆಯ್ಕೆ ಮಾಡಿಕೊಂಡಿದ್ದೀರಾ?

**ಪ್ರಸನ್ನ:** ಹೌದು. ತರಬೇತಿ ಸಂಸ್ಥೆ ಅನ್ನುವುದಕ್ಕೆ ಒಂದು ಔಪಚಾರಿಕವಾದ ಅರ್ಥ ಬಂದುಬಿಟ್ಟಿದೆ. ಅಲ್ಲೆಲ್ಲಾ ಬುದ್ಧಿ ಪ್ರಣೀತ ವ್ಯವಸ್ಥೆ ಇರುತ್ತದೆ. ನಮ್ಮ ಆಶ್ರಮದಲ್ಲಿ ಅನುಭವ ಪ್ರಣೀತ ವ್ಯವಸ್ಥೆ ಇರುತ್ತದೆ. ಮೊದಲಿನಿಂದಲೂ ಆಶ್ರಮಗಳಲ್ಲಿ ಜ್ಞಾನಾರ್ಜನೆ ಎಂಬುದು ಅನುಭಾವಾರ್ಜನೆ ಮೂಲಕ ನಡೆಯುತ್ತಿತ್ತು. ವಿಶ್ವವಿದ್ಯಾನಿಲಯ ಎಂಬ ಪ್ರತ್ಯೇಕ ವ್ಯವಸ್ಥೆ ಮಾಡಿ ಶುದ್ಧ ಜ್ಞಾನ ಎಂಬ ಮೂರ್ಖ ಪರಿಕಲ್ಪನೆ ಬಂದು ಅನೇಕ ಅವಾಂತರಗಳನ್ನು ಸೃಷ್ಟಿಸುತ್ತಿದೆ. ಜ್ಞಾನ ಶುದ್ಧವಾಗಿರಬಾರದು. ಅದು ಅನುಭವ ಹಾಗೂ ಬದುಕಿನೊಟ್ಟಿಗೆ ಸೇರಿ ಅಶುದ್ಧವಾಗಿರಬೇಕು.

**ಪತ್ರಿಕೆ:** ಆಶ್ರಮಕ್ಕೆ ಈ ಪ್ರದೇಶವನ್ನೇ ಆಯ್ಕೆ ಮಾಡಿಕೊಂಡಿದ್ದು ಯಾಕೆ?

**ಪ್ರಸನ್ನ:** ನನ್ನ ತಾಯಿ ಮಲೆನಾಡಿನವರು. ನಾನು ಹುಟ್ಟಿದ್ದು ಆನವಟ್ಟಿಯಲ್ಲಿ. ತಂದೆ ಬಯಲುಸೀಮೆಯವರು. ಶಿಕ್ಷಣಕ್ಕಾಗಿ ಹಲವು ವರ್ಷ ನಗರ ಪ್ರದೇಶದಲ್ಲಿದ್ದೆ. 25 ವರ್ಷ ಹಿಂದೆ ಪೇಟೆಯ ಬದುಕು ಸಾಕು ಅನಿಸಿ ಹೆಗ್ಗೋಡಿನಲ್ಲಿ ಬದುಕುತ್ತಿದ್ದೇನೆ. ಈ ಕಾರಣ ಆಶ್ರಮಕ್ಕೆ ಈ ಪ್ರದೇಶವನ್ನೇ ಆಯ್ಕೆ ಮಾಡಿಕೊಂಡಿದ್ದೇನೆ.

**ಪತ್ರಿಕೆ:** ನಿಮ್ಮ ವೈಯುಕ್ತಿಕ ಬದುಕಿನಲ್ಲಿ ವ್ರತದ ರೀತಿಯಲ್ಲಿ ಕಟ್ಟುನಿಟ್ಟಾದ ಜೀವನ ಶೈಲಿಯನ್ನು ಅನುಸರಿಸುತ್ತಿದ್ದೀರಿ. ಇದು ಎಲ್ಲರಿಗೂ ಸಾಧ್ಯವೇ?

**ಪ್ರಸನ್ನ:** ಪ್ರತಿಯೊಬ್ಬರೂ ತಮ್ಮ ಜೀವನ ಶೈಲಿಯಲ್ಲಿ ಏನನ್ನು ಕಳಚಿಕೊಳ್ಳಲು ಸಾಧ್ಯ ಎನ್ನುವುದನ್ನು ಅವರೇ ನಿರ್ಧರಿಸಿಕೊಳ್ಳಬೇಕು. ಇದಕ್ಕೆ ನಾನು ಅಥವಾ ಬೇರೆ ಯಾರಾದರೂ ಮಾದರಿ ಅಂತ ಅಲ್ಲಾ. ಇದನ್ನು ಮುಂಬೈ, ನ್ಯೂಯಾರ್ಕ್‌ನಲ್ಲಿ ಇದ್ದವರು ಮಾಡಬಹುದು. ನಿಮ್ಮ ಬದುಕಿನಿಂದ ಯಂತ್ರಗಳನ್ನು ಕಳಚುವ ನಿರ್ಧಾರ ಕೈಗೊಂಡಾಗ ಎಷ್ಟರಮಟ್ಟಿಗೆ ಅದು ಸಾಧ್ಯ ಎನ್ನುವುದು ನಿಮಗೆ ಗೊತ್ತಿರುತ್ತದೆ ಮತ್ತು ಗೊತ್ತಾಗುತ್ತದೆ.

**ಪತ್ರಿಕೆ:** ಇವತ್ತಿನ ಕಾಲಮಾನದಲ್ಲಿ ಮೊಬೈಲ್, ಕಂಪ್ಯೂಟರ್ ಬಳಸದೆ ಇರುವುದು ಕಷ್ಟಸಾಧ್ಯವಲ್ಲವೇ?

**ಪ್ರಸನ್ನ:** ನಾನು ಮೊಬೈಲ್ ಬಳಕೆ ಇಲ್ಲದೆ ಸುಂದರವಾಗಿ ಬದುಕುತ್ತಿದೇನೆ. ಆಶ್ರಮಕ್ಕೆ ಸ್ಥಿರ ದೂರವಾಣಿಯನ್ನು ಹಾಕಿಸಿಲ್ಲ. ನನ್ನನ್ನು ಸಂಪರ್ಕಿಸಲೇಬೇಕು ಎನ್ನುವವರು ಹೇಗಾದರೂ ಸಂಪರ್ಕಿಸುತ್ತಾರೆ. ಕಾರು, ಬೈಕ್ ಬಳಸದೆ ಸುಖವಾಗಿದ್ದೇನೆ. ಸಾಧ್ಯವಾದವರು ಸಂತೋಷದಿಂದಲೆ ಮಾಡಬೇಕು. ಇವನ್ನೆಲ್ಲಾ ಬಿಡುತ್ತೇನೆ ಎಂದು ಗುರಿ ಇಟ್ಟುಕೊಳ್ಳಬೇಕಿಲ್ಲ. ಪೇಟೆಯವರ ಬಳಿ ಇದನ್ನೆಲ್ಲಾ ಹೊಂದಲು ಸಂಪನ್ಮೂಲವಾದರೂ ಇದೆ. ಆದರೆ ಹಳ್ಳಿಗರು ಪ್ರತಿಷ್ಠೆಗಾಗಿ ಈ ಸೌಲಭ್ಯ ಪಡೆಯಲು ಸಾಲಗಾರರಾಗುತ್ತಿದ್ದಾರೆ. ಇದರಿಂದ ಹಳ್ಳಿಯ ಬದುಕಿನ ಸಹಜತೆ ಹೊರಟು ಹೋಗುತ್ತಿದೆ. ಆಶ್ರಮದ ಮೂಲಕ ಈ ಬಗ್ಗೆ ಎಚ್ಚರ ಮೂಡಿಸುವ ಉದ್ದೇಶವಿದೆ.

**ಪತ್ರಿಕೆ:** ಮಾರುಕಟ್ಟೆಯ ಅತಿಯಾದ ಅಬ್ಬರದ ನಡುವೆ ಎಚ್ಚರ ಮೂಡಿಸುವುದು ಸುಲಭವೇ?

**ಪ್ರಸನ್ನ:** ಇದೇ ಅಂಶವೇ ನನ್ನನ್ನು ತೀವ್ರವಾಗಿ ಕಾಡಿದ್ದು. ಮಾರುಕಟ್ಟೆಯ ಮೊದಲ ಅಪಾಯ ಬಡಿದದ್ದು ನಾನು ಕೆಲಸ ಮಾಡುತ್ತಿದ್ದ ರಂಗಭೂಮಿ ಕ್ಷೇತ್ರದ ಮೇಲೆ. ರಂಗಭೂಮಿ ಎನ್ನುವ ವ್ಯವಸ್ಥೆಯನ್ನೆ ಮಾರುಕಟ್ಟೆ ಸಂಸ್ಕೃತಿ ಹಾಳು ಮಾಡುತ್ತಿದೆ. ಇವತ್ತು ಟಿವಿ ಮತ್ತು ಸಿನಿಮಾಗಳಿಗೆ ನಟರನ್ನು ಪೂರೈಸುವುದಕ್ಕೆ ರಂಗಭೂಮಿ ವೇದಿಕೆಯಾಗುತ್ತಿದೆ. ಇದರ ಲಾಭ ಟಿವಿ, ಸಿನಿಮಾಕ್ಕೆ ಆಗುತ್ತಿದೆ ವಿನಾ ರಂಗಭೂಮಿಗೆ ಪ್ರಯೋಜನವಾಗದೆ ಸೊರಗುತ್ತಿದೆ. ಎಲ್ಲಾ ರಂಗಕ್ಕೂ ಆವರಿಸುತ್ತಿರುವ ಈ ಸಂಸ್ಕೃತಿಯ ಅಪಾಯಗಳ ಬಗ್ಗೆ ಎಚ್ಚರ ಮೂಡಿಸುವುದು ಅನಿವಾರ್ಯ.

**ಪತ್ರಿಕೆ:** ಆಶ್ರಮ ಭವಿಷ್ಯದ ರೂಪುರೇಷೆ?

**ಪ್ರಸನ್ನ:** ಬಹಳ ದೊಡ್ಡ ಆಸೆಗಳು ಇಲ್ಲ. ಹಳ್ಳಿಗರಿಗೆ ಅವರ ಸರಳ ಬದುಕಿನಲ್ಲಿ ತೃಪ್ತಿ ಕಾಣುವಂತೆ ಮಾಡಿದರೆ ಆಶ್ರಮದ ದೊಡ್ಡ ಸಾಧನೆಯಾಗುತ್ತದೆ. ಅದನ್ನು ಮನವರಿಕೆ ಮಾಡಬೇಕಾದರೆ ನಾವು ಸರಳವಾಗಿ ಬದುಕಬೇಕು. ಆಗ ಮಾತ್ರ ಬೇರೆಯವರಿಗೆ ಹೇಳಬಹುದು.

**(ಚಿತ್ರಗಳು: ಅರುಣ್, ಸ್ಮೈಲ್ ಮತ್ತು ಎಂ. ರಾಘವೇಂದ್ರ)**

# ನಾನೂ ಒಬ್ಬ ಗಾಂಧಿವಾದಿ: ಖುಷ್ವಂತ್ ಸಿಂಗ್!



'ಸರಳ ಜೀವನ, ಉನ್ನತ ಚಿಂತನ' ಎಂಬುದು ಗಾಂಧಿ ಬದುಕಿನ ಸಂದೇಶವಾಗಿತ್ತು. ಅರುಚಿ ಎಂಬುದು ಅವರ ಈ ಸರಳ ಜೀವನ ಕಲ್ಪನೆಯ ಮುಖ್ಯ ಮೌಲ್ಯಗಳಲ್ಲಿ ಒಂದಾಗಿತ್ತು. ಆದರೆ ಲೋಕವನ್ನು ರುಚಿಕಟ್ಟಾಗಿ ಅನುಭವಿಸುವುದರಲ್ಲಿ ನಂಬಿಕೆಯಿಟ್ಟ ಅಪಾರ ಸಂಖ್ಯೆಯ ಜನರೂ ಅವರ ಅಭಿಮಾನಿಗಳಾಗಿದ್ದರು. ಅವರು ತಮ್ಮನ್ನು ಗಾಂಧಿವಾದಿಗಳೆಂದು ಕರೆದುಕೊಳ್ಳಲು ಹಿಂಜರಿಯಲಿಲ್ಲ. ಹಾಗೇ ನೋಡಿದರೆ ಇಂಥವರ ಸಂಖ್ಯೆಯೇ ಹೆಚ್ಚು. ಬಹುಶಃ ಅವರೇ ಪ್ರಾಮಾಣಿಕ ಗಾಂಧಿವಾದಿಗಳೇನೋ! ಮಿಕ್ಕವರು ಲೋಹಿಯಾರ ಮಾತುಗಳಲ್ಲೇ ಹೇಳುವುದಾದರೆ, ಸರ್ಕಾರಿ ಗಾಂಧಿವಾದಿಗಳು ಅಥವಾ ಮಠೀಯ ಗಾಂಧಿವಾದಿಗಳು. ಈ ಹಿನ್ನೆಲೆಯಲ್ಲಿ ನಮ್ಮ 'ರುಚಿ'ಕಟ್ಟಾದ ಲೇಖಕರಲ್ಲೊಬ್ಬರೆನಿಸಿದ ಖುಷ್ವಂತ್ ಸಿಂಗ್ ಗಾಂಧಿ ಬಗ್ಗೆ ಬರೆದಿರುವುದನ್ನು ಇಲ್ಲಿ ನೀಡುತ್ತಿದ್ದೇವೆ. ಇದು ಇತ್ತೀಚೆಗೆ ಬಂದ ಸಿಂಗ್‌ರ 'ಖುಷ್ವಂತ್ ನಾಮ' ಪುಸ್ತಕದಿಂದ ಆಯ್ದ ಭಾಗ. ಅನುವಾದ: ಎಂ.ಎಸ್. ರುದ್ರೇಶ್ವರ ಸಾಮಿ–ಸಂ

ಇತ್ತೀಚಿನ ದಿನಗಳಲ್ಲಿ, ನನಗೆ ನಾನೇ ಗಾಂಧಿ ಅವರನ್ನು ಕುರಿತು ಯೋಚಿಸುವುದನ್ನು ಕಂಡುಕೊಂಡಿದ್ದೇನೆ. ಅವರನ್ನು ನಾನು ಏಕೆ ಆರಾಧಿಸುತ್ತೇನೆ ಮತ್ತು ನನ್ನನ್ನು ನಾನು ಗಾಂಧಿವಾದಿ ಎಂದು ಏಕೆ ಕರೆದುಕೊಳ್ಳುತ್ತೇನೆ? ಇದಕ್ಕೆ ಮೂರು ಕಾರಣಗಳಿವೆ: ಗಾಂಧಿ ಎಂದೂ ಸುಳ್ಳಾಡದಿದ್ದದ್ದು. ಇನ್ನೊಬ್ಬರಿಗೆ ನೋವಾಗದಂತೆ ನಡೆದುಕೊಳ್ಳಲು ತಮ್ಮೆಲ್ಲ ಶಕ್ತಿಮೀರಿ ಪ್ರಯತ್ನಿಸಿದ್ದು. ತಾವು ನಂಬಿದ ತತ್ವಗಳಿಗಾಗಿ ತಮ್ಮ ಜೀವವನ್ನೇ ಪಣವಾಗಿರಿಸಿದ್ದು ಮತ್ತು ಅದರಲ್ಲಿ ಜಯಶಾಲಿಗಳಾಗಿದ್ದು.

ಅವರು ತಮ್ಮ ಪ್ರಿಯವಾದ ಪ್ರಾರ್ಥನೆಯ ನಾಯಕನ ಪ್ರತೀಕವೇ ಆಗಿದ್ದರು: ***ವೈಷ್ಣವ್‌ಜನ್ ತೋ ತೇನೆ ಕಹೀಯೇ, ಜೊ ಪೀಡ್ ಪರಾಯೇ ಜಾನೆ ರೇ*** (ನನಗೆ ಗೊತ್ತು ದೇವರ ಮನುಷ್ಯನೆಂದರೆ ಅವನು; ಇನ್ನೊಬ್ಬರ ನೋವಿಗೆ ಸ್ಪಂದಿಸುವವನು)

ಗಾಂಧಿಯನ್ನು ಗುಂಡಿಕ್ಕಿ ಕೊಂದಂದಿನಿಂದ, ಅವರ ಜನ್ಮ ದಿನಾಚರಣೆಯನ್ನು, ಪ್ರತಿ ವರ್ಷವೂ ಆಚರಿಸಲಾಗುತ್ತಿದೆ, ರಾಜ್‌ಘಾಟ್ ಮತ್ತು ಇತರೆಡೆಗಳಲ್ಲಿನ ಆ ಹೂಗುಚ್ಛ ಮತ್ತು ಭಜನೆಗಳ ಶ್ರದ್ಧಾಂಜಲಿ ಕಾರ್ಯಕ್ರಮವನ್ನು ಟೀವಿ ಪರದೆಯ ಮೇಲೆ ಮತ್ತು ಆ ಸುದ್ದಿಯನ್ನು ದಿನಪತ್ರಿಕೆಗಳಲ್ಲಿ ನೋಡಿ ನೋಡಿ ನಮಗೆ ಸಾಕಾಗಿ ಹೋಗಿದೆ. ಅದೊಂದು ಶಾಸ್ತ್ರಾಚಾರವಾಗಿಬಿಟ್ಟಿದೆ, ಗಾಂಧಿ ತೋರಿದ ಹಾದಿಯಲ್ಲಿ ನಡೆಯುವುದಕ್ಕೆ ನಾವು ಪ್ರಯತ್ನವನ್ನಾದರೂ ಮಾಡಿದೆವೇ, ಎನ್ನುವ ಪ್ರಶ್ನೆ ಕುರಿತಾಗಿ, ಕೆಲವೇ ಕೆಲವು ಜನ ಮಾತ್ರ ಆಲೋಚಿಸುತ್ತಾರೆ.

ನನ್ನನ್ನು ಗಾಂಧಿವಾದಿ ಎಂದು ಕರೆದುಕೊಳ್ಳುವ ನನಗೆ; ಯಾವಾಗಲೂ ನಾನು ಮಾತ್ರ ಸರಿ ಎಂದು ಹೆಮ್ಮೆ ಪಡುವ ನನಗೆ, ಸ್ವಲ್ಪವೇ ಸ್ವಲ್ಪವೂ ಅನುಮಾನ ಇಲ್ಲ: ಒಂದು ವೇಳೆ ನಾನೇನಾದರೂ ಗಾಂಧಿಯವರ ಆಶ್ರಮಕ್ಕೆ ಹೋಗಿ, ಅಲ್ಲಿ ಕೆಲ ದಿನಗಳ ಮಟ್ಟಿಗೆ ಇರಲು ಅನುಮತಿ ಕೋರಿದ್ದರೆ, ಅವರು ನನ್ನ ಮನವಿಯನ್ನು ತಿರಸ್ಕರಿಸಿ, ಅಲ್ಲಿಂದ ತಕ್ಷಣವೇ ಹೊರನಡೆಯಲು ಆದೇಶಿಸುತ್ತಿದ್ದರು. ಅವರು ದೇವರನ್ನು ನಂಬುತ್ತಿದ್ದರು. ನನಗೆ ಆ ನಂಬಿಕೆ ಇಲ್ಲ. ಅವರು ಪಕ್ಕಾ ಸಸ್ಯಾಹಾರಿಗಳಾಗಿದ್ದರು ಮತ್ತು ಅವರು ಲಂಡನ್‌ನಲ್ಲಿ ವಕೀಲರಾಗಲು ಕಾನೂನನ್ನು ಅಭ್ಯಸಿಸುತ್ತಿದ್ದಾಗ, ತಮ್ಮ ಬಿಡುವಿನ ವೇಳೆಯನ್ನು ಸಸ್ಯಾಹಾರದ ಪರ ಪ್ರಚಾರ ಕೈಗೊಂಡರು. ನಾನು ಸಸ್ಯಾಹಾರ ಪ್ರಕೃತಿ ನಿಯಮದ ವಿರುದ್ಧವೆಂದು ನಂಬಿದವನು ಮತ್ತು ಸಂಕೋಚವಿಲ್ಲದೆ ಎಲ್ಲ ತರಹದ ಮಾಂಸ ತಿನ್ನುವವನು. ಅವರು ಪಾನ ನಿರೋಧ ಪ್ರತಿಪಾದಕರು ಆದರೆ ಒಂದು ಮಿತಿಯಲ್ಲಿ ಕುಡಿಯುವುದು ಒಳ್ಳೆಯದು ಎಂದು ನಂಬುವವನು ನಾನು. ಕುಡಿದು ತೂರಾಡುವುದು ಕೆಟ್ಟದ್ದು. ನಾನು ಯಾವಾಗಲೂ ಒಳ್ಳೆಯ ವೈನು ಮತ್ತು ಸ್ಕಾಚ್ ಸವಿದಿದ್ದೇನೆ. ಗಾಂಧಿ ಇಂದ್ರಿಯ ನಿಗ್ರಹಕ್ಕೆ ಒತ್ತುಕೊಟ್ಟರು. ನನ್ನ ಪ್ರಕಾರ, ಲೈಂಗಿಕತೆ ಮನುಷ್ಯನ ಬದುಕಿನಲ್ಲಿ ಬಹಳ ಮುಖ್ಯವಾದ ಮತ್ತು ಸಂತೋಷ ಒದಗಿಸುವ ಅನುಭವ.

ನಾನು ಜನರಿಗೆ ನೋವುಂಟು ಮಾಡಲಿಚ್ಛಿಸದೆ, ಅವರನ್ನು ಇಕ್ಕಟ್ಟಿನಿಂದ ಪಾರುಮಾಡಲು ಸುಳ್ಳು ಹೇಳುತ್ತೇನೆ. ಗಾಂಧಿ ಸತ್ಯವನ್ನು ಪೂಜಿಸಿದರು. ಸತ್ಯವನ್ನೇ ದೇವರೆಂದು ಕರೆದರು. ದೇವರ ಅಸ್ತಿತ್ವವನ್ನು ಪ್ರಶ್ನಿಸಬಹುದಾದರೂ, ಅದನ್ನು ಸತ್ಯಕ್ಕೆ ಸಮಾನ ಮಾಡಿದಾಗ, ಅದು ಮಾನವ ವರ್ತನೆಯ ಭಾಗವಾಗಿಬಿಡುತ್ತದೆ ಮತ್ತು ಕೊನೆವರೆಗೂ ದಿನನಿತ್ಯ ಅದರ ಸತ್ಯಾಸತ್ಯತೆಯ ಪರೀಕ್ಷೆ ನಡೆಯಬೇಕಾಗುತ್ತದೆ. ಆದ್ದರಿಂದಲೇ ಜಗತ್ತಿನೆಲ್ಲೆಡೆ, ಸಸ್ಯಾಹಾರಕ್ಕೆ, ಮದ್ಯದಿಂದ ದೂರ ಇರುವುದಕ್ಕೆ ಮತ್ತು ಇಂದ್ರಿಯ ನಿಗ್ರಹಕ್ಕೆ (ಸಂತತಿ ಮುಂದುವರಿಕೆಯ ಹೊರತಾಗಿ) ಗಾಂಧಿ ತೋರಿದ ಬದ್ಧತೆಗೆ, ಹೆಚ್ಚು ಆದ್ಯತೆ ನೀಡದ ಕೋಟ್ಯಾಂತರ ಜನರೂ, ಗಾಂಧಿಯವರನ್ನು ಮಹಾತ್ಮ ಎಂದು ನಂಬುತ್ತಾರೆ. ಮಾನವ ಜನಾಂಗಕ್ಕೆ ಹೊಸತೊಂದು ಸಂದೇಶ ನೀಡಬಲ್ಲವರಾಗಿದ್ದ ಮಹಾತ್ಮರ ಅನುಯಾಯಿ ತಾವು ಎಂದು ಭಾವಿಸುವುದಕ್ಕೆ ಹೆಮ್ಮೆ ಪಡುತ್ತಾರೆ.

ಬಾಪು ವಿರುದ್ಧ ನನ್ನ ಕೆಲವು ಗೊಣಗಾಟಗಳೂ ಇವೆ. ಅವರು ತಮ್ಮ ಪತ್ನಿ ಕಸ್ತೂರಬಾ ಅವರನ್ನು ತುಂಬಾ ಕೆಟ್ಟದಾಗಿ ನಡೆಸಿಕೊಂಡರು ಮತ್ತು ಅವರ ಮಕ್ಕಳ ಬಗ್ಗೆ ಉದಾಸೀನ ಮನೋಭಾವ ಹೊಂದಿದ್ದರು. ಅವರಲ್ಲಿ ಇವಲ್ಲದೆ ಇನ್ನೂ ಕೆಲವು ಋಣಾತ್ಮಕ ಗುಣಗಳಿದ್ದವು. ಅವುಗಳಿಗೆ ಸಂಬಂಧಿಸಿ ಹೆಚ್ಚು ಹೇಳುವುದಕ್ಕೆ ಇರಿಸುಮುರಿಸಾಗುತ್ತದೆ. ಆದಾಗ್ಯೂ, ನಾನು ಗಾಂಧಿಯವರನ್ನು ಆರಾಧಿಸುತ್ತೇನೆ ಮತ್ತು ನಾನೊಬ್ಬ ಗಾಂಧಿವಾದಿ ಎಂದು ಸಾರಿ ಸಾರಿ ಹೇಳುತ್ತೇನೆ.

ಗಾಂಧಿ ತಮ್ಮ ಮೌಲ್ಯಗಳನ್ನು ಮತ್ತು ನೀತಿ ಸಂಹಿತೆಯನ್ನು ದಕ್ಷಿಣ ಆಫ್ರಿಕಾದಲ್ಲಿದ್ದಾಗ ರೂಪಿಸಿಕೊಂಡರು. ತನಗಿಂತ ಬಲಶಾಲಿಯಾದ ಎದುರು ಪಕ್ಷದ ವಿರುದ್ಧ ಬಳಸಬಹುದಾದ ಬಹು ಶಕ್ತಿಶಾಲಿ ಅಸ್ತ್ರವೆಂದರೆ ತಾನು ನಂಬಿರುವುದು ಸತ್ಯ ಎಂಬ ಬದ್ಧತೆಯಿಂದ ನಡೆಸುವ ಸವಿನಯ ಕಾನೂನು ಭಂಗ ಎಂಬುದು ಅವರ ಅರಿವಿಗೆ ಬಂತು; ಅಲ್ಲಿಯೇ ಹುಟ್ಟಿದ್ದು ಸತ್ಯದ ಶಕ್ತಿಯನ್ನು ಅವಲಂಬಿಸಿದ ಸತ್ಯಾಗ್ರಹ. ಅದನ್ನು, ಯಾವುದೇ ವೈರತ್ವವಿಲ್ಲದೆ ಮತ್ತು ಎದುರಾಳಿಯು ಶಸ್ತ್ರ ತ್ಯಜಿಸಿ ನಿನ್ನ ದೃಷ್ಟಿಕೋನಕ್ಕೆ ಪರಿವರ್ತಿತನಾಗುತ್ತಾನೆ ಎಂಬ ನಂಬಿಕೆಯಿಂದ ಅದನ್ನು ಬಳಸಬೇಕು. ಆದಾಗ್ಯೂ, ಸತ್ಯಾಗ್ರಹವನ್ನು ಒಂದು ಪ್ರಬಲ ಶಕ್ತಿಯನ್ನಾಗಿಸಲು, ಸತ್ಯಾಗ್ರಹಿ ಭಯದಿಂದ ಮುಕ್ತನಾಗಿರಬೇಕಾಗುತ್ತದೆ, ಅಗತ್ಯಬಿದ್ದರೆ, ಅಪಮಾನದ ದಳ್ಳುರಿಯಲ್ಲಿ ನಲುಗಬೇಕಾಗುತ್ತದೆ, ದೈಹಿಕ ಹಿಂಸೆಯನ್ನೂ ಸಹಿಸಿಕೊಳ್ಳಬೇಕಾಗುತ್ತದೆ. ಅನೇಕ ಸಲ ಗಾಂಧಿ ಏಟು ತಿನ್ನಬೇಕಾಗಿ ಬಂತು, ಜೈಲಿಗೆ ಹೋಗಬೇಕಾಗಿ ಬಂತು. ಅವರ ಹತ್ಯೆಗೆ ಪ್ರಯತ್ನಗಳು ನಡೆದವು. ಆದರೂ ಅವರೆಂದೂ ಹಿಂಜರಿಯಲಿಲ್ಲ, ಬಲು ಬೇಗ ದಕ್ಷಿಣ ಆಫ್ರಿಕಾದ ಬಿಳಿಯ ಆಳ್ವಿಕೆದಾರರು, ಬ್ರಿಟಿಷ್ ಮತ್ತು ಡಚ್ಚರು ಅವರನ್ನು ಗೌರವಿಸುವುದಕ್ಕೆ ಪ್ರಾರಂಭಿಸಿದರು ಮತ್ತು ಅವರಲ್ಲಿದ್ದ ನೈತಿಕ ಶ್ರೇಷ್ಠತೆಯನ್ನು ಗುರುತಿಸಿದರು. ಅವರನ್ನು ಸಂತನೆಂದು ಮಾನ್ಯ ಮಾಡಿದರು.

ನಾನು ಬಾಪುವನ್ನು ಆರಾಧಿಸುತ್ತೇನೆ ಬೇರೆ ಇನ್ನಾರಿಗಿಂತಲೂ ಹೆಚ್ಚಾಗಿ. ಆಗಿಹೋದ ಎಲ್ಲ ಪ್ರವಾದಿಗಳ ಬಗ್ಗೆ ನಮಗೆ ಗೊತ್ತಿಲ್ಲ– ಅವರ ಬಗ್ಗೆ ನಮಗೆ ಗೊತ್ತಿರುವುದು ಪುರಾಣ ಇಲ್ಲವೆ ಪವಾಡ ಮಾತ್ರ. ಆದರೆ ಗಾಂಧಿಯವರ ವಿಷಯದಲ್ಲಿ, ನಮಗೆಲ್ಲ ಗೊತ್ತು. ಅವರೊಂದು ನಮ್ಮ ಕಣ್ಣ ಮುಂದಿನ ಜೀವಂತ ವಾಸ್ತವ ಎಂದು.

ಯಾವುದಾದರೂ ವಿಷಯದ ಬಗ್ಗೆ ನನಗೆ ಗೊಂದಲವಿದ್ದಾಗ, ನಾನು ಸುಮ್ಮನೆ ಊಹಿಸಿಕೊಳ್ಳುತ್ತೇನೆ, ಅಂತಹ ಸಂದರ್ಭದಲ್ಲಿ ಗಾಂಧಿ ಮಾಡುತ್ತಿದ್ದದ್ದನ್ನು ಮತ್ತು ನಾನೂ ಅದನ್ನೇ ಮಾಡುತ್ತೇನೆ.

*

# ಗಾಂಧಿ ಮತ್ತು ಭಾರತದ ಸಮಾಜವಾದಿಗಳು

–ರಾಜಾರಾಂ ತೋಳ್ಪಾಡಿ



ಗಾಂಧೀಜಿ ಮತ್ತು ಭಾರತದ ಸಮಾಜವಾದಿಗಳ ನಡುವಿನ ಸಖ್ಯ, ಸಂವಾದ ಹಾಗೂ ಸೆಣಸಾಟಗಳು ಭಾರತದ ರಾಷ್ಟ್ರೀಯ ಹೋರಾಟದ ಮಹಾನ್ ಗಾಥೆಯೊಳಗಿನ ಒಂದು ಉಪಕತೆಯಂತೆ ಕಾಣಿಸುತ್ತದೆ. ಆದರೂ ಭಾರತದ ಸೈದ್ಧಾಂತಿಕ ರಾಜಕಾರಣದ ಸಾಂಸ್ಕೃತಿಕ ಸಂದರ್ಭದಲ್ಲಿ ಅದು ಮಹತ್ವವನ್ನು ಪಡೆದುಕೊಳ್ಳುತ್ತದೆ. ಮೇಲುನೋಟದಲ್ಲಿಯೇ, ಗಾಂಧೀಜಿ ಮತ್ತು ಸಮಾಜವಾದಿಗಳ ನಡುವೆ ಮೂಲಭೂತವಾದ ದೃಷ್ಟಿಕೋನಗಳ ವ್ಯತ್ಯಾಸ ಕಂಡುಬರುತ್ತದೆ. ಹಾಗಿದ್ದೂ, ಇವರುಗಳು ತಮ್ಮ ನಡುವಿನ ಸಂಕೀರ್ಣ ಸಂಬಂಧಗಳ ಮೂಲಕ ಪರಸ್ಪರರಿಂದ ಅನೇಕ ಸಂಗತಿಗಳನ್ನು ಪಡೆದುಕೊಂಡಿದ್ದಾರ. ಇವರಿಬ್ಬರ' ನಡುವಿನ ಈ ಸಂಕೀರ್ಣ ಸಂಬಂಧಗಳ ಹಾಗೂ ಸೆಣಸಾಟಗಳ ಕೆಲವು ಅಂಶಗಳನ್ನು ಮುಂದಿಡುವ ಪ್ರಯತ್ನವನ್ನು ಇಲ್ಲಿ ಮಾಡಲಾಗಿದೆ.

ನಮಗೆಲ್ಲರಿಗೂ ತಿಳಿದಿರುವಂತೆ ಮೋಹನ್‌ದಾಸ್ ಕರಮಚಂದ್ ಗಾಂಧಿ ತಮ್ಮ ಪ್ರಖರವಾದ ಸ್ವರಾಜ್ಯದ ಕಲ್ಪನೆಯ ನೆಲೆಯಲ್ಲಿ ಆಧುನಿಕ ನಾಗರಿಕತೆಯ ಎಲ್ಲಾ ಸೈದ್ಧಾಂತಿಕ ಪ್ರಮೇಯಗಳನ್ನು ತಿರಸ್ಕರಿಸಿದರು. ಆಧುನಿಕ ನಾಗರಿಕತೆಯ ವೈಜ್ಞಾನಿಕ ದೃಷ್ಟಿಕೋನ, ಚಾರಿತ್ರಿಕ ದೃಷ್ಟಿ ಹಾಗೂ ಪ್ರಗತಿಪರತೆಯ ನೆಲೆಗಳನ್ನು ಗಾಂಧೀಜಿ ಕಟುವಾಗಿ ವಿಮರ್ಶಿಸಿ ಒಂದು ವಿಶಿಷ್ಟ ಬಗೆಯ ಸ್ವರಾಜ್ಯದ ಕಲ್ಪನೆಯನ್ನು ನಮ್ಮ ಮುಂದೆ ಇರಿಸಿದರು. ಅನೇಕ ದೃಷ್ಟಿಗಳಿಂದ ಅವರು ಆಧುನಿಕತೆಯ ಉತ್ಪತ್ತಿಯಾಗಿದ್ದರೂ ಈ ಆಧುನಿಕತೆಯ ಜ್ಞಾನಮೀಮಾಂಸೆಯನ್ನು ಅವರು ಧಿಕ್ಕರಿಸಿ ಒಂದು ಬಗೆಯಾದ ಆಧುನಿಕಾತೀತ ದೃಷ್ಟಿಕೋನವನ್ನು ಪ್ರತಿಪಾದಿಸಿದರು.

ತಾವು ನಾಯಕತ್ವ ವಹಿಸಿದ ರಾಷ್ಟ್ರೀಯ ಹೋರಾಟದ ರಾಷ್ಟ್ರೀಯವಾದಿ ನೆಲೆಯನ್ನು ಆಳದಲ್ಲಿ ಪ್ರಶ್ನಿಸುವ ಗಾಂಧಿ ರಾಷ್ಟ್ರೀಯ ಅಸ್ಮಿತೆಯನ್ನು ಮೀರಿದ ತಾತ್ವಿಕವಾಗಿ ಪ್ರಖರವಾದ ಸ್ವರಾಜ್ಯದ ಪ್ರತಿಪಾದನೆಯನ್ನು ಮಾಡಿದರು. ಒಂದು ಅರ್ಥದಲ್ಲಿ ಭಾರತದ ರಾಷ್ಟ್ರೀಯ ಹೋರಾಟದ ಏಕಮೇವಾದ್ವಿತೀಯ ನಾಯಕರಾಗಿದ್ದ ಗಾಂಧಿ ರಾಷ್ಟ್ರೀಯವಾದದ ತಾತ್ವಿಕತೆಯಲ್ಲಿ ಹುದುಗಿದ್ದ ಪೂರ್ವಾಗ್ರಹಗಳನ್ನು ಒಪ್ಪಿಕೊಂಡಿರಲಿಲ್ಲ ಎನ್ನುವುದು ಒಂದು ವಿಸಂಗತಿಯಾಗಿದ್ದರೂ ಸತ್ಯವಾದ ಮಾತು. ತಮ್ಮ ಸ್ವರಾಜ್ಯದ ಕಲ್ಪನೆಯಲ್ಲಿ ಸತ್ಯಾಗ್ರಹ ಹಾಗೂ ಗ್ರಾಮೀಣ ಭಾರತದ ಕಲ್ಪನೆಗಳನ್ನು ಮೇಳೈಸಿದ ಗಾಂಧೀಜಿ ಆಧುನಿಕತೆಯ ನಿರಾನುಮಾನದ ನೇರ ದಾರಿಹೋಕರಿಗೆ ಒಪ್ಪಿಗೆಯಾಗದೆ ಇರುವ ವಿದ್ಯಮಾನವಾಗಿ ಕಾಣಿಸಿದರು.

ಭಾರತದ ಸಮಾಜವಾದಿಗಳು ಎಂದು ಕರೆಯಲ್ಪಡುವ ಒಂದು ಸಣ್ಣ ಗುಂಪು ಭಾರತದ ರಾಷ್ಟ್ರೀಯ ಹೋರಾಟದ ಕಾಲಘಟ್ಟದಲ್ಲಿ ರಾಷ್ಟ್ರೀಯ ಕಾಂಗ್ರೆಸ್ಸಿನ ಒಳಗೆ ಇದ್ದು ರಾಷ್ಟ್ರೀಯ ಕಾಂಗ್ರೆಸ್ ಪ್ರತಿಪಾದಿಸಿದ ರಾಷ್ಟ್ರೀಯ ಹೋರಾಟವನ್ನು ಕ್ರಾಂತಿಕಾರಕಗೊಳಿಸುವ ಹಾಗೂ ಅದನ್ನು ನಿಜವಾದ ಅರ್ಥದಲ್ಲಿ ಸಾಮ್ರಾಜ್ಯಶಾಹಿಯ ವಿರುದ್ಧ ಜನರ ಹೋರಾಟವಾಗಿ ಪರಿವರ್ತಿಸುವ ಪ್ರಯತ್ನವನ್ನು ಮಾಡಿದರು. ಈ ಸಮಾಜವಾದಿಗಳಲ್ಲಿ ಅನೇಕ ಹಿನ್ನಲೆಗಳಿಂದ ಬಂದ ಮತ್ತು ವಿಭಿನ್ನ ಸೈದ್ಧಾಂತಿಕ ಪ್ರಭೇದಗಳನ್ನು ಪ್ರತಿನಿಧಿಸುವ ಜನರಿದ್ದರು. ಕಾಂಗ್ರೆಸ್ ಸಮಾಜವಾದಿ ಪಕ್ಷವೆಂದು ಕರೆಸಿಕೊಳ್ಳುತ್ತಿದ್ದ ಈ ಸಮಾಜವಾದಿಗಳ ಸಣ್ಣ ಗುಂಪಿನಲ್ಲಿ ಅತ್ಯಂತ ಪ್ರಮುಖ ನಾಯಕರಾಗಿದ್ದ ಆಚಾರ್ಯ ನರೇಂದ್ರದೇವ ಮತ್ತು ಜಯಪ್ರಕಾಶ್ ನಾರಾಯಣ್ ತಮ್ಮನ್ನು ತಾವು ಸ್ಪಷ್ಟವಾಗಿ ಮಾರ್ಕ್ಸ್‌ವಾದಿಗಳು ಎಂದು ಗುರುತಿಸಿಕೊಂಡಿದ್ದರು. ಅಂತೆಯೇ, ಅಶೋಕ್ ಮೆಹ್ತಾ ಮತ್ತು ಮೀನು ಮಸಾನಿ ಮೊದಲಾದ ನಾಯಕರು ತಮ್ಮನ್ನು ಪ್ರಜಾಸತ್ತಾತ್ಮಕ ಸಮಾಜವಾದಿಗಳು ಎಂದು ಗುರುತಿಸಿಕೊಂಡಿದ್ದರು. ಹಾಗೆಯೇ, ರಾಮಮನೋಹರ ಲೋಹಿಯಾ ಮತ್ತು ಅಚ್ಯುತ ಪಟವರ್ಧನ್‌ರಂಥವರು ಗಾಂಧೀಜಿಯವರ ಅಧಿಕಾರದ ವಿಕೇಂದ್ರೀಕರಣದ ಕಲ್ಪನೆಯಿಂದ ಪ್ರಭಾವಿತಗೊಂಡು ಸಮಾಜವಾದವನ್ನು ಅದರ ಪಾಶ್ಚಿಮಾತ್ಯ ಚಾರಿತ್ರಿಕ ನೆಲೆಗಳಿಂದ ಮೂಲೋಚ್ಚಾಟಿಸಿ ಅದನ್ನು ಭಾರತದಂತಹ ವಸಾಹತೋತ್ತರ ಸಮಾಜಗಳಲ್ಲಿ ಮರುನಿರೂಪಿಸುವ ನೆಲೆಯಲ್ಲಿ ಯೋಚಿಸುತ್ತಿದ್ದರು. ಅಂದರೆ ಭಾರತದ ಸಮಾಜವಾದಿಗಳೆಂದು ಕರೆಸಿಕೊಳ್ಳುವ ಈ ಸಣ್ಣ ಗುಂಪಿನಲ್ಲಿ ಸಮಾಜವಾದವೆಂದರೇನು? ಅದರ ತಾತ್ವಿಕ ನೆಲೆಗಟ್ಟು ಯಾವ ರೀತಿಯದಾಗಿರಬೇಕು ಎನ್ನುವುದರ ಬಗ್ಗೆ ಸಹಮತವಿದ್ದಂತೆ ಕಾಣಿಸುವುದಿಲ್ಲ. ಹಾಗಿದ್ದೂ, ಸಮಾಜವಾದವೆನ್ನುವ ಒಂದು ಅನಿರ್ದಿಷ್ಟವಾದ ಸದುದ್ದೇಶದ ಅಡಿಯಲ್ಲಿ ಇವರು ಒಂದಾಗಿದ್ದರು. ಅದೇನೇ ಇದ್ದರೂ ಕೆಲವು ವಿಷಯಗಳಿಗೆ ಸಂಬಂಧಿಸಿದಂತೆ ಇವರುಗಳ ನಡುವೆ ಸಾಮರಸ್ಯವಿರುತ್ತಿತ್ತು. ಇವರುಗಳೆಲ್ಲರೂ ಯೂರೋಪಿನ ವಿಭಿನ್ನ ಬಗೆಯ ಮೂಲಜಿಜ್ಞಾಸಿಕ, ಸೈದ್ಧಾಂತಿಕ ದೃಷ್ಟಿಕೋನಗಳಿಂದ ಪ್ರಭಾವಿತರಾಗಿದ್ದರು. ಅಂತೆಯೇ, ಅವರು ಭಾರತದ ರಾಷ್ಟ್ರೀಯ ಹೋರಾಟ ತನ್ನ liberal ಇತಿಮಿತಿಗಳನ್ನು ದಾಟಿ ನಿಜವಾದ ಅರ್ಥದಲ್ಲಿ ಜನ ಹೋರಾಟವಾಗಬೇಕು ಎಂದು ಭಾವಿಸಿದ್ದರು. ಅಷ್ಟು ಮಾತ್ರವಲ್ಲದೇ, ಸಾಮ್ರಾಜ್ಯಶಾಹಿಯ ಎಲ್ಲಾ ಬಗೆಯ ಸಾಂಸ್ಕೃತಿಕ, ರಾಜಕೀಯ ಮತ್ತು ಆರ್ಥಿಕ ಅಪಾಯಗಳನ್ನು ಅವರು ಅರಿತವರಾಗಿದ್ದರಿಂದ ಸಾಮ್ರಾಜ್ಯಶಾಹಿ ವಿರೋಧಿತ್ವ ಅವರಲ್ಲಿ ಸಕ್ರಿಯವಾಗಿತ್ತು.



ವಿಭಿನ್ನ ಬಗೆಯ ಪಾಶ್ಚಿಮಾತ್ಯ ಸೈದ್ಧಾಂತಿಕ ದೃಷ್ಟಿಕೋನಗಳಿಂದ ಪ್ರಭಾವಿತರಾಗಿದ್ದ ಭಾರತದ ಈ ಸಮಾಜವಾದಿಗಳು ಆಧುನಿಕ ಮನೋಭಾವದವರಾಗಿದ್ದರು ಅಥವಾ ಇವರೆಲ್ಲರಿಗೂ ಆಧುನಿಕತೆಯ ಜ್ಞಾನಮೀಮಾಂಸೆ ವಿಭಿನ್ನ ನೆಲೆಗಳಲ್ಲಿ ಬಹುಮುಖ್ಯವಾಗಿತ್ತು. ಐರೋಪ್ಯ ನಾಗರೀಕತೆ ಒಂದು ಧೀರ್ಘ ಕಾಲಾವಧಿಯಲ್ಲಿ ಉತ್ಪಾದಿಸಿದ ಆಧುನಿಕತೆಯ ಮೇರು ನಿರ್ವಚನಗಳನ್ನು ಅವರು ಸ್ವೀಕರಿಸಿದ್ದರು. ಬಹುಶ: ಭಾರತದ ಸಮಾಜವಾದಿಗಳನ್ನು ವ್ಯಾಪಕವಾಗಿ ಪ್ರಭಾವಿಸಿದ ಆಧುನಿಕತೆಯ ಜ್ಞಾನಮೀಮಾಂಸೆಯೇ ಗಾಂಧೀಜಿ ಹಾಗೂ ಅವರ ನಡುವಿನ ಸೆಣಸಾಟದ ಮುಖ್ಯ ಅಂಶವಾಗಿತ್ತು.

ಗಾಂಧೀಜಿ ತಮ್ಮ ಕಾಲದ ಅತ್ಯಾಧುನಿಕ ಶಿಕ್ಷಣವನ್ನು ಪಡೆದು ರೂಪುಗೊಂಡವರಾದರೂ,. ಒಂದು ವಿಶಿಷ್ಟವಾದ ಭೌತಿಕ ಸ್ವಾತಂತ್ರ್ಯದ ನೆಲೆಯಲ್ಲಿ ಆಧುನಿಕತೆಯ ಜ್ಞಾನ ಮೀಮಾಂಸೆಯನ್ನು ದಾಟಲು ಯತ್ನಿಸಿದವರು. ಆದರೆ ಭಾರತದ ಸಮಾಜವಾದಿಗಳು ಆಧುನಿಕತೆಯ ಜ್ಞಾನ ಮೀಮಾಂಸೆಯ ನೆಲೆಯಲ್ಲಿಯೇ ರೂಪುಗೊಂಡವರು ಅಥವಾ



ಕಾಂಗ್ರೆಸ್ ಸೋಷಲಿಸ್ಟ್ ಪಕ್ಷದ ಸಭೆಯೊಂದರಲ್ಲಿ ಅರುಣಾ, ಆಸಿಫ್ ಅಲಿ, ಯೂಸುಫ್ ಮೆಹ್ರೋಲಿ, ಜೆಪಿ, ಲೋಹಿಯಾ, ಪಟವರ್ಧನ್, ಮುಂತಾದವರು.

ಬಲೆಯಲ್ಲಿಯೇ ಸಿಲುಕಿಹಾಕಿಕೊಂಡವರು. ಆದ್ದರಿಂದಲೇ, ಈ ಸಮಾಜವಾದಿಗಳಿಗೆ ಗಾಂಧೀಜಿ ಬಹುತೇಕ ಸಂದರ್ಭಗಳಲ್ಲಿ ಪ್ರಗತಿ ವಿರೋಧಿಯಾಗಿ ಅಥವಾ ಅಸಂಬದ್ಧವಾಗಿ ಅಥವಾ ಹಳೆಯ ಕಾಲದವರಾಗಿ ಕಾಣಿಸುತ್ತಿದ್ದರು. ಬಹುಶ: ಆಧುನಿಕತೆಯ ಜ್ಞಾನ ಪರ್ವದಲ್ಲಿ ಹಾಸುಹೊಕ್ಕಂತಿರುವ ವೈಜ್ಞಾನಿಕ ವೈಚಾರಿಕ ಮನೋಭಾವ ಚಾರಿತ್ರಿಕ ದೃಷ್ಟಿ ಮತ್ತು ಅಭಿವೃದ್ಧಿಶೀಲತೆಯ ಹಂಬಲಗಳು ಬಹುತೇಕ ಭಾರತೀಯ ಸಮಾಜವಾದಿಗಳ ಮನೋಧಾರಣೆಯನ್ನು ರೂಪಿಸಿದ್ದರಿಂದ ಗಾಂಧೀಜಿಯವರ ಆಧುನಿಕತೆಯನ್ನು ದಾಟುವ ಆಯಾಮ ಅವರಿಗೆ ಒಪ್ಪಿಗೆಯಾಗಲಿಲ್ಲ ಅಥವಾ ಅರ್ಥವಾಗಲಿಲ್ಲ.

ಬಹುಶ: ಗಾಂಧೀಜಿಯವರ ಚಿಂತನೆಯ ಅನೇಕ ಮಹತ್ವದ ಅಂಶಗಳನ್ನು ಆಧುನಿಕತೆಯ ಪರಿಪ್ರೇಕ್ಷ್ಯದಲ್ಲಿ ಮರುನಿರೂಪಿಸಿ ತಮ್ಮ ಚಿಂತನೆಯ ತೆಕ್ಕೆಗೆ ತೆಗೆದುಕೊಳ್ಳಲು ಪ್ರಯತ್ನಿಸಿದವರಲ್ಲಿ ಲೋಹಿಯಾ ಪ್ರಮುಖರು. ಲೋಹಿಯಾರಿಗೆ ಗಾಂಧೀಜಿಯವರ ಚಿಂತನೆಯ ಬಹುಪ್ರಮುಖ ಅಂಶಗಳು ಭಾರತದ ಸಮಾಜವಾದಿ ಚಿಂತನೆ ಮತ್ತು ಮರುಸಂಘಟನೆಗೆ ಬಹುಮುಖ್ಯವಾಗಿದ್ದವು. ಅವರು ಗಾಂಧೀಜಿಯವರ ಸತ್ಯಾಗ್ರಹದ ಕಲ್ಪನೆಯನ್ನು ಸಮಾಜವಾದಿ ಸಂಘರ್ಷದ ಮೂಲನೆಲೆಯನ್ನಾಗಿ ಗ್ರಹಿಸಿದರು. ಅಂತೆಯೇ, ಅವರ ಸ್ವರಾಜ್ಯ ಹಾಗೂ ಅಧಿಕಾರ ವಿಕೇಂದ್ರೀಕರಣದ ಕಲ್ಪನೆಗಳು ಲೋಹಿಯಾರ ಸಮಾಜವಾದಿ ಚಿಂತನೆಯ ಮುಖ್ಯ ಅಂಶಗಳಾದವು. ಗಾಂಧೀಜಿಯವರ ಚಿಂತನೆಯ ಅನೇಕ ಪ್ರಮುಖ ಅಂಶಗಳನ್ನು ಲೋಹಿಯಾ ತಮ್ಮ ಸಮಾಜವಾದಿ ಪರಿಕಲ್ಪನೆಯ ಒಳಗೆ ತಂದರು ಎನ್ನುವ ಸಂಗತಿ ಅವರು ಗಾಂಧೀಜಿಯವರನ್ನು ಪೂರ್ಣವಾಗಿ ಒಪ್ಪಿಕೊಂಡಿದ್ದರು ಎನ್ನುವುದನ್ನು ಸೂಚಿಸುವುದಿಲ್ಲ. ಗಾಂಧೀಜಿಯವರ ಇತರ ಅನೇಕ ವಿಚಾರಗಳನ್ನು ಲೋಹಿಯಾ ಅನುಮಾನದಿಂದಲೇ ನೋಡುತ್ತಿದ್ದರು. ಎಷ್ಟೇ ಆದರೂ ಲೋಹಿಯಾ ಆಧುನಿಕತೆಯ ಪ್ರತಿಪಾದಕ ಮತ್ತು ಸಮಾಜವಾದಿ ಸಿದ್ಧಾಂತದ ಪ್ರವರ್ತಕ. ಗಾಂಧೀಜಿ ಆಧುನಿಕ ಪರಿಭಾಷೆಗಳಾದ ಸಮಾಜವಾದ ಅಥವಾ ಪ್ರಜಾಪ್ರಭುತ್ವ ಎನ್ನುವ ವಿಚಾರ ಶಬ್ದಗಳ ಚೌಕಟ್ಟಿನಲ್ಲಿ ಯೋಚಿಸುತ್ತಿರಲಿಲ್ಲ. ಅವರಿಗೆ ಏನಿದ್ದರೂ ಸ್ವರಾಜ್ಯ ಮುಖ್ಯ. ತಮ್ಮ ಎಲ್ಲಾ ಚಿಂತನ ಮಂಥನಗಳನ್ನು ಅವರು ಸ್ವರಾಜ್ಯದ ನೆಲೆಯಿಂದಲೇ ಮಾಡುತ್ತಿದ್ದರು. ಅಷ್ಟು ಮಾತ್ರವಲ್ಲದೇ, ಗಾಂಧೀಜಿ ಆಳವಾದ ಧಾರ್ಮಿಕ ನಿಷ್ಠೆಯುಳ್ಳವರು. ಲೋಹಿಯಾ ಅಥವಾ ಅವರಂತಹ ಇತರ ಸಮಾಜವಾದಿಗಳು ಒಂದೇ ನಾಸ್ತಿಕರು ಅಥವಾ ಧರ್ಮನಿರಾಸಕ್ತರೂ ಒಂದೇ. ಹಾಗಾಗಿ ಲೋಹಿಯಾರನ್ನು ಒಳಗೊಂಡಂತೆ ಭಾರತದ ಇತರ ಸಮಾಜವಾದಿಗಳಿಗೆ ಗಾಂಧೀಜಿಯವರ ಆರ್ಥಿಕ, ಸಾಮಾಜಿಕ, ರಾಜಕೀಯ ಹಾಗೂ ಸಾಂಸ್ಕೃತಿಕ ದೃಷ್ಟಿಕೋನದ ಅನೇಕ ಅಂಶಗಳು ಯಥಾವತ್ತಾಗಿ ಒಪ್ಪಿಗೆಯಾಗುವಂತದ್ದಾಗಿರಲಿಲ್ಲ. ಆಶ್ಚರ್ಯದ ಸಂಗತಿಯೆಂದರೆ ಮೊದಲಿಗೆ ಗಾಂಧೀಜಿಯವರ ತಾತ್ವಿಕ ಚಿಂತನೆಯ ಚೌಕಟ್ಟನ್ನು ಆಮೂಲಾಗ್ರವಾಗಿ ನಿರಾಕರಿಸಿದ ಜಯಪ್ರಕಾಶ್ ನಾರಾಯಣ್ ಒಂದು ಕಾಲಾವಧಿಯಲ್ಲಿ ಗಾಂಧಿ ಚಿಂತನೆಯ ಮೂಲಸೆಲೆಗಳಿಗೆ ಮರಳಿದರೆನ್ನುವುದು. ಈ ಎಲ್ಲ ವಿದ್ಯಮಾನಗಳು ಗಾಂಧೀಜಿ ಮತ್ತು ಸಮಾಜವಾದಿಗಳ ನಡುವಿನ ಸಂಬಂಧ–ಸೆಣಸಾಟಗಳು ಭಾರತ ಎನ್ನುವ ಸಂಕೀರ್ಣ ಸಮಾಜವು ವಸಾಹತುಶಾಹಿ ಎನ್ನುವ ವಿಪ್ಲವದ ಎದುರಲ್ಲಿ ತನ್ನನ್ನು ಮರುಸಂಘಟಿಸಿಕೊಳ್ಳುವ ಕಾಲಘಟ್ಟದಲ್ಲಿ ಎದುರಿಸುವ ಸಮಸ್ಯೆಗಳ ಬೇರೆ ಬೇರೆ ಅಂಶಗಳನ್ನು ಪ್ರತಿಬಿಂಬಿಸುತ್ತವೆ ಎನ್ನಬಹುದು. *

---

೧ನೇ ಪುಟದಿಂದ)

ಇದಕ್ಕಿಂತ ಅಥವಾ ಇಷ್ಟೇ ಮುಖ್ಯವಾಗಿ ಮೋದಿ ಪರವಾಗಿ ಹೊಡೆಯಲಾಗುತ್ತಿರುವ ಅಭೂತಪೂರ್ವ ಅಭಿವೃದ್ಧಿಯ ಡಂಗುರದ ನಿಜತ್ವದ ಬಗ್ಗೆ ಈಗ ಗಂಭೀರ ಚರ್ಚೆ ಆಗಬೇಕಿದೆ. ದೊಡ್ಡ ಪ್ರಮಾಣದ ದೇಶಿ ಮತ್ತು ವಿದೇಶೀ ಬಂಡವಾಳದ ಸೆಳೆತ, ಅದರಿಂದ ಜನರ ಕೊಳ್ಳುಬಾಕ ಸಂಸ್ಕೃತಿಯನ್ನು ಬೆಳೆಸುವ ವ್ಯಾಪಾರ ವ್ಯಹಾರೋದ್ಯಮಗಳ ಸ್ಥಾಪನೆ, ಈ ವ್ಯಾಪಾರ ವ್ಯವಹಾರಗಳು ಒತ್ತಾಯಿಸುವ ಮೂಲಭೂತ ಸೌಲಭ್ಯಗಳ ಹೆಸರಿನಲ್ಲಿ ವಿಶಾಲ ರಸ್ತೆಗಳು, ವ್ಯಾಪಾರಿ ಪಾರ್ಕ್‌ಗಳು, ಮಾಲ್‌ಗಳು, ಹೋಟೆಲ್–ಮೋಟೆಲ್–ರೆಸಾರ್ಟುಗಳ ನಿರ್ಮಾಣಕ್ಕೆ ಪ್ರೋತ್ಸಾಹ ಮತ್ತು ಆ ಮೂಲಕ ಉದ್ಯೋಗ ಸೃಷ್ಟಿಯ ಘೋಷಣೆ. ಇಂತಹ ಅಭಿವೃದ್ಧಿಯ ಒಟ್ಟಾರೆ ರಾಷ್ಟ್ರೀಯ ಪರಿಣಾಮಗಳೇನು ಎಂಬುದನ್ನು ವಿವರಿಸಿ ಹೇಳುವ ಅಗತ್ಯವಿಲ್ಲ: ಇದು ದೇಶದ ನಿಸರ್ಗ ಸಂಪತ್ತನ್ನೆಲ್ಲ ಮಾರಿಕೊಂಡು ಸಮಾಜವನ್ನು ನವ ಶ್ರೀಮಂತ ವರ್ಗ ಮತ್ತು ನವ ದರಿದ್ರ ವರ್ಗಗಳನ್ನಾಗಿ ಒಡೆಯುತ್ತಿದೆಯಲ್ಲದೆ, ರಾಷ್ಟ್ರದ ದುಡಿಮೆಯ ಶೀಲ–ಸಂಸ್ಕೃತಿಗಳನ್ನೇ ನಾಶ ಮಾಡುತ್ತಾ ಹಲವು ರೀತಿಯ ಅಶಾಂತಿ ಮತ್ತು ಹಿಂಸಾಚಾರಗಳು ಬೆಳೆಯಲು ಕಾರಣವಾಗಿದೆ.

ಒಮ್ಮೆ ಮೋದಿಯ ಬೆಂಬಲಿಗರ ಮುಖಗಳನ್ನೊಮ್ಮೆ ನೋಡಿ. ಅವರು ಹಿಂದುತ್ವವಾದಿಗಳು ಅಥವಾ ಇಂತಹ ಅಭಿವೃದ್ಧಿಯ ಇನ್ನಷ್ಟು ಫಲಗಳಿಗಾಗಿ ಮೊರೆಯುತ್ತಿರುವ ಹಸಿದ ಹೆಬ್ಬುಲಿಗಳೇ ಆಗಿರುತ್ತಾರೆ. ಅವರನ್ನೊಮ್ಮೆ ಗುಜರಾತ್‌ನ ಮಾನವ ಅಭಿವೃದ್ಧಿ ಸೂಚ್ಯಂಕಗಳ ಪರಿಸ್ಥಿತಿಯೇನು ಎಂದು ಕೇಳಿ. ಸರಾಸರಿ ಒಟ್ಟಾರೆ ಆದಾಯದ ಹೆಚ್ಚಳದ ಬಗ್ಗೆ ಕೊಚ್ಚಿಕೊಳ್ಳಲಾರಂಬಿಸುತ್ತಾರೆಯೇ ಹೊರತು, ಅದರ ನ್ಯಾಯಯುತ ಹಂಚಿಕೆಯನ್ನು ಸಮರ್ಥಿಸುವಂತಹ ಹೆಣ್ಣು ಮಕ್ಕಳೂ ಸೇರಿದಂತೆ ದುರ್ಬಲರಿಗೆ ಪೌಷ್ಠಿಕ ಆಹಾರದ ಪೂರೈಕೆ, ಶೈಕ್ಷಣಿಕ, ಆರೋಗ್ಯ ಇತ್ಯಾದಿ ಸೌಲಭ್ಯಗಳ ಲಭ್ಯತೆಯ ಬಗ್ಗೆ ಮಾತಾಡುವುದಿಲ್ಲ. ಏಕೆಂದರೆ ಅಂತಹ ಅಭಿವೃದ್ಧಿ ಸೂಚ್ಯಂಕಗಳು ಈ ರಾಜ್ಯದಲ್ಲಿ ಇತರ ಹಲವು ರಾಜ್ಯಗಳಗಿಂತ ಬಹು ಹಿಂದಿವೆ. ಹಾಗಾಗಿ, ಇಲ್ಲಿ ಕೇಳಬೇಕಾದ ಒಟ್ಟು ಪ್ರಶ್ನೆ: ಯಾತಕ್ಕಾಗಿ ಮತ್ತು ಯಾರಿಗಾಗಿ ಈ ಅಭೂತಪೂರ್ವ 'ಅಭಿವೃದ್ಧಿ'?

ಆದರೂ ಮೋದಿಯನ್ನು ಜನವೇಕೆ ಸತತವಾಗಿ ಮೂರನೇ ಬಾರಿ ಮುಖ್ಯಮಂತ್ರಿಯಾಗಿ ಆಯ್ಕೆ ಮಾಡಿದ್ದಾರೆ? ಕಾಂಗ್ರೆಸ್ಸಿನ ದಿಗ್ವಿಜಯ್ ಸಿಂಗ್ ಇದಕ್ಕೆ ಸೂಕ್ತ ಉತ್ತರ ಕೊಟ್ಟಿದ್ದಾರೆ. ಬಿಹಾರದ ಜನ ಲಾಲೂರನ್ನೂ ಸತತವಾಗಿ ಮೂರು ಬಾರಿ ಆಯ್ಕೆ ಮಾಡಿದ್ದರು! ಹಾಗೇ,ಇದೇ ತರ್ಕ ಸರಿಯಿದ್ದರೆ ಒರಿಸ್ಸಾದಲ್ಲಿ ಬಿಜೆಪಿಯನ್ನು ದೂರವಿಟ್ಟ ಮೇಲೆ ನವೀನ್ ಪಟ್ನಾಯಕ್‌ರೂ ಸತತವಾಗಿ ಮೂರನೇ ಬಾರಿ ಮುಖ್ಯಮಂತ್ರಿಯಾಗಿದ್ದಾರೆ! ಪ್ರತಿ ರಾಜ್ಯದ ಜನರ ಆಯ್ಕೆಯೂ ಆಯಾ ರಾಜ್ಯದ ಒಟ್ಟಾರೆ ಹಿನ್ನೆಲೆ ಮತ್ತು ಆದ್ಯತೆಗಳ ಮೇಲೆ ನಡೆಯುತ್ತದೆ. ಹಾಗೆ ನೋಡಿದರೆ ಮೋದಿ ಆಗಮನಕ್ಕಿಂತ ಮುಂಚಿನಿಂದಲೂ ಗುಜರಾತ್ ಈ ಮಾದರಿಯ ಅಭಿವೃದ್ಧಿಯಲ್ಲಿ ಮುಂದೆಯೇ ಇತ್ತು. ಹಾಗೇ ಮೋದಿಯನ್ನು ಗುಜರಾತ್‌ನ ಜನತೆ ಒಮ್ಮತದಿಂದೇನೂ ಆಯ್ಕೆ ಮಾಡಿಲ್ಲ. ಪ್ರತಿ ಚುನಾವಣೆಯಲ್ಲೂ ರಾಜ್ಯದ ಶೇ. ೪೫ಕ್ಕಿಂತಲೂ ಹೆಚ್ಚು ಜನ ಮೋದಿ ವಿರುದ್ಧ ಮತ ಹಾಕಿದ್ದಾರೆ. ಇದೇನೂ ಸಣ್ಣ ಸಂಖ್ಯೆಯಲ್ಲ.

ಹಾಗಾಗಿ ಈ ಎಲ್ಲ ನೆಲೆಗಳಲ್ಲಿ ಮೋದಿಯ ನಿರಂಕುಶ ಆಡಳಿತ ಶೈಲಿ ಹಾಗೂ ಅಭಿವೃದ್ಧಿಯ ಮಾದರಿಯ ಅಪಾಯಗಳನ್ನು ಪ್ರಜಾಸತ್ತಾತ್ಮಕ ಶಕ್ತಿಗಳು ಗಂಭೀರವಾಗಿ ವಿಶ್ಲೇಷಿಸಿ ಜನತೆಯ ಮುಂದೆ ಇಡಬೇಕಿದೆ. ಈ ಕೆಲಸವನ್ನು ಇದೇ ಮಾದರಿಯ ಅಭಿವೃದ್ಧಿಗೆ ನಾಂದಿ ಹಾಡಿ ಈಗ ಚುನಾವಣಾ ಉದ್ದೇಶಗಳಿಗಾಗಿ ಮಿಸಳಬಾಜಿ ರಾಜಕಾರಣ ಮಾಡುತ್ತಾ ಎಲ್ಲ ವಿಶ್ವಾಸಾರ್ಹತೆಯನ್ನೂ ಕಳೆದುಕೊಂಡಿರುವ ಕಾಂಗ್ರೆಸ್ಸಿಗೇ ಬಿಟ್ಟಷ್ಟೂ ಮೋದಿಯ ಯಶಸ್ಸಿನ ಸಾಧ್ಯತೆ ಹೆಚ್ಚುತ್ತಾ ಹೋಗಲಿದೆ. ಹಾಗಾಗಿ ರಾಷ್ಟ್ರಕ್ಕೆ ಮೋದಿ ಮತ್ತು ಕಾಂಗ್ರೆಸ್‌ಗೆ ಹೊರತಾದ ಬೇರೆ ಆಯ್ಕೆಯೂ ಸಾಧ್ಯವಿದೆ ಎಂಬ ನಂಬಿಕೆಯಲ್ಲಿ ಅದನ್ನು ಆಗು ಮಾಡುವ ರೀತಿಯ ರಾಜಕಾರಣವನ್ನು ರಾಷ್ಟ್ರದ ಪ್ರಜಾಸತ್ತಾತ್ಮಕ ಶಕ್ತಿಗಳು ರೂಪಿಸಿ ಮಾಡಬೇಕಿದೆ

ಈ ಹಿನ್ನೆಲೆಯಲ್ಲಿ ನಮ್ಮ ಅನಂತಮೂರ್ತಿಯವರು ದಿನನಿತ್ಯ ಮಾಧ್ಯಮಗಳಲ್ಲಿ ಪ್ರತ್ಯಕ್ಷವಾಗಿ ನಡೆಸುತ್ತಿರುವ ಬೌದ್ಧಿಕ ಗಲಾಟೆ ಜಿಗುಪ್ಸೆ ಹುಟ್ಟಿಸುವಂತಿದೆ. ಈ ಮೂಲಕ ಮೋದಿಯನ್ನು ಕೇಳಬೇಕಾದ ಪ್ರಶ್ನೆಗಳ ಚೂಪನ್ನು ಅವರು ಕಳೆಯುತ್ತಿದ್ದಾರೆ. ಆರೋಗ್ಯ ಕೈಕೊಡುತ್ತಿರುವ ಈ ಹಿರಿಯ ವಯಸ್ಸಿನಲ್ಲಿ ಉಗ್ರ ಟೀಕೆಯ ಮಾತುಗಳನ್ನು ಸಹಿಸಲಾರೆ ಎಂದು ಹೇಳಿಕೊಳ್ಳುತ್ತಾ ಆತಂಕ ಹುಟ್ಟಿಸುತ್ತಿರುವ ಅನಂತಮೂರ್ತಿಯವರು ತಮ್ಮ ಸುದ್ದಿಶೂರತ್ವವನ್ನು ಈಗಲಾದರೂ ಸ್ವಲ್ಪ ನಿಯಂತ್ರಿಸಿಕೊಳ್ಳಬೇಕಿದೆ.

**–ಸಂಪಾದಕ**

**ಒಂದು ಕರಪತ್ರ**

## ಬನ್ನಿ, ವಾರದಲ್ಲಿ ಒಂದು ದಿನ ಇಂಧನ ವಾಹನ ತ್ಯಜಿಸೋಣ! ದೇಶ ಉಳಿಸೋಣ!!

**ದೇಶ** ಇಂದು ಹಿಂದೆಂದೂ ಇಲ್ಲದಷ್ಟು ತೀವ್ರಗತಿಯ ಬೆಲೆ ಏರಿಕೆಯಿಂದ ತತ್ತರಿಸುತ್ತಿದೆ. ಜನ ಸಾಮಾನ್ಯರ ಬದುಕು ಅಯೋಮಯವಾಗಿದೆ. ದಿನೇ ದಿನೇ ಪೆಟ್ರೋಲ್, ಡೀಸಲ್ ಮುಂತಾದ ಇಂಧನಗಳ ಬೆಲೆಗಳು ಏರುತ್ತಿವೆ. ಇದಕ್ಕೆಲ್ಲ ನಾವು ಸರ್ಕಾರ, ರಾಜಕಾರಣಿಗಳು ಮತ್ತು ವ್ಯಾಪಾರಿಗಳನ್ನು ದೂಷಿಸುತ್ತಾ, ಇದರಲ್ಲಿ ನಮ್ಮ ಜವಾಬ್ದಾರಿ ಏನೂ ಇಲ್ಲವೆಂಬ ಮುಗ್ಧತೆಯಲ್ಲಿ ಓಡಾಡುತ್ತಿದ್ದೇವೆ. ಆದರೆ ಈ ಮುಗ್ಧತೆ ಎಷ್ಟು ನಿಜ ಹಾಗೂ ಸರಿ ಎಂದು ನಾವು ಎಂದಾದರೂ ಯೋಚಿಸಿದ್ದೇವೆಯೇ?

ನಿಜ, ಇಂದಿನ ಬೆಲೆ ಏರಿಕೆಯ ಹಿಂದೆ, ಸರ್ಕಾರದ ತಪ್ಪು ಆರ್ಥಿಕ ನೀತಿ, ರಾಜಕಾರಣಿಗಳ ಭ್ರಷ್ಟಾಚಾರ ಮತ್ತು ವ್ಯಾಪಾರಿಗಳ ಲಾಭಕೋರತನಗಳಿವೆ. ಇದನ್ನು ಸರ್ಕಾರಗಳನ್ನು ಬದಲಾವಣೆ ಮಾಡುವ ಮೂಲಕ ಸರಿಪಡಿಸಬಹುದು ಎಂಬುದು ಸುಳ್ಳು ಎನ್ನುವುದು ನಮ್ಮ ಹಿಂದಿನ ಅನುಭವದಿಂದ ಗೊತ್ತಾಗಿದೆ. ಹಾಗಿದ್ದರೆ ಪ್ರಸಕ್ತ ಪರಿಸ್ಥಿತಿಯಲ್ಲಿ ನಾವು ಇನ್ನೇನನ್ನು ಮಾಡಬಹುದು? ಮೊದಲಾಗಿ, ನಮ್ಮ ಎಲ್ಲ ಕಷ್ಟಗಳಿಗೆ ನಮ್ಮನ್ನು ಬಿಟ್ಟು ಇತರರನ್ನು ಜವಾಬ್ದಾರರನ್ನಾಗಿ ಮಾಡುವುದು ನಮ್ಮ ರಾಷ್ಟ್ರೀಯ ಜಾಯಮಾನವಾಗಿ ಹೋಗಿದೆ. ಹಾಗಾಗಿ ನಾವಿಂದು ನಮ್ಮ ಈ ಮನೋಭಾವವನ್ನು ಬದಲಿಸಿಕೊಂಡು ಯೋಚಿಸಬೇಕಿದೆ.

ಇದು ಪ್ರಜಾಪ್ರಭುತ್ವ. ಆದರೆ ಪ್ರಜಾಪ್ರಭುತ್ವದಲ್ಲಿ ಚುನಾವಣೆಗಳಲ್ಲಿ ಮತ ಚಲಾಯಿಸುವುದರೊಂದಿಗೆ ಪ್ರಜೆಗಳ ಜವಾಬ್ದಾರಿ ಮುಗಿಯುವುದಿಲ್ಲ. ಆಡಳಿತದಲ್ಲಿ ಅದರ ನಿರಂತರ ಸಕ್ರಿಯ ಭಾಗವಹಿಸುವಿಕೆ ಇರಬೇಕು. ಸರ್ಕಾರದ ದುರಾಡಳಿತದ ವಿರುದ್ಧ ಪ್ರತಿಭಟಿಸುವುದು ಇದರ ಒಂದು ಮುಖ. ಹಾಗೇ ನಮ್ಮ ಈ ಕಷ್ಟಗಳ ಪರಿಹಾರದಲ್ಲಿ ನಮ್ಮ ಪಾತ್ರವೇನಿರಬಹುದು ಎಂದು ಯೋಚಿಸಿ ಸಂಘಟನೆಗೊಂಡು ಕಾರ್ಯಪ್ರವೃತ್ತರಾಗುವುದು ಇನ್ನೊಂದು ಮುಖ. ಅದು ಹೆಚ್ಚು ರಚನಾತ್ಮಕವಾದ ಮುಖ. ಉದಾಹರಣೆಗೆ ಇಂದಿನ ಅತಿಯಾದ ಬೆಲೆ ಏರಿಕೆಗೆ ಸರ್ಕಾರ ಮತ್ತು ಅದರ ಆಡಳಿತ ನೀತಿಗಳು ಹೇಗೆ ಕಾರಣವೋ ಹಾಗೇ ನಮ್ಮ ಬದುಕಿನ ರೀತಿ ನೀತಿಗಳೂ ಕಾರಣವಾಗಿವೆ ಎಂಬುದನ್ನು ನಾವು ಅರಿಯುವ ಪ್ರಯತ್ನ ಮಾಡಬೇಕು.

ಅಂತಹ ಪ್ರಯತ್ನ ಮಾಡಿದಾಗ ನಮಗೆ ಗೊತ್ತಾಗುವ ಸತ್ಯವೆಂದರೆ: ಇಂದಿನ(ಮತ್ತು ಇದು ಇಂದಿಗೇ ಮುಕ್ತಾಯವಾಗದೆ ಮುಂದೆಯೂ ಮುಂದುವರೆಯುವ) ದಿನ ನಿತ್ಯದ ಬಳಕೆಯ ವಸ್ತುಗಳ ಅತಿಯಾದ ಬೆಲೆ ಏರಿಕೆಯ ಹಿಂದೆ ನಮ್ಮ ದಿನ ನಿತ್ಯದ ಇಂಧನ(ಪೆಟ್ರೋಲ್, ಡೀಸಲ್, ನೈಸರ್ಗಿಕ ಅನಿಲ ಇತ್ಯಾದಿ) ಬೇಡಿಕೆಗಳ ಅತಿಯಾದ ಏರಿಕೆ ಇದೆ ಎಂಬುದು. ನಮ್ಮ ಬದುಕಿನ ಎಲ್ಲ ಚಟುವಟಿಕೆಗಳೂ, ಆಧುನಿಕತೆಯ ಹೆಸರಿನಲ್ಲಿ, ಸುಖಾನುಕೂಲಗಳ ಹೆಸರಿನಲ್ಲಿ, ಅಗತ್ಯವಿರಲಿ, ಇಲ್ಲದಿರಲಿ ಇಂಧನ ಆಧಾರಿತವಾಗಿದೆ. ಅದು ನಮ್ಮ ದೊಡ್ಡ ಅಥವಾ ಸಣ್ಣ ಕೈಗಾರಿಕೆ ಇರಬಹುದು, ವ್ಯಾಪಾರ–ವ್ಯವಹಾರವಿರಬಹುದು, ಸಂಚಾರ–ಸಂಪರ್ಕವಿರಬಹುದು ಅಥವಾ ಮನೆಯೊಳಗಿನ ನಮ್ಮ ಬದುಕು ಇರಬಹುದು. ಈ ಎಲ್ಲ ಚಟುವಟಿಕೆಗಳಿಗಾಗಿ ದಿನಕ್ಕೆ ಸುಮಾರು ಒಂದೂವರೆ ದಶಲಕ್ಷ ಕಡಾಯಿಗಳಷ್ಟು ಎಣ್ಣೆ ಕುಡಿಯುವ ಈ ದೇಶ, ಇದರ ಶೇಕಡಾ ಎಂಭತ್ತೆರಡು ಭಾಗವನ್ನು ಆಮದು ಮಾಡಿಕೊಳ್ಳುತ್ತಿದೆ. ಇದರ ಪರಿಣಾಮವಾಗಿ, ಒಂದು ಕಡೆ ಅಂತಾರಾಷ್ಟ್ರೀಯ ಮಾರುಕಟ್ಟೆಯಲ್ಲಿ ಎಣ್ಣೆಯ ಬೆಲೆ ನಿರಂತರವಾಗಿ ಏರುತ್ತಿರುವುದರಿಂದಾಗಿ ಮತ್ತು ಇನ್ನೊಂದೆಡೆ ದೇಶದೊಳಗಿನ ನಮ್ಮ ಇಂಧನ ಬೇಡಿಕೆಯೂ ದಿನ ನಿತ್ಯ ಹೆಚ್ಚುತ್ತಿರುವುದರಿಂದಾಗಿ, ನಮ್ಮ ಅಂತಾರಾಷ್ಟ್ರೀಯ ವ್ಯಾಪಾರ ಕೊರತೆಯ ಅರ್ಧಕ್ಕೂ ಹೆಚ್ಚು ಭಾಗಕ್ಕೆ ನಮ್ಮ ಇಂಧನ ಆಮದೇ ಕಾರಣವಾಗಿದೆ. ಇದರಿಂದಾಗಿ ನಮ್ಮ ರಾಷ್ಟ್ರದ ಆಯವ್ಯಯದ ಸಮತೋಲನ ತಪ್ಪುತ್ತಿದೆ. ಅದು ಇಂದು ಅಪಾಯದ ಮಟ್ಟವನ್ನು ಮುಟ್ಟಿದೆ. ಇದರ ಪರಿಣಾಮವಾಗಿಯೇ, ರೂಪಾಯಿ ಅಂತಾರಾಷ್ಟ್ರೀಯವಾಗಿ; ಹಾಗಾಗಿ ದೇಶೀಯವಾಗಿಯೂ ಬೆಲೆ ಕಳೆದುಕೊಂಡು ದಿನ ನಿತ್ಯದ ಅಗತ್ಯ ವಸ್ತುಗಳ ಬೆಲೆಗಳು ಮಿತಿ ಮೀರಿ ಏರುತ್ತಿವೆ.

ಹಾಗಾಗಿ ಈ ವಿಷಯದಲ್ಲಿ ಜವಾಬ್ದಾರಿಯುತ ಪ್ರಜೆಗಳಾಗಿ ನಾವು ಸರ್ಕಾರಕ್ಕೆ ಪಾಠ ಹೇಳಬೇಕಿದೆ. ಆ ಮೂಲಕ ನಮ್ಮ ಬದುಕಿಗೂ ಸ್ವಲ್ಪಮಟ್ಟಿನ ನೆಮ್ಮದಿ ತಂದುಕೊಳ್ಳಬಹುದಾಗಿದೆ. ಅದಕ್ಕಾಗಿ ನಾವು ಬಳಸಬಹುದಾದ ಅತಿ ಪರಿಣಾಮಕಾರಿ ಮಾರ್ಗವೆಂದರೆ ನಮ್ಮ ಬದುಕಿನ ಇಂಧನ ಅಗತ್ಯಗಳನ್ನು ಸಾಂಕೇತಿಕವಾಗಿ ಕಡಿಮೆ ಮಾಡಿಕೊಳ್ಳುವ ಒಂದು ಕಾರ್ಯಕ್ರಮವನ್ನು ಹಾಕಿಕೊಳ್ಳುವುದು. ಇದರ ಭಾಗವಾಗಿ ನಾವು ನಮ್ಮ ಊರಿನಲ್ಲಿ ವಾರದಲ್ಲಿ ಒಂದು ದಿನ ಯಾವುದೇ ಇಂಧನ ಚಾಲಿತ ವಾಹನಗಳನ್ನು ವೈಯುಕ್ತಿಕ ಉದ್ದೇಶಕ್ಕಾಗಿ ಬಳಸದಿರಲು ಸ್ವಯಂಪ್ರೇರಣೆಯಿಂದ ತೀರ್ಮಾನ ಕೈಗೊಳ್ಳುವುದು. ಆ ತೀರ್ಮಾನವನ್ನು ಒಂದು ಸಾಮೂಹಿಕ ಕಾರ್ಯಕ್ರಮವನ್ನಾಗಿ ರೂಪಿಸಿ ಜಾರಿಗೆ ತರುವುದು. ಇದು ನಮ್ಮ ಇಡೀ ಬದುಕಿನ ವ್ಯವಸ್ಥೆಯೇ ಇಂಧನ ಆಧಾರಿತವಾಗಿ, ಇಂದು ಆರ್ಥಿಕ ಸಂಕಷ್ಟಗಳನ್ನು ಮಾತ್ರವಲ್ಲ, ಅಭಿವೃದ್ಧಿ ನಿರಾಶ್ರಿತರ ಮತ್ತು ಪರಿಸರಕ್ಕೆ ಸಂಬಂಧಪಟ್ಟ ಸಮಸ್ಯೆಗಳನ್ನೂ ಸೃಷ್ಟಿಸುತ್ತಿದೆ.

**ಹಾಗಾಗಿ ವಾರದಲ್ಲಿ ಒಂದು ದಿನವಾದರೂ ನಮ್ಮ ಇಂಧನ ಚಾಲಿತ ವಾಹನಗಳಿಗೆ ವಿಶ್ರಾಂತಿ ಕೊಡೋಣ. ನಮ್ಮ ಕಾಲುಗಳನ್ನು ಬಳಸೋಣ. ಸೈಕಲ್ ಸವಾರಿ ಮಾಡೋಣ. ವಾಹನಗಳ ದಟ್ಟಣೆ ಇಲ್ಲದೆ ನಮ್ಮ ಊರು ಹೇಗೆ ಶುದ್ಧ ಗಾಳಿಯಲ್ಲಿ, ಅತಿಯಾದ ಶಬ್ದಮಾಲಿನ್ಯವಿಲ್ಲದ ಪ್ರಶಾಂತತೆಯಲ್ಲಿ ಹೇಗೆ ಹೊಸ ರೂಪದಲ್ಲಿ, ಲವಲವಿಕೆಯಲ್ಲಿ ಕಾಣುತ್ತದೆ ನೋಡೋಣ. ಇದನ್ನು ಯಶಸ್ವಿಯಾಗಿ ಮಾಡಿ ನೋಡಿದ ಮೇಲೇ ಅದರ ಇತರ ಲೌಕಿಕ ಮತ್ತು ಅಧ್ಯಾತ್ಮಿಕ ಪ್ರಯೋಜನ–ಆನಂದಗಳು ನಮಗೆ ಗೊತ್ತಾಗುವುದು.**

**ಬನ್ನಿ! ಸಂಕಲ್ಪ ಮಾಡಿ! ಒಮ್ಮೆ ನಮ್ಮ ಊರಲ್ಲಿ ಇದು ಯಶಸ್ವಿಯಾದರೆ ಅದು ಹೂವಿನ ಪರಿಮಳದಂತೆ ಇತರ ಊರುಗಳಿಗೂ ಹಬ್ಬುವುದು. ಅದೊಂದು ಆಂದೋಲನವಾಗಿ ನಮ್ಮ ಇಂಧನ ಪ್ರಧಾನ ವ್ಯವಸ್ಥೆಯನ್ನು ಸಾಮಾನ್ಯ ಮನುಷ್ಯನ ನೆಮ್ಮದಿಯ ಬದುಕಿಗಾಗಿ ಪುನರ್ರೂಪಿಸುವ ಒಂದು ರಾಜಕೀಯ ಪ್ರಯೋಗವಾಗಿಯೂ ಬೆಳೆಯಬಲ್ಲುದು.**

ಬನ್ನಿ! ಹೊಸ ಬದುಕಿನ ಮಾದರಿಯ ಸ್ಥಾಪನೆಗೆ ನಾಂದಿ ಹಾಡೋಣ! ಇಡೀ ಜಗತ್ತು ಇಂಧನ ಚಾಲಿತವಾಗುತ್ತಿರುವುದನ್ನು ಕಂಡು ಗಾಬರಿಯಿಂದ ಸುಮಾರು ಒಂದು ಶತಮಾನದ ಹಿಂದೆಯೇ 'ಈ ಭೂಮಿ ಎಲ್ಲ ಮನುಷ್ಯರ ಅಗತ್ಯಗಳನ್ನು ಪೂರೈಸಬಲ್ಲುದೇ ಹೊರತು ಅವನ ಎಲ್ಲ ಆಸೆಗಳನ್ನಲ್ಲ' ಎಂಬ ಪ್ರವಾದಿತ್ವದ ಮಾತುಗಳಿಂದ ನಮ್ಮ ಆಸೆಬುರುಕತನದ ವಿರುದ್ಧ ಎಚ್ಚರಿಕೆ ನೀಡಿದ ಮಹಾತ್ಮಗಾಂಧಿಯವರ ಜನ್ಮದಿನವಾದ ಇದೇ ಅಕ್ಟೋಬರ್ ೨ರಂದು ಈ ಸಂಕಲ್ಪ ಮಾಡೋಣ!

**ಬನ್ನಿ, ನಡೆದು ಬನ್ನಿ! ಸೈಕಲ್ ಮೇಲೆ ಬನ್ನಿ!**

**ಸಮಾಜವಾದಿ ಅಧ್ಯಯನ ಕೇಂದ್ರ, ಚಾಮರಾಜನಗರ**

**ಸಂಪರ್ಕ ದೂರವಾಣಿ: ೯೦೬೦೪೧೮೮೪೫**

## ಸಾಹಿತ್ಯ–ಸಂಸ್ಕೃತಿ–ಸಿನಿಮಾ ಇತ್ಯಾದಿ

# 'ಅಣ್ಣ ತಂಗಿ' ಎಂಬ ಚಿತ್ರವೂ 'ಘುಂಥಿ' ಎಂಬ ಕಾದಂಬರಿಯೂ




ಭಾರತೀಯ ಚಿತ್ರರಂಗಕ್ಕೆ ಈಗ ನೂರು ವರ್ಷಗಳಂತೆ. ಹಾಗೇ ಕನ್ನಡ ಚಿತ್ರರಂಗಕ್ಕೆ ಎಂಭತ್ತು ವರ್ಷಗಳಂತೆ. ಇದರ ಅಂಗವಾಗಿ ಮೊನ್ನೆ ಚೆನ್ನೈನಲ್ಲಿ ದಕ್ಷಿಣ ಭಾರತೀಯ ಚಿತ್ರರಂಗದ ಧುರೀಣರು ಏರ್ಪಡಿಸಿದ್ದ ಸಮಾರಂಭಕ್ಕೆ ಕನ್ನಡದ ಕೆಲವು ಕಲಾವಿದರು–ತಂತ್ರಜ್ಞರೂ ಹೋಗಿ ಕುಣಿದು ಕುಪ್ಪಳಿಸಿ, ಸನ್ಮಾನ ಮಾಡಿಸಿಕೊಂಡು ಬಂದಿದ್ದಾರೆ. ಬಹಳ ಜನ ಹೋಗಲಿಲ್ಲವಂತೆ. ಈ ಸಂದರ್ಭದಲ್ಲಿ ವಿಷ್ಣುವರ್ಧನ್ ಅವರ ನೆನಪಿನ ಚೀಟಿ ಬಿಡುಗಡೆಯಾಗುತ್ತಿರುವುದರ ಹಿಂದಿನ ರಾಜಕಾರಣ ಈ ಎಲ್ಲವನ್ನೂ ಹೇಳುವಂತಿದೆ. ವಿಷ್ಣುವರ್ಧನ್ ಸೀಮಿತ ಪ್ರತಿಭೆಯ ಓರ್ವ ಸಾಧಾರಣ ನಟ. ಆತ ಯಾವುದೇ ಕಾರಣಕ್ಕೂ ಇಡೀ ಕನ್ನಡ ಚಿತ್ರರಂಗವನ್ನು ಪ್ರತಿನಿಧಿಸಲಾರ.

ಅದೇನೇ ಇರಲಿ, ಕನ್ನಡ ಚಿತ್ರರಂಗದ ಈ ಐತಿಹಾಸಿಕ ಸಂದರ್ಭದಲ್ಲಿ ನೆನಪಿಸಿಕೊಳ್ಳಬೇಕಾದ ಹಲವು ಹಿರಿಯರಿದ್ದಾರೆ. ಬರೀ ರಾಜ್ ಕುಮಾರ್–ಅವರದು ದೊಡ್ಡ ಕೊಡುಗೆ ಇದೆಯಾದರೂ–ಈ ಚಿತ್ರರಂಗವನ್ನು ಕಟ್ಟಿಬೆಳೆಸಿಲ್ಲ. ಇಂದಿನ ಹಲವರ ಜೊತೆ ಹಿಂದಿನ ಎಚ್.ಎಲ್.ಎನ್ ಸಿಂಹ, ಡಿ. ಶಂಕರ್‌ಸಿಂಗ್, ಗುಬ್ಬಿ ವೀರಣ್ಣ, ಪಂತಲು, ಬಿ.ಎಸ್. ರಂಗಾ, ಕು.ರಾ. ಸೀತಾರಾಮಶಾಸ್ತ್ರಿ, ಆರ್. ನಾಗೇಂದ್ರರಾವ್, ಹುಣಸೂರು ಕೃಷ್ಣಮೂರ್ತಿ, ಪುಟ್ಟಣ್ಣ, ಎಂ.ಆರ್. ವಿಟ್ಠಲ್, ಟಿ.ವಿ. ಸಿಂಗ ಠಾಕೂರ್, ಎನ್ ಲಕ್ಷ್ಮೀನಾರಯಣ್, ವಾದಿರಾಜ್–ಜವಾಹರ್, ಎಂ.ವಿ. ರಾಜಮ್ಮ, ಫಂಡರೀಬಾಯಿ ಮುಂತಾದವರ ವಿಶಿಷ್ಟ ಕೊಡುಗೆಗಳೂ ಇವೆ. ಅಷ್ಟೇ ಅಲ್ಲ, ನಮ್ಮ ಚಿತ್ರರಂಗ ಮತ್ತು ಅದರ ಅಭಿಮಾನಿಗಳು ದೊಡ್ಡ ಹೆಸರುಗಳ ಮರೆಯಲ್ಲಿ ಕಾಣೆಯಾಗಿ ಹೋಗಿರುವ ಅನೇಕ ಸಣ್ಣಪುಟ್ಟ ಹೆಸರುಗಳನ್ನೂ ಈ ಸಂದರ್ಭದಲ್ಲಿ ಕೃತಜ್ಞತೆಯಿಂದ ನೆನೆಯಬೇಕಿದೆ. ಏಕೆಂದರೆ ಅವರು ದೊಡ್ಡ ಹೆಸರುಗಳ ಜೊತೆಯಲ್ಲಿ ಸೇರಿದ್ದರಿಂದಲೇ, ಅವರ ಪ್ರತಿಭೆ ಮತ್ತು ವಿಶಿಷ್ಟತೆಗಳೊಂದಿಗೆ ಕನ್ನಡ ಚಿತ್ರರಂಗ ತನ್ನ ಶೈಶವಾವಸ್ಥೆಯನ್ನು ದಾಟಿ ಒಂದು ಯಶಸ್ವಿ ಉದ್ಯಮವಾಗಿ ಬೆಳೆದದ್ದು. ಉದಾ: ರಮಾದೇವಿ, ಜಯಶ್ರೀ, ಕುಪ್ಪುರಾಜ್, ರಾಮಚಂದ್ರ ಶಾಸ್ತ್ರಿ, ಹನುಮಂತಾಚಾರ್, ರಾಘವೇಂದ್ರರಾವ್, ಗಣಪತಿಭಟ್ ಮುಂತಾದವರನ್ನು ಇಂದು ನೆನೆಯುವವರೇ ಇಲ್ಲವಾಗಿದ್ದಾರೆ. ಕನ್ನಡ ಚಿತ್ರರಂಗದ ಹಳೆಯ ಮೂರು ತಲೆಮಾರುಗಳ ಬಹುಶಃ ಏಕೈಕ ಕೊಂಡಿಯಾಗಿ ಉಳಿದಿರುವ ಎಂ.ಎನ್. ಲಕ್ಷ್ಮೀದೇವಿಯವರನ್ನು ಈ ಸಂದರ್ಭದಲ್ಲಿ ಗುರುತಿಸಿ ಗೌರವಿಸುವ ವ್ಯವಧಾನ ಯಾರಿಗೂ ಇಲ್ಲವಾಗಿದೆ.

ಈ ಮಧ್ಯೆ ಮೊನ್ನೆ ಆಕಸ್ಮಿಕವಾಗಿ ನೋಡಿದ ಹಳೆಯ ಕನ್ನಡ ಚಿತ್ರವೊಂದರ ಬಗ್ಗೆ ಇಲ್ಲಿ ಬರೆಯುವುದು ಉಚಿತವಾದೀತು. ನಾನು ನೋಡಿದ ಆ ಚಿತ್ರ 'ಅಣ್ಣ ತಂಗಿ'. ಸುಮಾರು ಐವತ್ತು ವರ್ಷಗಳ ಹಿಂದೆ ನನ್ನ ಬಾಲ್ಯದಲ್ಲಿ ಹಳ್ಳಿಯ ಗುಡಾರವೊಂದರಲ್ಲಿ ನೋಡಿದ್ದ ಈ ಚಿತ್ರ ಇಂದೂ ನನ್ನನ್ನು ಎಷ್ಟು ಭಾವಾವಿಷ್ಟನ್ನಾಗಿ ಮಾಡಿತೆಂದರೆ, ಅದನ್ನು ಮತ್ತೆ ಮತ್ತೆ ನೋಡುವ ಆಸೆ ನನ್ನಲ್ಲಿ ಉಂಟಾಗುತ್ತಿದೆ! ಈಗಲೂ ಉಳಿದಿರುವ ಅದರ ಜೀವಂತಿಕೆಯಿಂದಾಗಿ. ಈ ಚಿತ್ರ ಸ್ವಾತಂತ್ರ್ಯ ಬಂದ ದಿನಗಳಲ್ಲಿ ರಾಷ್ಟ್ರ ಮತ್ತು ಸಮಾಜವನ್ನು ಹೊಸ ಅರಿವು ಮತ್ತು ಬದ್ಧತೆಗಳಿಂದ ಕಟ್ಟಬೇಕೆಂಬ ಉತ್ಸಾಹ ಯಾವ ಯಾವ ನೆಲೆಗಳಲ್ಲಿ ಮತ್ತು ರೂಪಗಳಲ್ಲಿ ಕ್ರಿಯಾಶೀಲವಾಗಿತ್ತು ಎಂಬುದನ್ನು ಎಷ್ಟು ಸರಳವಾಗಿ, ಸುಂದರವಾಗಿ ಹಾಗೂ ಲವಲವಿಕೆಯೊಂದಿಗೆ ಹೇಳುತ್ತದೆಂದರೆ, ಆ ಹೇಳುವಿಕೆಯ ಸಹಜ ಮುಗ್ಧತೆಯಲ್ಲಿಯೇ ಚಿತ್ರ ತನ್ನ ಕಲಾತ್ಮಕತೆಯ ಯಶಸ್ಸನ್ನೂ ಕಂಡುಕೊಳ್ಳುತ್ತದೆ. ಹೊಸ ಅಲೆಯ ಕಲಾತ್ಮಕ ಚಿತ್ರಗಳ ಬೌದ್ಧಿಕತೆಯ ಭಾರಗಳು ಇಲ್ಲಿಲ್ಲ. ಕುರಾಸೀ ಅವರ ಅಪ್ಪಟ ಗ್ರಾಮೀಣ ಸೊಗಡಿನ ಚಿತ್ರಕಥೆ–ಸಂಭಾಷಣೆ–ಹಾಡುಗಳು ಮತ್ತು ನಿರ್ದೇಶನ, ರಾಜ್‌ಕುಮಾರ್–ಬಿ.ಸರೋಜಾದೇವಿ–ಈಶ್ವರಪ್ಪ–ಬಾಲಕೃಷ್ಣ ನರಸಿಂಹರಾಜು–ಬಿ. ಜಯಮ್ಮ–ಎಂ.ಎನ್ ಲಕ್ಷ್ಮೀದೇವಿಯವರ ಸಹಜ ಅಭಿನಯ, ಜಿ.ಕೆ. ವೆಂಕಟೇಶ್ ಅವರು ಜನಪದ ಲಯಗಳಲ್ಲಿ ಸಂಯೋಜಿಸಿರುವ ಮಧುರವಾದ ಹಾಡುಗಳು ನಮ್ಮನ್ನು ಎರಡೂವರೆ ತಾಸು ಹಿಡಿದಿಟ್ಟುಬಿಡುತ್ತದೆ. ಕೊನೆಯಲ್ಲಿ, ಪ್ರಧಾನ ವಾಹಿನಿಯ ನಮ್ಮ ಕನ್ನಡ ಚಿತ್ರರಂಗ ತನ್ನ ಹಣ ಮತ್ತು ತಾಂತ್ರಿಕತೆಯೊಂದಿಗೆ ಅಭಿರುಚಿಯಲ್ಲಿ ಇಲ್ಲಿಂದ ಎಲ್ಲಿಗೆ ಜಾರಿಬಿಟ್ಟಿದೆ ಎಂಬ ಬೇಸರವೂ ಆಗುತ್ತದೆ. ನಮ್ಮ ಚಲನಚಿತ್ರ ಅಕಾಡೆಮಿಯೆಂಬುದೊಂದಿದ್ದರೆ ಈ ಮತ್ತು ಇಂತಹ ಮರೆತೇ ಹೋಗುತ್ತಿರುವ ಮಹತ್ವದ ಕನ್ನಡ ಚಿತ್ರಗಳ ಹೊಸ ಪ್ರತಿಗಳನ್ನು ತಯಾರಿಸುವ ಹೊಣೆ ನಿಭಾಯಿಸಬೇಕಾಗಿದೆ.



ಇನ್ನು ಚಲನಚಿತ್ರದಿಂದ ನಮ್ಮ ಸಾಹಿತ್ಯದ ಕಡೆ ಬಂದರೆ, 'ಘುಂಥಿ' ಎಂಬ ಕಾದಂಬರಿಯ ನಿಷೇಧದ ಬಗ್ಗೆ ಎರಡು ಮಾತುಗಳನ್ನು ಆಡಲೇಬೇಕಾಗುತ್ತದೆ. ಯಾವುದೇ ಸಾಹಿತ್ಯ ಕೃತಿಯನ್ನು, ಅದರ ಸಾಹಿತ್ಯಿಕ ನೆಲೆಯ ಪರಿಶೀಲನೆ ಇಲ್ಲದೆ ನಿಷೇಧಿಸುವುದು ಅನಾಗರೀಕ ಕ್ರಮವೇ ಆಗುತ್ತದೆ. ನ್ಯಾಯಾಂಗ ಕೂಡ ಈ ಘಟ್ಟದ ನಂತರ ಪ್ರವೇಶಿಸಬೇಕು. ಆದರೆ 'ಘುಂಥಿ'ಯ ವಿಷಯದಲ್ಲಿ ಇದಾಗಿಲ್ಲ ಮತ್ತು ಇದು ತಪ್ಪು ಎಂದು ಹೇಳುತ್ತಲೇ ಈ ಕೃತಿ ಒಂದು ಸಾಹಿತ್ಯ ಕೃತಿಯಾಗಿ ನಿರಾಶೆಯನ್ನಷ್ಟೇ ಅಲ್ಲ, ಜಿಗುಪ್ಸೆಯನ್ನೂ ಉಂಟು ಮಾಡುತ್ತದೆ ಎಂದೂ ಹೇಳದೆ ವಿಧಿಯಿಲ್ಲ.

ಇಂದು ನಾವು ವೈಚಾರಿಕರೆನಿಸಿಕೊಂಡವರು ವೈಚಾರಿಕತೆ ಎಂದರೆ ಎಲ್ಲವನ್ನೂ ಇಂದು ನಾವು ಯಾವುದನ್ನು 'ವಾಸ್ತವಿಕತೆ' ಎಂದು ನಂಬಿದ್ದೇವೋ ಆ ನೆಲೆಗಳಿಗೆ ಅಳವಡಿಸುವುದು ಎಂದು ಭಾವಿಸಿದಂತಿದೆ. ಸರಿದ ಕಾಲ ಮತ್ತು ಚರಿತ್ರೆಯ ಸಂಕೀರ್ಣ ನಡೆಗಳ ಪರಿಣಾಮಗಳು ಇಂತಹ ಸುಲಭ ತರ್ಕಕ್ಕೆ ಸಿಗದಂತಹವು ಎಂಬುದು ಇಲ್ಲಿ ನಮ್ಮ ಗಮನಕ್ಕೇ ಬರುವುದಿಲ್ಲ. ಒಂದು ಪುರಾಣ ಪ್ರತೀಕಕ್ಕೆ ಇಂದು ನಡೆಸುವ ಹುಡುಕಾಟಕ್ಕೆ ಸಿಗುವಂತಹ ಒಂದು ಮೂಲ ವಸ್ತುವಿರಬಲ್ಲುದು ಎಂಬ ನಂಬುವುದೇ ಮತ್ತು ಅದನ್ನು ಕಾದಂಬರಿಯೆಂಬ ಆಧುನಿಕ ಸಾಹಿತ್ಯ ರೂಪಕ್ಕೆ ಅಳವಡಿಸುವುದೇ ಅವೈಚಾರಿಕ, ಅಸಾಹಿತ್ಯಕ(ಸಾಹಿತ್ಯ ಎಂದರೆ ಒಂದು ಸೃಜನಶೀಲ ಕ್ರಿಯೆ ಎಂದು ನಂಬುವುದಾದರೆ)ಕ್ರಿಯೆ ಆಗುತ್ತದೆ. ಈ ವಿರೋಧಾಭಾಸದ ಕಲ್ಪನೆಯ ಎಲ್ಲ ರೂಕ್ಷತೆಗಳೂ, ಎಲ್ಲ ತಾಂತ್ರಿಕ ಅಧ್ವಾನಗಳೂ ಈ ಕೃತಿಯಲ್ಲಿ ಕಾಣುತ್ತವೆ. ಈ ಕೃತಿ ಪುನರ್ನಿರ್ಮಾಣ ಮಾಡಲು ಹೊರಟಿರುವ ಗಣಪತಿಯ ಪ್ರತಿಮೆಯ ಹಿಂದೆ ನೆಲ–ಮುಗಿಲುಗಳ, ದೇವ–ಮರ್ತ್ಯಗಳ, ಮನುಷ್ಯ ಚೇತನದ ಊರ್ಧ್ವ–ಅಧೋ ಚಲನೆಗಳ ಅನುಸಂಧಾನವನ್ನು ಹೇಳುವ ಹಲವು ನೆಲೆಗಳ ಸಂಕಥನಗಳೂ ಇವೆ ಎಂಬ ಪರಿವೆಯೇ ಇಲ್ಲದಂತೆ ಲೇಖಕ ಯೋಗೀಶ ಮಾಸ್ತರ್ ತಮ್ಮ ಅಪಾರ ಓದು ಮತ್ತು ಶ್ರಮವನ್ನು ಇಲ್ಲಿ ವಿವಾದ ಸೃಷ್ಟಿಗೆಂದೇ ಏಕಮುಖ ವಾದ ಕಟ್ಟಲು ವ್ಯರ್ಥ ಮಾಡಿದ್ದಾರೆ ಎಂದೆನ್ನಿಸದಿರದು.

ಕೊನೆಯಲ್ಲಿ ಒಂದು ಮಾತು: ಈ ಬಾರಿ ಹಲವೆಡೆ ಗಣಪತಿ ಮೆರವಣಿಗೆಗಳು ಮೋದಿ ಪರ ಆರ್ಭಟಗಳ ಮೆರವಣಿಗೆಗಳಾಗಿ ಪರಿವರ್ತಿತವಾಗಿರುವುದನ್ನು ನೋಡಿದರೆ, ಗಣಪತಿಯನ್ನು ಕುರಿತ ಈ ಕೃತಿಯಲ್ಲಿನ ನಿರೂಪಣೆ ಸರಿಯಿದ್ದರೂ ಇರಬಹುದೆಂಬ ಅನುಮಾನ ಯಾರಿಗಾದರೂ ಹುಟ್ಟಬಹುದು.

–ಡಿ.ಎಸ್. ನಾಗಭೂಷಣ

## ಪುಸ್ತಕಾವಲೋಕನ

ಪು: **ಗಾಂಧೀ ಹತ್ಯೆ ಮತ್ತು ನಾನು** ಲೇ: **ಗೋಪಾಲ ಗೋಡ್ಸೆ** ಅನು: ಮಾರ್ತಾಂಡ ಲಿಂಗೋ ಕುಲಕರ್ಣಿ ಪ್ರ: ಎಂ.ಎಲ್. ಕುಲಕರ್ಣಿ, ಬೆಂಗಳೂರು ಪು: ೩೮೪ ಬೆಲೆ: ರೂ. ೧೫೦/-

# ಗಾಂಧಿ 'ವಧೆ'ಯ ಒಂದು ವಿಕ್ಷಿಪ್ತ ಕಥೆ

ಧರ್ಮವೆನ್ನುವುದು ಮಾನವ ನಿರ್ಮಿತಿ. ಹಾಗಾಗಿ ಯಾವ ಧರ್ಮವೂ ಪರಿಪೂರ್ಣವಲ್ಲ – **ಗಾಂಧಿ**




**ಗಾ**ಂಧಿಯನ್ನು ಹತ್ಯೆಗೈದ ನಾಥೂರಾಮ ಗೋಡ್ಸೆಯ ಅಣ್ಣ ಗೋಪಾಲಗೋಡ್ಸೆ ಬರೆದಿರುವ ಈ ಪುಸ್ತಕ, ಈ ಹತ್ಯೆಯನ್ನು ತಾವು ನಂಬಿದಂತಹ ಹಿಂದೂ ರಾಷ್ಟ್ರವಾದಿ ತತ್ವಗಳ ಆಧಾರದ ಮೇಲೆ ಸಮರ್ಥಿಸುವ ಒಂದು ಭಂಡ ಪ್ರಯತ್ನವಾಗಿದೆ. ರಾಷ್ಟ್ರೋತ್ಥಾನ'ದ'ವ'ರು ಮುದ್ರಿಸಿಕೊಟ್ಟಿರುವ ಈ ಪುಸ್ತಕ ತನ್ನ ಮೇಲಿನ ನಿಷೇಧ ರದ್ದಾದ ನಂತರ; ಈ ದೇಶದಲ್ಲಿ ಇನ್ನೂ ಸಾಕಷ್ಟು ಸಂಖ್ಯೆಯಲ್ಲಿ ಉಳಿದು, ಆರ್ಥಿಕ ಉದಾರೀಕರಣದ ಈ ಯುಗದಲ್ಲಿ ಅಪಾರ ಸಂಖ್ಯೆಯಲ್ಲಿ ಬೆಳೆಯುತ್ತಿರುವ ಸಹಮನಸ್ಕರ ಸಹಾನುಭೂತಿಯ ಬೆಂಬಲದೊಂದಿಗೆ ಮರುಮುದ್ರಣಗಳನ್ನು ಕಾಣುತ್ತಾ ನಮ್ಮ ಭೈರಪ್ಪನವರ ಪುಸ್ತಕಗಳೊಂದಿಗೆ ಸ್ಪರ್ಧಿಸುತ್ತಿದೆ. ಮಾನವ ಹತ್ಯೆಯೊಂದನ್ನು ಮಧ್ಯಯುಗೀನ ತರ್ಕದೊಂದಿಗೆ ಸಮರ್ಥಿಸುವ ಈ ಪುಸ್ತಕದಲ್ಲಿ ವಿ.ಡಿ. ಸಾವರ್ಕರರ ಜೀವನದ ವೈಭವೀಕರಣದೊಡನೆ ಗೋಪಾಲ ಗೋಡ್ಸೆಯ ಸಂಸಾರದ ಸುಖ ದುಃಖಗಳ ನಿರೂಪಣೆಯೂ ತುಂಬಿಕೊಂಡು ಹತ್ಯೆಯ ಪಿತೂರಿ ಮತ್ತು ವಿಚಾರಣೆಯ ದೃಶ್ಯಗಳು ಭಾವಾವೇಶದ ಸ್ಪರ್ಶ ಪಡೆದು 'ಹತ್ಯೆ'ಯು ಪುರಾಣ ಸದೃಶವಾದ 'ವಧೆ'ಯ ರೂಪ ತಾಳಿಬಿಡುತ್ತದೆ.

ಮುಖ್ಯವಾಗಿ ಈ ಪುಸ್ತಕದಲ್ಲಿ ಗೋಪಾಲ ಗೋಡ್ಸೆ ಮಂಡಿಸುವ ವಾದ ಸರಣಿ ಹೀಗಿದೆ:

೧. ಗಾಂಧಿ ಹತ್ಯೆ ಒಂದು ಷಡ್ಯಂತ್ರವಲ್ಲ.

೨. ಗಾಂಧಿ ಹತ್ಯೆಯನ್ನು ನಡೆಸಿದ್ದು ನಾಥೂರಾಮ ಗೋಡ್ಸೆಯೊಬ್ಬನೇ.

೩. ಗಾಂಧಿ ಹತ್ಯೆಯಲ್ಲಿ ಭಾಗಿ ಎಂದು ನೇಣಿಗೊಳಗಾದ ಆಪ್ಟೆ ಮತ್ತು ಜೀವಾವಧಿ ಶಿಕ್ಷೆಗೊಳಗಾದಕರಕರೆ, ಪಹವಾ, ಬಡಗೆ, ಗೋಪಾಲ ಗೋಡ್ಸೆ ಹಾಗೂ ಬಿಡುಗಡೆಗೊಳಗಾದ ಸಾವರಕರ, ಪರಚುರೆ ಮತ್ತು ಶಂಕರ ಕಿಷ್ಟಯ್ಯಾ ಇವರುಗಳು ಸಂಚಿನಲ್ಲಿ ಭಾಗೀದಾರರಲ್ಲ.

೪. ನಾಥೂರಾಮನನ್ನು ಹೊರತುಪಡಿಸಿ ಉಳಿದವರೆಲ್ಲರ ಮೇಲೆ ಸರಕಾರ ತನ್ನ ಅಭಿಯೋಜಕರ ಮೂಲಕ ಷಡ್ಯಂತ್ರವನ್ನು 'ಸಿದ್ಧ'ಪಡಿಸಿತು ಮತ್ತು ಹೆಚ್ಚಿನ ಮಟ್ಟಿಗೆ ಯಶಸ್ವಿಯೂ ಆಯಿತು.

ನಾಥೂರಾಮ್ ಗೋಡ್ಸೆ ಗಾಂಧಿಯನ್ನು 'ವಧಿಸುವುದಕ್ಕೆ' ಮುಖ್ಯವಾದ ಕಾರಣಗಳನ್ನು ಗೋಪಾಲ ಗೋಡ್ಸೆ ಪಟ್ಟಿ ಮಾಡುವುದು ಹೀಗೆ:

೧. ದೇಶ ವಿಭಜನೆಯನ್ನು ಕಾಂಗ್ರೆಸ್ಸು ಒಪ್ಪುವುದಾದರೆ ಅದು ನನ್ನ ಮೃತಶರೀರದ ಮೇಲೆಯೇ ಹಾಗೆ ಮಾಡಬೇಕಾಗುತ್ತದೆ ಎಂದ ಗಾಂಧಿ, ಹಾಗೆ ಮಾಡದೆ ದೇಶ ವಿಭಜನೆಗೆ ಒಪ್ಪಿದ್ದು.

೨. ಪಾಕಿಸ್ತಾನಕ್ಕೆ ಭಾರತ ಕೊಡಬೇಕಾದ ೫೫ ಕೋಟಿ ರೂಪಾಯಿಗಳ ನಿಧಿಯನ್ನು ಕೊಡಲು ನಿರಕರಿಸಿದಾಗ ಗಾಂಧಿ ಉಪವಾಸ ನಡೆಸಿ ಅದನ್ನು ಕೊಡಿಸಿದ್ದು.

೩. ಪಾಕಿಸ್ತಾನದಲ್ಲಿ ನಡೆದ ಹಿಂದೂಗಳ ಮಾರಣ ಹೋಮಕ್ಕೆ ಪ್ರತಿಯಾಗಿ ಭಾರತದ ದೆಹಲಿ, ಪಂಜಾಬ್, ಕೋಲ್ಕತ್ತಗಳಲ್ಲಿ ಮುಸ್ಲಿಮರ ಹತ್ಯೆ ನಡೆದಾಗ ಗಾಂಧಿ ಭಾರತೀಯ ಮುಸ್ಲಿಮರ ರಕ್ಷಣೆಗೆ ಧಾವಿಸಿದ್ದು

೪. ಅಂತಿಮವಾಗಿ ಗಾಂಧಿಯ 'ಮುಸ್ಲಿಂ ತುಷ್ಟೀಕರಣ ನೀತಿ'ಯಿಂದಾಗಿ ಇಡಿಯ ಹಿಂದೂ ಧರ್ಮವೇ ಗಂಡಾಂತರಕ್ಕೆ ಸಿಲುಕಿರುವುದು.

ಗೋಪಾಲ ಗೋಡ್ಸೆಯ ಪುಸ್ತಕದ ಈ ಸಂಗ್ರಹಿತ ಅಂಶಗಳನ್ನು ಗಮನಿಸಿದಾಗ ತಕ್ಷಣಕ್ಕೆ ಅನ್ನಿಸುವುದೇನೆಂದರೆ ಮೇಲಿನ ಈ ಎಲ್ಲ ರಾಜಕೀಯ ಸಂಗತಿಗಳನ್ನು ಗೋಡ್ಸೆ ಬಹಳ ಮುಗ್ಧವಾಗಿ 'ಅಸಮಸ್ಯಾತ್ಮಕ'ವಾಗಿಯೇ ಪರಿಭಾವಿಸಿಕೊಳ್ಳುತ್ತಾನೆ. ಇವೆಲ್ಲವೂ 'ರಾಜಕೀಯ'ದ ಮತ್ತು 'ರಾಜ ನೈತಿಕತೆಯ' ಸಮಸ್ಯೆಗಳು ಎಂದು ಆತನಿಗೆ ಅನ್ನಿಸುವುದೇ ಇಲ್ಲ. ಗಾಂಧಿ ಒಪ್ಪಲಿ ಬಿಡಲಿ, ವಿಭಜನೆಯನ್ನು ವಿರೋಧಿಸಿ ಗಾಂಧಿ ಮರಣಿಸಿದರೂ ಭಾರತ ವಿಭಜನೆಯನ್ನು ತಪ್ಪಿಸಲಾಗದು ಎಂಬ ಸರಳ ಸತ್ಯವೂ ನಾಥೂರಾಮ್‌ಗೆ ಹೊಳೆಯದಿರುವುದು ವಿಚಿತ್ರವಾಗಿದೆ. ಪಾಕಿಸ್ತಾನದಲ್ಲಿದ್ದ ನಿರಪರಾಧಿ ಹಿಂದೂ ಮತ್ತು ಸಿಖ್ಖರ ಹತ್ಯೆಗೆ ಪ್ರತಿಯಾಗಿ ಭಾರತದಲ್ಲಿ ಮುಸ್ಲಿಮರ ಹತ್ಯೆ ನಡೆಸುವುದು ಅಮಾನುಷ ಮತ್ತು ಅನೈತಿಕ ಎಂದು ವಾದಿಸುವ ಗಾಂಧಿಯನ್ನು ಮುಗಿಸಬೇಕೆನ್ನುವ ಗೋಡ್ಸೆಯ ತರ್ಕಕ್ಕೆ ಕೊನೆಗೆ ಗಾಂಧೀ ಹತ್ಯೆಗೆ ಪ್ರತಿಯಾಗಿ ಮಹಾರಾಷ್ಟ್ರದಲ್ಲಿ ನಡೆದ ಹಿಂಸಾಚಾರ ಮಾತ್ರ 'ಘೋರ'ವಾಗಿ ಕಾಣುವುದು ಚಾರಿತ್ರಿಕ ವಿರೋಧಾಭಾಸವಾಗಿದೆ. ಗೋಡ್ಸೆ ಪ್ರತಿಪಾದಿಸುವ ತತ್ತ್ವದ ವಿರೋಧಾಭಾಸ ಪ್ರಕಟಗೊಳ್ಳಲು ಕಾಲ ಕಾಯುವುದೇ ಇಲ್ಲ.

ಈ ಪುಸ್ತಕದಲ್ಲಿ ಒಂದೆಡೆ ನಾಥೂರಾಮ್‌ಗೋಡ್ಸೆ ತಾನು ನಡೆಸಿದ ಗಾಂಧಿಯ ಕಗ್ಗೊಲೆಯನ್ನು ಅನೈತಿಕ ಎಂದು ಕರೆದ ನ್ಯಾಯಾಂಗ ವ್ಯವಸ್ಥೆಗೆ, ನೈತಿಕತೆಯನ್ನು ನಿರ್ಧರಿಸುವುದು ನೀವಲ್ಲ; ಅದಕ್ಕೆ ಧರ್ಮಸಭೆ ಇದೆ ಎಂದು ಸೂಚಿಸುತ್ತಾನೆ ಮತ್ತು ಮುಂದುವರಿದು ತಾನು ಮಾಡಿದ ಹತ್ಯೆಯು ಸರಿಯಾದುದೇ ಅಥವಾ ಇಲ್ಲವೇ ಎಂಬುದನ್ನು ಕುರಿತು ನಿರ್ಣಯ ನೀಡಲು ಅದರ ಪಾರ್ಶ್ವಭೂಮಿಯತ್ತ ಗಮನ ಹರಿಸಲು ನ್ಯಾಯಾಲಯಕ್ಕೆ ಅದರ ಕೆಲವು ತಾಂತ್ರಿಕ ಮಿತಿಗಳಿಂದಾಗಿ ಸಾಧ್ಯವಿಲ್ಲ. ತನ್ನಿಂದ ನಡೆದ ಹತ್ಯೆಯ ತಾತ್ವಿಕ ಹಿನ್ನೆಲೆಯಂತೂ ಅತ್ಯಂತ ವಿಶಾಲ ಮತ್ತು ಧರ್ಮಸೂಕ್ಷ್ಮಗಳಿಂದ ಕೂಡಿದ್ದು. ಅದು ನ್ಯಾಯಾಲಯದ ಸೀಮಿತ ವೈಚಾರಿಕ ವ್ಯಾಪ್ತಿಯಲ್ಲಿ ಬರುವುದು ಸಾಧ್ಯವಿಲ್ಲ ಎಂದು ವಾದಿಸುತ್ತಾನೆ! ಅದರೆ ಇದೇ ಗೋಡ್ಸೆ, ತಾನು ಕೊಂದ ವ್ಯಕ್ತಿಗೂ ಇಡೀ ಮಾನವತೆಯ ಬಗ್ಗೆ ವಿಶೇಷವಾದ ಕಕ್ಕುಲಾತಿ ಇತ್ತು; ಆತನ ಹೃದಯ ಮುಸ್ಲಿಮರಿಗೆ ಮಾತ್ರವಲ್ಲ, ಭಾರತವನ್ನು ತಮ್ಮ ವಸಾಹತು ಮಾಡಿಕೊಂಡು ಅದನ್ನು ಶೋಷಿಸಿದ ಆಂಗ್ಲರ ಬಿಡುಗಡೆಗೂ ಹಾರೈಸಿತ್ತು; ಆತನ ಜೀವಕರುಣೆಯನ್ನು ಎಲ್ಲೂ, ಯಾರಿಗೂ ಸೀಮಿತಗೊಳಿಸಲು ಸಾಧ್ಯವಿಲ್ಲ; ಆತ ಪ್ರತಿಪಾದಿಸುವ ತತ್ತ್ವದ ಹಿನ್ನೆಲೆಯೂ ಬಹಳ ವಿಶಾಲವಾದುದು; ಅದನ್ನು ನನ್ನ ನಂಬಿಕೆಗಳ ಮಿತಿಗಳಿಂದಾಗಿ ಅರ್ಥ ಮಾಡಿಕೊಳ್ಳಲಾಗದಿರಬಹುದು ಎಂಬುದು ಈ ನಂಬಿಕೆಗಳ ಹಿಂದಿನ ಸರ್ವಜ್ಞ ಗರ್ವದಿಂದಾಗಿಯೋ ಏನೋ ಈ ಗೋಡ್ಸೆಗಳಿಗೆ ಹೊಳೆಯುವುದೇ ಇಲ್ಲ!

ಇಂತಹ ಹತ್ತು-ಹಲವು ತಾತ್ತ್ವಿಕ ವಿರೋಧಾಭಾಸಗಳ ವಿಕ್ಷಿಪ್ತ ವಾದಸರಣಿಗಳ ಈ ಬರವಣಿಗೆ ಅಪ್ರಬುದ್ಧ ರಾಜಕೀಯ ತಿಳುವಳಿಕೆಯ ಹುಂಬರನ್ನು ಅಪಾಯಕಾರಿ ಪರಿಣಾಮಗಳತ್ತ ದಿಕ್ಕು ತಪ್ಪಿಸಬಲ್ಲುದಾಗಿದೆ. ಈ ಪುಸ್ತಕದಲ್ಲಿ ಬರುವ "ಮನುಷ್ಯನಲ್ಲಿ ಪ್ರತೀಕಾರದ ಭಾವನೆಯು ಇದ್ದೇ ಇರುತ್ತದೆ. ಅದಕ್ಕೆ ದಿಕ್ಕು ತೋರಿಸುವ ಬುದ್ಧಿವಂತ ನಾಯಕನ ಅಗತ್ಯವಿದೆ. ಇದು ದೊರೆತರೆ ಈ ಅಸ್ಮಿತೆಯ ಬಲದ ಮೇಲೆ ಪೂರ್ತಿ ಭಾರತ ವರ್ಷದ ರಕ್ಷಣೆ ಮಾಡುವುದು ಸಾಧ್ಯವಿದೆ" ಎಂಬ ಮಾತಂತೂ ಪುಸ್ತಕ ಮುಗಿದ ಮೇಲೂ ನಮ್ಮನ್ನು ವಿಚಲಿತಗೊಳಿಸುತ್ತಲೇ ಇರುತ್ತದೆ. ಇಂತಹ ಬುದ್ಧಿವಂತ ನಾಯಕ ಎಲ್ಲಿಂದಲೋ ಉದಿಸಿ ಬರಬೇಕಾಗಿಲ್ಲ. ನಮ್ಮ ನಡುವೆಯೇ, ನಮ್ಮ ಒಳಗೆಯೇ ಹಾಯಾಗಿ ಕುಳಿತಿದ್ದಾನೆ ಎಂಬುದನ್ನು ಯೋಚಿಸಿದಾಗಲಂತೂ ಗಾಂಧಿ ಹೇಳಿದ್ದಾರೋ ಇಲ್ಲವೋ ಗೊತ್ತಿಲ್ಲ. ನಾವಂತೂ ಹೇಳಲೇ ಬೇಕಾಗಿದೆ.-'ಹೇ ರಾಮ್'.

**–ಡಾ. ನಿತ್ಯಾನಂದ ಬಿ. ಶೆಟ್ಟಿ**

**'ಹೊಸ ಮನುಷ್ಯ' ಎರಡು ವರ್ಷಗಳನ್ನು**
**ಪೂರೈಸಿರುವ ಶುಭ ಸಂದರ್ಭದಲ್ಲಿ**
**ಹಾರ್ದಿಕ ಶುಭಾಶಯಗಳು**

-ವೆಂಕಟೇಶ ಮಾಚಕನೂರು
ಮತ್ತು ಕುಟುಂಬ
ಧಾರವಾಡ

**ಹೊಸ ಮನುಷ್ಯ**'ನಿಗೆ ಹಾರ್ದಿಕ ಶುಭಾಶಯಗಳು




ಬೆಂಗಳೂರಿನಲ್ಲಿ ಕ್ಯಾಬ್‌ಗಳನ್ನು ಬುಕ್ ಮಾಡಲು
ಸಂಪರ್ಕಿಸಿ- 30600600

ಮೂರನೇ ವರ್ಷಕ್ಕೆ ಯಶಸ್ವಿಯಾಗಿ ಕಾಲಿಟ್ಟಿರುವ

**ಹೊಸ ಮನುಷ್ಯ** ಸಮಾಜವಾದಿ ಮಾಸಿಕಕ್ಕೆ

ಹಾರ್ದಿಕ ಶುಭಾಶಯಗಳು.

**–ಡಿ.ಎಸ್. ಲಲಿತಾಂಬ**

**ಮತ್ತು ಕುಟುಂಬ**

**ದೇವರಹಳ್ಳಿ (ಚನ್ನಗಿರಿ ತಾ.)**

**ತಿಂಗಳ ಸಾಲುಗಳು...**



ಎಲ್ಲ ಮನುಷ್ಯರೂ ಜನ್ಮತಃ ಸಮಾನರು ಮತ್ತು ಸ್ವತಂತ್ರರು ಎನ್ನುವುದು ನಿಜವಾದ ಅರ್ಥದಲ್ಲಿ ನಿಸರ್ಗ ನಿಯಮವೇನಲ್ಲ. ಎಲ್ಲರೂ ಹುಟ್ಟುತ್ತಲೇ ಬುದ್ಧಿಮತ್ತೆಯಲ್ಲಿ ಸಮಾನರೇನಲ್ಲ; ಆದರೆ ಇತರರಿಗಿಂತ ಹೆಚ್ಚು ಬುದ್ಧಿವಂತರಾದವರು ಈ ಸಮಾನತೆಯ ತತ್ವವನ್ನು ತಮಗಿಂತ ಕಡಿಮೆ ಬುದ್ಧಿವಂತರ ಸೇವೆಗೆ ಬಳಸಿದಾಗ ಈ ತತ್ವಕ್ಕೆ ಒಂದು ಸಮರ್ಥನೆ ದೊರೆತೀತು.

**-ಮಹಾತ್ಮಾ ಗಾಂಧಿ**

**ಪತ್ರಿಕೆಗೆ ಶುಭವನ್ನು ಕೋರುವ...**

**– ಬಿ.ಸುರೇಶ**

**ಡಾ. ವಿಜಯಾ**

HOSA MANUSHYA, a kannada monthly solely owned, edited, published and printed by D. S. Nagabhushana, at HIG-5, Kallahally Extn.,Vinoba Nagara, SHIVAMOGGA-577204. Printed at Ila Mudrana, Bengaluru-560 026 Ph.: 080-26757159

**Regd. News Paper** RNI No. KARKAN/2012/47568
Rgd No. KA/SK/SMG-1209/2013-15

ಇವರಿಗೆ \ To

If undelivered, please return to D.S. Nagabhushana, Editor,
'Hosa Manushya', 'HIG-5, 'Nudi', Kallahalli Extension,
Vinoba Nagara, Shivamogga -577204 (Karnataka)